Mr. SPEAKER.—Then it is all right; the number may be made as 32. I withdraw the word if it has hurt the Member.

Sri C. J. MUCKANNAPPA (Gubbi).—Sir, several members on the opposite side came just now. Even the Chief Minister was not here at that time. There were very few members and not as many as they are just now. The doors should have been closed.

Mr. SPEAKER.—Sri Muckannappa, I have already said that it is not usually the case when I want to take the votes by standing. If I wanted to take the votes by division by another method, namely, by appointing tellers, I would have rung the bell; so, there was no need. Members came in from this side and that side. There was nothing for shutting the doors at all.

The next resolution may be moved.

Sri H. S. RUDRAPPA.—There are some more small items on the agenda.

Mr. SPEAKER.—Yes.

PAPER LAID ON THE TABLE

Sri M. P. PATIL (Minister for Revenue).—Sir, I beg to lay on the Table the Madras Buildings (Lease and Rent Control) Continuance Ordinance, 1957.

MYSORE LOTTERIES AND PRIZE COMPETITION CONTROL AND TAX (AMENDMENT) BILL, 1957.

Introduction.

Sri H. S. RUDRAPPA (Minister for Agriculture).—Sir, I beg to introduce the Mysore Lotteries and Prize Competition Control and Tax (Amendment) Bill, 1957, published in the *Mysore Gazette* under rule 48 of the Rules of Procedure and Conduct of Business in the Legislative Assembly.

Mr. SPEAKER.—The Mysore Lotteries and Prize Competition Control and Tax (Amendment) Bill, 1957, is introduced.

Member's Representation

Sri C. J. MUCKANNAPPA (Gubbi).—Sir though it does not amount exactly to a breach of privilege, I think, we are obstructed from getting into this House by a baricade in front of the Assembly Hall. We have to come crawling under the structure. I request the Chair to see that the work is at least stopped while the House is sitting. After the sessions are over, they may carry on with the work. Yesterday, while entering into the Hall, because work was going on near the entrance, an iron piece struck my glasses and then broke.

Mr. SPEAKER.—There are other entrances for Hon'ble Members to come into the Hall; anyway, I will look into the matter.

ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಶ್ರೀ ಮುಕ್ಕಣ್ಣಪ್ಪನವರು ಹೇಳಿದ್ದನ್ನ ನಾನು ಸಮರ್ಥಿಸುತ್ತೇನೆ. ನಾನು ಒಳಕ್ಕೆ ಬರುವಾಗಲೂ ಸ್ವಲ್ಪ ಅಡಚಣೆ ಆಯಿತು. ಆದ್ದರಿಂದ ಅಸೆಂಬ್ಲಿ ನಡೆಯುವ ಕಾಲದಲ್ಲಿ ಮೈನ್ ಗೇಟ್ ಮುಚ್ಚಕೂಡದು. ಹಾಗೆ ಮಾಡಿದರೆ ಒಳಕ್ಕೆ ಬರುವವರಿಗೆ ಅಡಚಣೆ ಮಾಡಿದ ಹಾಗಾಗುತ್ತದೆ. ಅದು ನ್ಯಾಯವಲ್ಲ. ಹೌಸ್ ನಡೆಯುತ್ತಾ ಇರುವ ಕಾಲದಲ್ಲಿ ಕೆಲಸ ಮಾಡವುದು ಉಚಿತವಲ್ಲವೆಂದು ಕಾಣುತ್ತದೆ. ಸರ್ಕಾರದವರು ಅಡಚಣೆ ಮಾಡಿರುವುದನ್ನು ನೋಡಿದರೆ ಸದಸ್ಯರುಗಳ ಆತ್ಮಗೌರವಕ್ಕೆ ಕುಂದಕ ತಂದಹಾಗಾಗಿದೆ. ಈ ಹೌಸ್‌ನಲ್ಲಿ ಕುಳಿತುಕೊಳ್ಳುವುದಕ್ಕೆ ಅಡಚಣೆ ಮಾಡಿದಂತಾಗಿದೆ. ಆದ್ದರಿಂದ ಹೌಸ್ ನಡೆಯುವ ಕಾಲದಲ್ಲಿ ಕೆಲಸ ಮಾಡುವುದನ್ನು ನಿಲ್ಲಿಸಿ ಸದಸ್ಯರುಗಳಿಗೆ ಒಳಕ್ಕೆ ಬರುವುದಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ಹೌಸ್ ಆದನಂತರ ಕಾರ್ಯಕಲಾಪಗಳನ್ನು ಮುಂದುವರಿಸಬಹುದು. ಅದರಿಂದ ಏನೂ ಅಭ್ಯಂತರವಿಲ್ಲ.

ಅಧ್ಯಕ್ಷರು.—'I will look into the matter' ಎಂದು ಮೊದಲೇ ಹೇಳಿದ್ದೇನೆ.

NON-OFFICIAL RESOLUTIONS

No. 2. Equalization of Central and State Pay Scales.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಮಾನ್ಯ ಸಭಾಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಪಡೆದು ಈ ದಿವಸ ಸಭೆಯಮುಂದೆ ನನ್ನ ನಿರ್ಣಯವನ್ನು ಮಂಡಿಸುತ್ತಿದ್ದೇನೆ. ಆ ನನ್ನ ನಿರ್ಣಯ ಈ ರೀತಿ ಇದೆ.—

"ರಾಜ್ಯ ಸರ್ಕಾರಗಳ ಹಾಗೂ ಕೇಂದ್ರ ಸರ್ಕಾರದ ಸರ್ವಿಸುಗಳಲ್ಲಿಯ ಸಂಬಳದ ಸ್ಕೇಲುಗಳಲ್ಲಿಯ ವ್ಯತ್ಯಾಸವು ಅತೀವ ಅಸಂತೋಷವನ್ನುಂಟುಮಾಡಿರುವುದರಿಂದ, ಈ

ಎರಡು ಸರ್ವಿಸ್ಸುಗಳ ಸಂಬಳದ ಸ್ಕೇಲುಗಳು ನಮ್ಮ ರಾಜ್ಯದಲ್ಲಿ ಏಕರೂಪತೆಯನ್ನು ಹೊಂದುವಂತೆ ಮಾಡುವ ಬಗ್ಗೆ ಉಪಾಯ ಯೋಜನೆಗಳನ್ನು ಕುರಿತು ಆರು ತಿಂಗಳೊಳಗಾಗಿ ವರದಿ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ.”

ಸಭಾಧ್ಯಕ್ಷರೇ, ಈ ಒಂದು ನಿರ್ಣಯವನ್ನು ಸಭೆಯ ಮುಂದೆ ಮಂಡಿಸುವಾಗ ಅದರ ಆಗು ಹೋಗುಗಳನ್ನು ಪೂರ್ಣವಾಗಿ ಮನದಟ್ಟು ಮಾಡಬೇಕು. ಈ ಪ್ರಶ್ನೆ ಕೇವಲ ರಾಜ್ಯ ಸರ್ಕಾರದ ಒಂದು ಮಿತಿಗೆ ಮೀರಿದ್ದರೂ ಸಹ ವಿಚಾರವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸುವುದಕ್ಕೆ ಸರಿಯಾದ ರೀತಿಯಲ್ಲಿ ಅರಿಕೆಮಾಡಿಕೊಳ್ಳುವುದಕ್ಕೆ ನಮ್ಮ ಸರ್ಕಾರಕ್ಕೆ ಸಾಕಾದಷ್ಟು ಶಕ್ತಿ ಇದೆಯೆಂದು ಅರಿತುಕೊಂಡು ಈ ನಿರ್ಣಯವನ್ನು ಇಲ್ಲಿ ಮಂಡಿಸುತ್ತಿದ್ದೇನೆ. ಇದರ ವಿಷಯವಾಗಿ ಈಗ ಸುಮಾರು ಐದಾರು ವರ್ಷಗಳಿಂದಲೂ ಒಂದೇ ಸಮನಾಗಿ ಈ ಸಭೆಯಲ್ಲಿ ನಿರ್ಣಯಗಳು ಬರುತ್ತಿವೆ. ಶ್ರೀಯುತ ಚನ್ನಬಸಪ್ಪನವರೂ ಮತ್ತು ನನ್ನ ಮಾನ್ಯ ಸ್ನೇಹಿತರೆಲ್ಲರೂ ಇದಕ್ಕೆ ಪೂರ್ಣವಾದ ಬೆಂಬಲವನ್ನು ಕೊಟ್ಟಿದ್ದಾರೆ. ಮಂತ್ರಿಗಳೂ ಸಹ ಈ ವಿಷಯವನ್ನು ಬಹಳ ಸಹಾನುಭೂತಿಯಿಂದ ತೀರ್ಮಾನ ಮಾಡೋಣ ಮತ್ತು ಇದಕ್ಕೆ ಸಾಕಾದಷ್ಟು ಬೆಂಬಲವನ್ನು ಕೊಡೋಣವೆಂಬ ಭರವಸೆಯನ್ನು ಕೊಟ್ಟಿದ್ದಾರೆ. ಈಗ ನಾವು ಈ ದೇಶದ ಅಧಿಕಾರಿಗಳ ಮತ್ತು ಸರ್ಕಾರದ ನೌಕರರ ಸಂಬಳವನ್ನು ನಿಗದಿಮಾಡುವಾಗ ಒಂದು ಮಿತಿಯಿಲ್ಲದೇ ಹೋದರೆ ನಾವು ಈ ದೇಶದ ರಾಜ್ಯಭಾರವನ್ನು ಸೋಷಿಯಲಿಸ್ಟ್ ಪ್ಯಾಟರನ್ ಆಫ್ ಸೊಸೈಟಿಯ ಆಧಾರದಮೇಲೆ ಸ್ಥಾಪಿಸುತ್ತೇವೆಂಬ ಘೋಷಣೆಗೆ ಅನುಗುಣವಾಗಿರುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಲು ನಾನು ನಿಂತಿದ್ದೇನೆ. ಈ ದೇಶದಲ್ಲಿ ಕಮ್ಯೂನಿಸ್ಟ್ ಸರ್ಕಾರ ಮತ್ತು ಕಾಂಗ್ರೆಸ್ ಸರ್ಕಾರ ಎರಡೂ ಕೆಲಸ ಮಾಡುತ್ತಿವೆ. ಪಾಶ್ಚಾತ್ಯ ಮತ್ತು ಪೂರ್ವ ದೇಶಗಳು ಅವರೆ ಚೈನಾವಗೈರೆ ಪ್ರದೇಶಗಳನ್ನು ತೆಗೆದುಕೊಂಡು ಅಲ್ಲಿನ ಅಧಿಕಾರವರ್ಗದ ಸಂಬಳ ಸಾರಿಗೆಗಳನ್ನು ನಮ್ಮ ಇಂಡಿಯೂ ದೇಶದ ಅಧಿಕಾರೀ ವರ್ಗದವರ ಸಂಬಳ ಸಾರಿಗೆಗಳೊಂದಿಗೆ ಹೋಲಿಕೆ ಮಾಡಿ ನೋಡಿದರೆ ಬಹಳ ಅಂತರವಿದೆ. ಚೈನಾ ದೇಶದ ಒಂದು ಸ್ಯಾಲರಿ ಸ್ಟ್ರಕ್ಚರ್ 1956ನೆಯ ಇಸವಿಯಲ್ಲಿ ಎಷ್ಟಿತ್ತೆಂಬುದನ್ನು ತಮ್ಮ ಅವಗಾಹನೆಗೆ ತರಲಿಚ್ಛಿಸುತ್ತೇನೆ. ಅಲ್ಲಿನ ಚೇರ್‌ಮೆನ್ ಆಫ್ ದಿ ರಿಪಬ್ಲಿಕ್ ಅವರಿಗೆ 1,200 ರೂಪಾಯಿಗಳ ಸಂಬಳ. ಅದೇ ರೀತಿಯಲ್ಲಿ ಅಲ್ಲಿನ ಹೈಕೋರ್ಟ್ ಮತ್ತು ಇತರ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಒಂದುಸಾವಿರ ರೂಪಾಯಿಗಳ ಮೇಲ್ಪಟ್ಟು ಸಂಬಳವಿಲ್ಲ. ಆದರೆ ಇಂಡಿಯಾ ದೇಶದ ಐ. ಎ. ಎಸ್. ಮತ್ತು ಐ. ಪಿ. ಎಸ್. ಆದ ಮುಖ್ಯಾಧಿಕಾರಿಗಳಿಗೆ ಸುಮಾರು ಮೂರು, ಮೂರುವರೆ ಸಾವಿರ ರೂಪಾಯಿಗಳ ಸಂಬಳ, ಇಲ್ಲಿನ ಹೈಕೋರ್ಟ್ ಜಡ್ಜಿಗೆ ಸುಮಾರು ನಾಲ್ಕೈದು ಸಾವಿರ ರೂಪಾಯಿಗಳ ಸಂಬಳವಿದೆ. ಇದರಲ್ಲಿ ಒಂದು ವಿಷಯವನ್ನು ದೀರ್ಘವಾಗಿ ಆಲೋಚನೆಮಾಡಬೇಕು. ಅಂತರ ಏನಿದೆ ಅದನ್ನು ಸರಿಪಡಿಸಬೇಕು. ನಮ್ಮ ದೇಶದ ಜೀವನಮಟ್ಟ ನೋಡಿಕೊಂಡು ಅವರಿಗೆ ಸಂಬಳವನ್ನು ಕೊಡಬೇಕಾಗಿದೆ. ಸಿಮ್ಲಾ ದೇಶವನ್ನು ತೆಗದುಕೊಂಡರೆ, ಅದು ಚಳಿಗಾಲದ ಪ್ರದೇಶ. ಅಲ್ಲಿನ ಜೀವನಮಟ್ಟ ಬಹಳ ಹೆಚ್ಚು ಇರುತ್ತದೆ. ಅಂತಹ ಪ್ರದೇಶದಲ್ಲಿ ಅಧಿಕಾರವರ್ಗದವರಿಗೆ ಸಂಬಳ ಸಾರಿಗೆಗಳನ್ನು ಎಷ್ಟು ಹೆಚ್ಚಿಗೆ ಕೊಡುತ್ತಾರೆ ಎಂದರೆ, ಅವರ ಸಂಬಳಗಳಲ್ಲಿ ಸುಮಾರು 100 ರೂಪಾಯಿಗಳ ಅಂತರವಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ಇಲ್ಲಿ ಅದಕ್ಕಿಂತಲೂ ಹೆಚ್ಚಿನ ಅಂತರವಿರುವ ಸಂದರ್ಭದಲ್ಲಿ ಈ ಒಂದು ಪ್ರಜಾಪ್ರಭುತ್ವದಲ್ಲಿ ಸಮತಾವಾದ ಸಮಾಜ ಸ್ಥಾಪನೆ ಮಾಡಲು ಸಾಧ್ಯವೇ ಎಂಬುದನ್ನು ಎಲ್ಲರೂ ಆಲೋಚನೆ ಮಾಡಬೇಕು. ಇವತ್ತಿನ ದಿವಸ ಪ್ರಜಾಪ್ರಭುತ್ವದಲ್ಲಿ ಆ ರೀತಿಯ ಅಂತರಕ್ಕೆ ಅವಕಾಶವಿರುವ ಹಾಗಿಲ್ಲ. ಯಾರು ಬೇಕಾದರೂ ಮಂತ್ರಿಗಳಾಗುವ ಸಂದರ್ಭವಿದೆ. ಆದ್ದರಿಂದ ಈ ಒಂದು ಜವಾಬ್ದಾರಿ ಅವರಿಗೆ ಗೊತ್ತಿಲ್ಲದೇ ಇಲ್ಲ. ಎಷ್ಟೋ ಸಂದರ್ಭಗಳಲ್ಲಿ ಮಂತ್ರಿಗಳಾಗಿರತಕ್ಕವರೂ ಮತ್ತು ಮಂತ್ರಿಗಳಾಗಿಲ್ಲದೇ ಇರತಕ್ಕವರೂ ವೇದಿಕೆಗಳ ಮೇಲೆ ಮತ್ತು ಈ ಮಾನ್ಯ ಸಭೆಯಲ್ಲಿ ಸಂಬಳ ಸಾರಿಗೆಗಳಲ್ಲಿರುವ ಈ ಅಂತರವನ್ನು ಮುಂದುವರಿಸಿಕೊಂಡು ಹೋಗುವುದು ದೇಶಕ್ಕೇ ಒಳ್ಳೆಯದಲ್ಲ ಅದರಿಂದ ಯಾವ ಒಂದು ಒಳ್ಳೆಯ ಪರಿಣಾಮವನ್ನುಂಟುಮಾಡುವುದಕ್ಕೆ ಸಾಧ್ಯವಿಲ್ಲ, ಒಂದು ಯೂನಿಫಾರ್ಮಿಟಿಗೆ ತರುವುದು ಯೋಗ್ಯವೆಂದು ಹೇಳಿದ್ದಾರೆ. ಶ್ರೀಯುತ ಕಡಿದಾಳ್ ಮಂಜಪ್ಪನವರು ಈ ಬಗ್ಗೆ ಸರಿಯಾದ ಒಂದು ವ್ಯವಸ್ಥೆ ಮಾಡಬೇಕೆಂದು ಅವರು ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಹೇಳಿದರು. ಅದು ನನಗೆ ಚೆನ್ನಾಗಿ ಜ್ಞಾಪಕವಿದೆ. ಅದನ್ನು ಪುಷ್ಟೀಕರಿಸಿ ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ಮಾತನಾಡಿದ್ದಾರೆ. ಈ ತಾರತಮ್ಯದ ವಿಷಯದಲ್ಲಿ ನಾವು ಬಹು ದೀರ್ಘವಾಗಿ ಆಲೋಚನೆ ಮಾಡಬೇಕು. ಅನೇಕ ಕಡಿಮೆ ದರ್ಜೆಯ ನೌಕರರು ಸ್ವಲ್ಪ ಸಂಬಳ ತೆಗೆದುಕೊಂಡು ಎಷ್ಟೋ ಸಾರಿ ಒಂದು ಹೊತ್ತೇ ಊಟಮಾಡುತ್ತಾರೆ. ಎಲ್ಲೋ ಒಂದೊಂದು ವೇಳೆ ಎರಡು ಹೊತ್ತು ಊಟಮಾಡುತ್ತಾರೆ. ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಂಡು ನಾಲ್ಕು ಹೊತ್ತು ಊಟಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ದಿವಸ ಸರ್ಕಾರೀ ಆಸ್ಪತ್ರೆಗಳಲ್ಲಿ 200 ರೂಪಾಯಿಗಳಿಗೆ ಕೆಳಗಡೆ ಸಂಬಳ ಬರತಕ್ಕ ಅಧಿಕಾರಿಗಳಿಗೆ ಮುಫತ್ತಾಗಿ ಔಷಧೋಪಚಾರಗಳಿವೆ. ಆದರೆ 200 ರೂಪಾಯಿಗಳಿಗಿಂತ ಮೇಲ್ಪಟ್ಟು ಸಂಬಳ ಪಡೆಯುವವರಿಗೆ ಈ ಒಂದು ರಿಯಾಯಿತಿಯೇ ಇಲ್ಲ. ಇವರಂತೂ ಹಣಕೊಟ್ಟೇ ಔಷಧಿ ಮತ್ತು ಔಷಧೋಪಚಾರಗಳನ್ನು ಪಡೆಯಬೇಕು. ಇದು ಯಾವ ನ್ಯಾಯ ? ಇದಕ್ಕೆ ಸಂಬಂಧಪಟ್ಟ ಆರೋಗ್ಯ ಮಂತ್ರಿಗಳು ಇದನ್ನು ಯೋಚನೆ ಮಾಡಬೇಕು. ಇವತ್ತು ದೇಶದಲ್ಲಿ ಹಣದ ಮುಗ್ಗಟ್ಟಿನಿಂದ ಜನಸಾಮಾನ್ಯರ ಜೀವನ ಮಟ್ಟವೇನೆಂಬುದನ್ನು ಬಹಳಮಟ್ಟಿಗೆ ಆಲೋಚನೆ ಮಾಡಬೇಕು. ದೇಶದಲ್ಲಿ ಶೇಕಡ 70 ಅಥವಾ 75 ಜನರು ವ್ಯವಸಾಯಗಾರರಾಗಿದ್ದಾರೆ. ಅವರ ಸ್ಥಿತಿಗತಿಗಳು, ಅವರ ಜೀವನಮಟ್ಟ ಇವನ್ನು ನಮ್ಮ ಸರ್ಕಾರ ಯೋಚನೆ ಮಾಡದೇ ಕಂದಾಯ ತೆರಿಗೆ ಹೊರೆಯನ್ನು ಜಾಸ್ತಿಮಾಡಿದರೆ, ಅವರಿಗೆ ಬಹಳ ಕಷ್ಟವಾಗುತ್ತದೆ, ಸ್ವಾತಂತ್ರ್ಯ ಬಂದಾಗಿನಿಂದಲೂ ದೇಶದಲ್ಲಿ ಒಂದೇ ಸಮನಾಗಿ ಹಣದ ಕೊರತೆ ಇದ್ದೇ ಇದೆ. ಈ ಸಾರಿ ನಮ್ಮ ರಾಜ್ಯದಲ್ಲಿ ಸುಮಾರು ಒಂಭತ್ತು ಕೋಟಿ ರೂಪಾಯಿಗಳ ಖೋತಾ ಬಡ್ಜೆಟ್ ಇದೆಯೆಂದು ಹೇಳುತ್ತಿದ್ದಾರೆ. ಎಷ್ಟೋ ಸಾರಿ ಪಂಡಿತ ಜವಹರ್‌ಲಾಲ್‌ನೆಹರೂರವರು ದ್ವಿತೀಯ ಪಾಂಚವಾರ್ಷಿಕ ಯೋಜನೆಗಳಿಗೆ ಸಾಕಷ್ಟು ಹಣವನ್ನು

(ಶ್ರೀ ಕೆ. ವಿ. ಬೈರೇಗೌಡ)

ಮೀಸಲಾಗಿಡಬೇಕು ಎಂಬುದಾಗಿ ಹೇಳಿದ್ದಾರೆ. ಅದೂ ಅಲ್ಲದೆ ಹೆಚ್ಚು ಹಣವನ್ನು ಪಡೆಯುವ ಅಧಿಕಾರೀ ವರ್ಗದವರು ತಮ್ಮ ಸಂಬಳದಲ್ಲಿ ಖೋತಾ ಮಾಡಿಕೊಳ್ಳಬೇಕೆಂಬುದಾಗಿಯೂ ಹೇಳಿದ್ದಾರೆ. ಆದರೆ ಆರೀತಿ ಸಂಬಳವನ್ನು ಕಡಿಮೆ ಮಾಡಿಕೊಂಡಿರುವವರ ಸಂಖ್ಯೆ ಬಹಳ ಕಡಮೆ. ಅದು ಬಹಳ ಶೋಚನೀಯವಾದ ವಿಷಯ. ಆ ರೀತಿ ಮಾಡದೇ ಇದ್ದರೆ ಈ ಬೇಗೆಯನ್ನು ಯಾವರೀತಿ ಪರಿಹರಿಸಬೇಕು ? ಬಹಳ ಕಷ್ಟ. ಅಧಿಕಾರವರ್ಗದವರ ಸಂಬಳ ಸಾರಿಗೆಯಿಂದ ಖೋತಾ ಮಾಡಿದ ಹಣದಿಂದ ಒಂದು ಹೊಸರಾಷ್ಟ್ರವನ್ನೇ ಕಟ್ಟಬಹುದು. ಈ ದೇಶದ ಜನತೆ ಸುಮಾರು 150ವರ್ಷಗಳಿಂದಲೂ ಪರಕೀಯರ ಆಡಳಿತದಲ್ಲಿದ್ದು ಬಹಳ ನೋವುಪಟ್ಟು ಕಷ್ಟಪಟ್ಟಿರುವ ಕಾಲದಲ್ಲಿ ದೇಶದ ಜನರಿಗೆ ಸುಖೀ ರಾಜ್ಯವನ್ನುಂಟುಮಾಡಬೇಡವೇ ? ಆರೀತಿ ಮಾಡುವುದಕ್ಕೆ ಮತ್ತು ಆ ತತ್ವವನ್ನು ಸ್ಥಾಪಿಸುವುದಕ್ಕೆ ಹೆಚ್ಚು ಸಂಬಳ ಸಾರಿಗೆಗಳನ್ನು ಪಡೆಯುವವರು ಕಡಿಮೆ ಸಂಬಳ ಮಾಡಿಕೊಳ್ಳುತ್ತೇವೆಂದು ಮುಂದೆ ಬಂದರೆ ಆಗ ಸಾಧ್ಯವಿದೆ. ಈಗಾಗಲೇ ಸಂಬಳವನ್ನು ಆದಷ್ಟುಮಟ್ಟಿಗೆ ಖೋತಾ ಮಾಡಬೇಕೆಂದು ಸರ್ಕಾರದವರು ಸೂಚನೆಯನ್ನು ಸಹ ಕೊಟ್ಟಿದ್ದಾರೆ. ಆದರೆ ಅದನ್ನು ಕಾರ್ಯಗತ ಮಾಡುವ ಶಕ್ತಿ ಇದ್ದರೂ ಸಹ ಅಧಿಕಾರಿಗಳು ಇನ್ನೂ ಹಿಂದುಮುಂದು ನೋಡುತ್ತಿದ್ದಾರೆಂಬ ಪ್ರಶ್ನೆ ನನ್ನ ಕಣ್ಣು ಮುಂದೆ ಎದ್ದು ಕಾಣುತ್ತಿದೆ. ದೇಶದ ಜವಾಬ್ದಾರಿಯನ್ನು ವಹಿಸಿರುವ ನಮ್ಮ ಮಂತ್ರಿಮಂಡಲದವರು ಧೈರ್ಯಸ್ಥೈರ್ಯಗಳಿಂದ ಇದನ್ನು ಎದುರಿಸಬೇಕು. ದೇಶದಲ್ಲಿ ಕೇಂದ್ರಸರ್ಕಾರದ ಅಧಿಕಾರಿಗಳು ಒಂದು ಕಡೆ ಕೆಲಸಮಾಡುತ್ತಿದ್ದಾರೆ. ಮತ್ತೊಂದು ಕಡೆ ರಾಜ್ಯ ಸರ್ಕಾರದ ಅಧಿಕಾರಿಗಳು ಕೆಲಸಮಾಡುತ್ತಿದ್ದಾರೆ. ಒಂದೇ ಕೊಠಡಿಯಲ್ಲಿ ಎರಡು ಸರ್ಕಾರಗಳ ಅಧಿಕಾರಿಗಳು ಕೆಲಸಮಾಡಬೇಕಾದರೆ ಒಂದು ಕಡೆ ರಾಜ್ಯ ಸರ್ಕಾರದ ಜವಾನನಿಗೆ 30-10 ರೂಪಾಯಿಗಳ ಸಂಬಳ, ಕೇಂದ್ರ ಸರ್ಕಾರದ ಜವಾನನಿಗೆ 80-90 ರೂಪಾಯಿಗಳ ಸಂಬಳ ಈ ರೀತಿ ವ್ಯತ್ಯಾಸವಿದೆ. ಇದೇ ರೀತಿ ಅಲ್ಲಿನ ಅಧಿಕಾರೀ ವರ್ಗದವರಿಗೂ, ಇಲ್ಲಿನ ಅಧಿಕಾರೀ ವರ್ಗದವರಿಗೂ ಸಂಬಳ ಸಾರಿಗೆಗಳಲ್ಲಿ ಎಷ್ಟೋ ಅಂತರವಿದೆ. ಅವರು ಹೆಚ್ಚಿನ ಕೆಲಸ ಮಾಡುತ್ತಾರೆ, ನಿಷ್ಪಕ್ಷಪಾತವಾಗಿ ಮತ್ತು ಪ್ರಾಮಾಣಿಕತೆಯಿಂದ ಕೆಲಸಮಾಡುತ್ತಾರೆಂದು ತಾವು ಊಹೆಮಾಡಬಹುದು. ನಾನಂತೂ ಈ ದೃಷ್ಟಿಯಿಂದ ಆ ರೀತಿ ಊಹೆಮಾಡಿಲ್ಲ. ಈ ಸಂಬಳ ಸಾರಿಗೆಗಳನ್ನು ಹೆಚ್ಚಿಗೆ ಮಾಡುತ್ತಾ ಹೋದರೆ ಏನೂ ಪ್ರಯೋಜನವಿಲ್ಲ. ಪಾಂಚವಾರ್ಷಿಕ ಯೋಜನೆಗಳಿಗೆ ಈ ಬಗ್ಗೆ ಹೆಚ್ಚು ಹಣವನ್ನು ಒದಗಿಸುತ್ತೇವೆಂದು ಹೇಳುವುದರಲ್ಲಿ ನಮಗೆ ನಂಬಿಕೆಯಿಲ್ಲ. ನಿಜವಾಗಿ ದೇಶದ ಮೇಲಿನ ಅಭಿಮಾನ ಮತ್ತು ವಾತ್ಸಲ್ಯದಿಂದ ಹೆಚ್ಚಿಗೆ ಸಂಬಳ ಪಡೆಯುವ ಮಹನೀಯರು ದೇಶದ ಕಷ್ಟ ಸುಖಗಳನ್ನು ಅರಿತುಕೊಂಡು ಸ್ವಲ್ಪ ಉದಾರವಾಗಿ ತಮ್ಮ ಕೈಲಾದಷ್ಟು ಹಣಸಹಾಯ ಮಾಡಲು ಮುಂದೆ ಬಂದು ತಮ್ಮ ದ್ರವ್ಯವನ್ನು ದೇಶಾಭ್ಯುದಯ ಕೆಲಸಕಾರ್ಯಗಳಿಗೆ ಮೀಸಲಾಗಿಡಬೇಕು. ಕಡಮೆ ದರ್ಜೆಯ ಸಂಬಳದಲ್ಲಿರುವವರಿಗೆ ಸಹಾಯ ಮಾಡಬೇಕು ಎಂಬುದು ಅವರ ಆದ್ಯ ಕರ್ತವ್ಯವಾಗಿದೆ. ಯಾವುದಾದರೂ ಒಂದು ಕಾನೂನು ಕಟ್ಟಳೆ ಬರಬೇಕಾದರೆ ಬಹು ಕ್ಷಿಪ್ರದಲ್ಲಿಯೇ ಜಾರಿಗೆ ಬಂದುಬಿಡುತ್ತದೆ. ಆದರೆ ಕೆಳದರ್ಜೆ ಅಂತಸ್ತಿನವರು ಎಷ್ಟು ಕೇಳಿದರೂ ಅವರ ಪ್ರಶ್ನೆ ಸರಿಯಾಗಿ ಬಗೆಹರಿಯದೆ ಅವರು ನಿರುತ್ಸಾಹಿಗಳಾಗಿ ತಮಗೆ ಸರಿಯಾದ ಅನುಕೂಲತೆಯನ್ನು ನಮ್ಮ ಸರ್ಕಾರದವರು ಕಲ್ಪಿಸಿಕೊಡಲಿಲ್ಲವಲ್ಲ ಎಂದು ಬಹುವಾಗಿ ಪರಿತಪಿಸುತ್ತಾ ಇದ್ದಾರೆ. ಆದ್ದರಿಂದ ಇದನ್ನು ಬಹಳ ಜಾಗ್ರತೆಯಾಗಿ ನಿವಾರಣೆ ಮಾಡುವುದು ರಾಜ್ಯ ಸರ್ಕಾರದವರ ಮತ್ತು ಕೇಂದ್ರ ಸರ್ಕಾರದವರ ಆದ್ಯಕರ್ತವ್ಯವಾಗಿದೆ.

3 P.M.

ಕಾಂಗ್ರೆಸ್ಸಿನವರು ಬಹಳ ದುಃಖದಿಂದ ಹೇಳಬೇಕಾಗಿದೆ. ಈಗಾಗಲೆ ಕಮ್ಯೂನಿಸ್ಟ್ ಸರ್ಕಾರ ಕೇರಳದಲ್ಲಿ ಕಾರ್ಯರೂಪಕ್ಕೆ ತರುತ್ತಾ ಇದೆ. ಮೊನ್ನೆ ಇಲ್ಲಿಗೆ ಬಂದಿದ್ದ, ಕೇರಳದ ಮುಖ್ಯಮಂತ್ರಿ ಶ್ರೀ ನಂಬೂದ್ರಿಪಾದರವರು ಸ್ಪಷ್ಟಪಡಿಸಿದ್ದಾರೆ. "ನಮಗೂ, ಕಾಂಗ್ರೆಸ್ಸಿನವರಿಗೂ ವ್ಯತ್ಯಾಸ ಇದೆ. ಕಾನ್ಸ್ಟಿಟ್ಯೂಷನ್ನಲ್ಲಿ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ, ಆದರೆ ಕಾಂಗ್ರೆಸ್ಸಿನವರು ಏನು ನಿಧಾನವಾಗಿ ಮಾಡುತ್ತಾ ಇದ್ದಾರೋ, ಅದನ್ನು ನಾವು ಬೇಗ ಕಾರ್ಯರೂಪಕ್ಕೆ ತರುತ್ತೇವೆ" ಎಂದು. ಸರ್ಕಾರದವರೂ, ಅಧಿಕಾರಿಗಳೂ ತ್ವರಿತವಾಗಿ ಕೆಲಸ ಮಾಡಬೇಕು. ಇದನ್ನೆಲ್ಲಾ ಅರಿತುಕೊಂಡು ಜವಾಬ್ದಾರಿಯುತರಾದ ಕೆಳದರ್ಜೆ ನೌಕರರನ್ನು ಸಂತೃಪ್ತಿಯಿಂದ ಇಟ್ಟುಕೊಳ್ಳುವುದಕ್ಕೆ, ಅವರಿಗೆ ಇಂಡೆಕ್ಸ್ ಆಫ್ ಲಿವಿಂಗ್‌ಗೆ ಅನುಗುಣವಾಗಿ ಸಂಬಳವನ್ನು ಕೊಡುವುದಕ್ಕೆ ನಾವು ಯಾವಾಗಲೂ ಸಿದ್ಧವಾಗಿರಬೇಕು. ಮೊದಲನೆಯ ನಿರ್ಣಯದಲ್ಲಿ, ಶೋಟಿ ತಳವಾರರಿಗೆ ಪರಿಹಾರ ಕೊಡಬೇಕು ಎನ್ನುವ ಸಂದರ್ಭದಲ್ಲಿ, ಅವರನ್ನು ಸರ್ಕಾರಿ ಅಧಿಕಾರಿಗಳಾಗಿ ಇಟ್ಟುಕೊಳ್ಳುತ್ತೇವೆಂದು ಮಾನ್ಯಮಂತ್ರಿಗಳು ಭರವಸೆ ಕೊಟ್ಟಿದ್ದಾರೆ.

Mr. SPEAKER.—The House will now rise for half an hour.

The House adjourned at Two Minutes past Three of the Clock and reassembled at Thirty Minutes past Three of the Clock.

[Mr. DEPUTY SPEAKER in the Chair]

ಶ್ರೀ ಕೆ. ವಿ. ಬೈರೇಗೌಡ.—ಸ್ವಾಮಿ, ಈ ಸಂಬಳ ಸಾರಿಗೆಗಳಲ್ಲಿ ಇರತಕ್ಕಂಥ ಅಂತರದಿಂದ, ನಮ್ಮ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ನಾವು ಈ ದೇಶದ ಕೆಲಸಕಾರ್ಯಗಳನ್ನು ಸಾಧನೆ ಮಾಡುವುದಕ್ಕೆ ಏನು ಒಂದು ಸತತವಾದ ಪ್ರಯತ್ನ ಮಾಡುತ್ತಿದ್ದೇವೆಯೋ, ಆ ಪ್ರಯತ್ನದ ಗುರಿ ಈ ಅಂತರವನ್ನು ತಪ್ಪಿಸುವಂಥಾದ್ದಾಗಿರಬೇಕು. ಈ ನಿರ್ಣಯದ ಮೇಲೆ ಹಿಂದೆ ಹತ್ತಾರು ಸಾರಿ ಚರ್ಚೆಗಳು ಆಗಿ, ಅದಕ್ಕೆ ಸರ್ಕಾರದವರು ಆಗಿಂದಾಗ್ಯೆ ಒಂದು ಸಮಜಾಯಿಷಿ ಕೊಟ್ಟಿದ್ದಾರೆ. ಆದರೆ ಅದನ್ನು ಕಾರ್ಯಗತ ಮಾಡಲಿಲ್ಲ. ಕೇಂದ್ರ ಸರ್ಕಾರದ ನೌಕರರಿಗೂ ರಾಜ್ಯ ಸರ್ಕಾರದ ನೌಕರರಿಗೂ ಸಂಬಳಗಳಲ್ಲಿ ಅಂತರವನ್ನು ಹೋಗಲಾಡಿಸುವುದಕ್ಕೆ ನಮ್ಮ ಸರ್ಕಾರಕ್ಕೆ ಮನಸ್ಸು ಇದೆಯೋ ಇಲ್ಲವೋ

ಮನಸ್ಸು ಇದ್ದಾಗ್ಯೂ ಕೇಂದ್ರಸರ್ಕಾರದೊಂದಿಗೆ ಧೈರ್ಯವಾಗಿ ವ್ಯವಹರಿಸಿ ಬಗೆಹರಿಸಲು ಶಕ್ತಿ ಇದೆಯೋ ಇಲ್ಲವೋ ಗೊತ್ತಿಲ್ಲ. ಇಲ್ಲ ಸಂಕೋಚ ಇರಬಹುದೇ? ರಾಜ್ಯ ಸರ್ಕಾರದ ಆದಾಯ ವೆಚ್ಚ ನೋಡಿದರೆ, ಪ್ರತಿವರ್ಷವೂ ಸುಮಾರು ಎಂಟು ಕೋಟಿ ರೂಪಾಯಿ ಸರ್ಕಾರ ಆಡಳಿತದ ಮೇಲೆ ಖರ್ಚು ಮಾಡುತ್ತಾ ಇತ್ತು; ಈಗ ಅದು 14-15 ಕೋಟಿ ರೂಪಾಯಿ ಆಗುತ್ತಾ ಇದೆ. ಅಂದರೆ, ಶೇಕಡ 50 ಭಾಗ ಹಣವನ್ನು ನಾವು ಅಧಿಕಾರಿ ವರ್ಗದಮೇಲೆ ಖರ್ಚು ಮಾಡುತ್ತಾ ಇದ್ದೇವೆ. ಇಷ್ಟು ಖರ್ಚು ಮಾಡಿದರೂ ಎಲ್ಲಾ ಅಧಿಕಾರಿಗಳೂ ಸಮೃದ್ಧಿಯಿಂದ ಇದ್ದಾರೆಯೇ? ತೃಪ್ತಿಯಿಂದ ಕೆಲಸ ಮಾತ್ತಿದ್ದಾರೆಯೇ? ಅವರಲ್ಲಿ ದೇಶಾಭಿಮಾನವಿಲ್ಲದಿದ್ದರೆ, ಅವರಿಂದ ದೇಶಕ್ಕೆ ಏನು ಉಪಯೋಗವಾಗುತ್ತದೆ? ಮೈಸೂರು ದೇಶದ ಹಿಂದಿನ ಆಡಳಿತದಲ್ಲಿ, ಅಧಿಕಾರವರ್ಗದವರು ಬರೀ ಸಾವಿರ ರೂಪಾಯಿಯನ್ನೂ ನೋಡುತ್ತಾ ಇರಲಿಲ್ಲ. ದೇಶಾಭಿಮಾನದಿಂದ, ದೇಶದ ಏಳಿಗೆಗೋಸ್ಕರ ಕಡಮೆ ಸಂಬಳ ತೆಗೆದುಕೊಂಡು, ಮೈಸೂರು ರಾಜ್ಯವನ್ನು ಒಂದು ಮಾದರಿ ರಾಜ್ಯವನ್ನಾಗಿ ಮಾಡಿದ್ದರು. ಅವರು ಸಂಬಳ ಒಂದೇ ಗುರಿಯಾಗಿ ಇಟ್ಟುಕೊಂಡಿರಲಿಲ್ಲ. ಉದಾಹರಣೆಗೆ, ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯವರು, ಈ ರಾಜ್ಯದ ಒಬ್ಬ ಅಧಿಕಾರಿಯಾಗಿ ಯಾವರೀತಿ ಕೆಲಸ ಮಾಡಿದರು ಎಂಬುದು ಚರಿತ್ರಾರ್ಹವಾಗಿದೆ. ಹೀಗೆಯೇ ಇನ್ನೂ ಅನೇಕ ಅಧಿಕಾರಿಗಳು ಕೆಲಸ ಮಾಡಿದ್ದಾರೆ. I.A.S., I.P.S. ಎಂಬ ಯಾವುದೋ ಒಂದು ಧೋರಣೆಗೆ ಸಿಕ್ಕಿಕೊಂಡು ಹೆಚ್ಚು ಸಂಬಳ ಕೊಡುವುದು ಸರಿಯೇ? ಒಂದು ಕಡೆ Non-I.A.S. ಅಧಿಕಾರಿಗಳು ಇರುತ್ತಾರೆ. ಇನ್ನೊಂದು ಕಡೆ I.A.S. ಅಧಿಕಾರಿಗಳು ಇರುತ್ತಾರೆ. ಮೈಸೂರು ಚೀಫ್ ಸೆಕ್ರೆಟರಿಯವರು ಐ. ಸಿ. ಎಸ್. ಅಧಿಕಾರಿಗಳು, ಅವರಿಗೆ ಮೂರು ಸಾವಿರ ರೂಪಾಯಿ ಸಂಬಳ. ಇಷ್ಟು ಸಂಬಳ ಕೊಟ್ಟರೆ ಏನಾದರೂ ಪ್ರಾಮಾಣಿಕತೆ ಜಾಸ್ತಿಯಾಗುತ್ತದೆಯೇ! ಇಲ್ಲ, ದೇಶಾಭಿಮಾನದಿಂದ ಕೆಲಸ ಮಾಡುತ್ತಾರೆಯೇ? ಅಧಿಕಾರಿಗಳಲ್ಲಿರುವ ಈ ಅಂತರವನ್ನು ಹೋಗಲಾಡಿಸುವುದಕ್ಕೆ ಸತತವಾಗಿ ನಾವು ದುಡಿಯಬೇಕು. ಇಂಡಿಯಾ ದೇಶದಲ್ಲಿ, ಈಗ ಎರಡು ತರಹ ಸರ್ಕಾರಗಳು ಕೆಲಸಮಾಡುತ್ತಿವೆ—ಒಂದು ಕಾಂಗ್ರೆಸ್ ಸರ್ಕಾರ, ಇನ್ನೊಂದು ಕಮ್ಯುನಿಸ್ಟ್ ಸರ್ಕಾರ. ತತ್ವತಃ, ಇದು ಸತ್ವ ಪರೀಕ್ಷೆಯ ಕಾಲ. ಸಂಬಳದಲ್ಲಿ ಅಂತರವನ್ನು ಕಡಮೆ ಮಾಡದಿದ್ದರೆ, ಈ ಅಧಿಕಾರಿ ವರ್ಗದಿಂದ ಎಷ್ಟರ ಮಟ್ಟಿಗೆ ನಮ್ಮ ಯೋಜನೆಗಳಿಗೆ ಬೆಂಬಲ ಸಿಕ್ಕುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ನಿಜವಾಗಿಯೂ ಎರಡನೆ ಪಂಚವಾರ್ಷಿಕ ಯೋಜನೆಯ ಕೆಲಸ ಕಾರ್ಯಗಳು ಯಶಸ್ವಿಯಾಗಿ ನಡೆಯಬೇಕಾದರೆ ಕೆಳದರ್ಜೆ ನೌಕರರ ಜೀವನದ ಮಟ್ಟದ ವಿಚಾರವನ್ನು ಆಲೋಚನೆ ಮಾಡಬೇಕು. ಅವರನ್ನು ಉತ್ತಮ ಸ್ಥಿತಿಗೆ ತರಬೇಕು. ಬರೀ ಅಂಕಿ ಅಂಶಗಳನ್ನು ನೋಡಿ ತೃಪ್ತಿಪಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಅವರಿಗೆ ಸೌಲಭ್ಯಗಳನ್ನು, ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಈ ಕೆಳದರ್ಜೆ ನೌಕರರಿಗೆ ಕೊಡತಕ್ಕಂಥ ಸಂಬಳದಿಂದ, ನಾವು ಇವತ್ತು ಏನು ಕೆಲಸ ನಿರೀಕ್ಷಿಸಬಹುದು? 50-60 ಜನ ಜಾಸ್ತಿ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳು ಎಲ್ಲಾ ಕೆಲಸವನ್ನೂ ಮಾಡುವುದು ಸಾಧ್ಯವೇ? ಸರ್ಕಾರದ ಮೆಷಿನರಿ ಚೆನ್ನಾಗಿ ನಡೆಯಬೇಕಾದರೆ, ಪ್ರತಿಯೊಂದು ವರ್ಗದ ನೌಕರರ ಸಹಕಾರ ಬೇಕು. ಈ ಪ್ರಶ್ನೆಯನ್ನು ಸಹಾನುಭೂತಿಯಿಂದ ಪರಿಹಾರ ಮಾಡುವುದಾಗಿ, ಹಿಂದಿನ ಮುಖ್ಯ ಮಂತ್ರಿಗಳು ಇದೇ ಸಭೆಯಲ್ಲಿ ಹೇಳಿದ್ದರು. ಈ ಪ್ರಶ್ನೆಯನ್ನು ಬಗೆಹರಿಸುವಂತೆ ನಮ್ಮ ಸರ್ಕಾರ ಕೇಂದ್ರ ಸರ್ಕಾರದೊಡನೆ ಪ್ರಸ್ತಾಪ ಮಾಡಬೇಕು. ಅವರಿಗೆ ಹೇಳಬೇಕು, "ಇಂತಹ ಅಂತರವಿದ್ದರೆ ಯಾರಿಗೂ ಯೋಗ್ಯವಲ್ಲ. ನಿಜವಾಗಿಯೂ ಪ್ರಜಾಪ್ರಭುತ್ವ ಬೆಳಸಬೇಕು ಎನ್ನುವ ಇಚ್ಛೆ ಇದ್ದರೆ, ದೇಶದ ಹಣ ಸರಿಯಾದ ರೂಪದಲ್ಲಿ ವಿನಿಯೋಗವಾಗಬೇಕಾದರೆ, ಚೈನಾ ಮುಂತಾದ ದೇಶಗಳಲ್ಲಿರುವಂತೆ ಜೀವನ ಮಟ್ಟದ ಅಂಕೆಗಳ ಸೂಚನೆಗೆ ಹೋಲುವಂಥ ಸಂಬಳವನ್ನು ಕೊಡುವುದು ನಮ್ಮ ಸರ್ಕಾರದ ಕರ್ತವ್ಯ" ಎಂದು. ಸಂಬಳ ಸಾರಿಗೆಗಳಲ್ಲಿ ವಿಪರೀತ ಅಂತರವಿದ್ದರೆ ಸರ್ಕಾರದ ಕೆಲಸ ಸರಿಯಾಗಿ ನಡೆಯುವುದಿಲ್ಲ. ಒಂದು ಕಡೆ, ಒಂದು ಸಾವಿರ ರೂಪಾಯಿ ತೆಗೆದುಕೊಳ್ಳುವ ಅಧಿಕಾರಿ, ಬೆಳಗಾದರೆ ಭಕ್ಷ್ಯ ಭೋಜ್ಯಗಳಲ್ಲಿ ಮುಳುಗಿರುತ್ತಾನೆ, ಅವರಿಗೆ ಬರುವ ಸಂಬಳ ಹೇಗೆ ಸರಿಯಾಗಿ ಖರ್ಚು ಮಾಡಬೇಕು ಎನ್ನುವುದೂ ತೋಚದಷ್ಟು ಜಾಸ್ತಿಯಾಗಿದೆ. ಇನ್ನೊಂದು ಕಡೆ ಒಬ್ಬ ಬಡವ. ಅವನ ಮನೆಯಲ್ಲಿ ಬಹಳ ಜನ. ಅದು ಇರಲಿ. ನೌಕರರಿಗೆ ಕೊಡುವ ಸೌಲಭ್ಯಗಳಲ್ಲಿ ಏಕೆ ತಾರತಮ್ಯವಿರಬೇಕು? 500 ರೂಪಾಯಿಮೇಲೆ ಪಡೆಯುತ್ತಿರುವ ಅಧಿಕಾರಿಗಳಿಗೆ ಮಾತ್ರ ಆಸ್ಪತ್ರೆಯ ಸೌಲಭ್ಯ ಕಲ್ಪಿಸಿದ್ದಾರೆ. ತತ್ವಶಃ ಇದರ ಅರ್ಥ ಗೊತ್ತಾಗುವುದಿಲ್ಲ. ಆ ಬಡ ನೌಕರನಿಗೆ ಹೆಂಡತಿ, ಮಕ್ಕಳು, ಸಂಸಾರ ಇಲ್ಲವೇ? ಈ ಮೇಲ್ಪಟ್ಟ ಅಧಿಕಾರಿಗಳಿಗೆ ಒದಗಿಸಿಕೊಡುವ ಸೌಲಭ್ಯಗಳಿಗಿಂತ, ಕೆಳದರ್ಜೆ ನೌಕರರುಗಳಿಗೆ ಹೆಚ್ಚು ಅನುಕೂಲಗಳನ್ನು ಒದಗಿಸಬೇಕು, ಹಾಗೆ ಮಾಡದಿದ್ದರೆ ಅವರ ಕೆಲಸ ಎಷ್ಟರ ಮಟ್ಟಿನ ದಕ್ಷತೆಯಿಂದ ಕೂಡಿರುತ್ತದೆ? ಸಂಬಳದಲ್ಲಿ, ಸೌಲಭ್ಯಗಳಲ್ಲಿ, ಇಷ್ಟು ಹೆಚ್ಚಾದ ತಾರತಮ್ಯವಿದ್ದರೆ, ಪಂಚವಾರ್ಷಿಕ ಯೋಜನೆಗಳು ಯಶಸ್ವಿಯಾಗಿ ಪೂರ್ಣಗೊಳ್ಳಲು ಖಂಡಿತವಾಗಿ ಸಾಧ್ಯವಾಗುವುದಿಲ್ಲ, ಖರ್ಚುಮಾಡುವ ಹಣ ಸಫಲವಾಗುವುದಿಲ್ಲ. ಈ ಸಮಸ್ಯೆಗೆ, ನಮ್ಮ ಸರ್ಕಾರದವರು ಸಾಕಾದಷ್ಟು ಮನಸ್ಸು ಕೊಟ್ಟು ಕೇಂದ್ರ ಸರ್ಕಾರದೊಂದಿಗೆ ಮಾತುಕತೆ ನಡೆಸಿ, ಈ ಅಂತರವನ್ನು ಕಡಮೆ ಮಾಡಬೇಕು. ಐ. ಎ. ಎಸ್., ಐ. ಪಿ. ಎಸ್. ಅಧಿಕಾರಿಗಳಿಗೆ 2-2½ ಸಾವಿರ ರೂಪಾಯಿ ಕೊಡುವ ಸಾಮರ್ಥ್ಯವನ್ನು ನಾವು ಪಡೆದಾಗ, ಆ ಕಾಲ ಬಂದಾಗ ಕೊಡೋಣ. ಆದರೆ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ನಮಗೆ ಅಷ್ಟು ಹೆಚ್ಚು ಸಂಬಳವನ್ನು ಕೊಡುವ ಶಕ್ತಿ ಇದೆಯೇ ಎಂಬುದನ್ನು ಆಲೋಚನೆ ಮಾಡಬೇಕು. ಹಿಂದಿನ ಮೈಸೂರು ಸರ್ಕಾರದಲ್ಲಿ ಏನು ಸಂಬಳ ಸಾರಿಗೆಗಳು ಜಾರಿಯಲ್ಲಿದ್ದವೊ, ಅವುಗಳನ್ನು ಈ ಮೇಲ್ಪಟ್ಟ ಅಧಿಕಾರಿಗಳಿಗೆ ಕೊಡಿ. ಇಲ್ಲದಿದ್ದರೆ, ಈ ಕೆಳದರ್ಜೆ ನೌಕರರ ಮನಸ್ಸಿನ ಮೇಲೆ ಒಂದು ಉದ್ವೇಗ ಉಂಟಾಗುತ್ತದೆ. ಇವರಿಗೆ ಈ ಅತೃಪ್ತಿಯನ್ನು ಸರಕಾರಕ್ಕೆ ನೇರವಾಗಿ ತಿಳಿಸುವುದಕ್ಕೆ ಶಕ್ತಿಯಿಲ್ಲ. ಪ್ರಜಾಪ್ರತಿನಿಧಿಗಳಾದ ನಾವು, ಈ ಅಧಿಕಾರಿ ವರ್ಗದ ಗೋಳನ್ನು ಸರ್ಕಾರಕ್ಕೆ ತಿಳಿಸಿ, ಅವರಿಗೆ ಪರಿಹಾರ ದೊರಕಿಸಿಕೊಡುವುದು ನಮ್ಮ ಕರ್ತವ್ಯವಾಗಿದೆ. ಇದನ್ನೆಲ್ಲಾ ಅರಿತುಕೊಂಡು, ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ, ಈ ಸಂಬಳಗಳ ಅಂತರವನ್ನು ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರೂ ಹೆಚ್ಚಿನ ಬೆಂಬಲ ಕೊಟ್ಟು, ಈ ನಿರ್ಣಯವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಾನು ತಿಳಿದು ಕೊಂಡಿದ್ದೇನೆ.

Mr. DEPUTY SPEAKER.— Resolution moved:

> "This Assembly is of the opinion that a Committee be constituted to report within six months the ways and means by which the scales of pay between the States and the Central Services be brought to uniformity in our State as the difference in pay scales has caused great discontent."

Sri M. C. NARASIMHAN (Kolar Gold Fields).—Sir, I rise to support this resolution and I very much appreciate the sentiments expressed by the mover of the resolution. It is very good that the initiative in this matter is coming from a member of the Congress Legislature Party. The resolution does not call for immediate uniformity in the matter of pay scales. It only seeks to suggest the constitution of a committee to go into the question of bringing about uniformity in the matter of pay scales. Talking of uniformity all these days eversince we came to this House, we have had a lot of insistence by the Treasury Benches on the need for uniformity in the matter of taxation measures, and in the matter of other legislative measures. So, I think, if this resolution is accepted, it will only be on all fours with the line of thinking that has been advocated and has been accepted so far by this House at the instance of the Treasury Benches alone. So, when we look at this question from this point of view, there is no reason why this resolution should be resisted. Even if it had called for immediate uniformity, there was justification for it, but this only calls for the constitution of a committee which is authorised to go into the desirability or otherwise of having uniform scales and also to make suggestions regarding financial measures. Already, my learned friend has laid bare before the House how there is discrimination in the matter of pay scales between the Central Government servants and the State Government servants. Now, there is a further discrimination which I want to bring to the notice of this House and that is this. So far as the I.A.S. officers are concerned, the principle of uniformity has been accepted by this Government also. Our State Government has accepted the need for uniformity of pay scales in the matter of I.A.S. officers. That is to say, the pay scales of I.A.S. officers here are on a par with those of I.A.S. officers under the Government of India. So, there is no distinction. When it comes to the question of I.A.S. officers, when it comes to the question of higher officers, the State Government is prepared to accept the principle of uniformity; but when it comes to the question of the non-gazetted officers or even a section of gazetted officers who are not considered as a privileged community, namely, the I.A.S. officers, there is a certain discrimination. You are prepared to have uniformity in respect of a small coterie of officials, namely, the I.A.S. officers, but when it comes to a large number of officers who bear the brunt of running the entire Government and who are responsible for the success of the Five Year Plan, you are not prepared to have uniformity. This is a state of affairs which is really tragic. Apart from considerations of merit, even bearing the spirit of the Constitution in mind, it is absolutely necessary that we should have uniformity in the matter of pay scales. The Constitution does not say—I cannot read that meaning into the Constitution, namely, that we should have different treatment in different areas. The spirit of the Constiution is that there should be equality before the eyes of law, equality in all matters of policy. Now, one of the fundamental objectives of the Constitution as adumbrated in the directive principles of State Policy is to ensure a living wage. Article 43 of the Constitution says as follows:—

> "The State shall endeavour to secure, by suitable legislation or economic organisation or in any other way, to all workers, agricultural, industrial or otherwise. . ."

I emphasise the word 'or otherwise'.

> "a decent standard of life and full enjoyment of leisure and social and cultural opportunities and, in

particular, the State shall endeavour to promote cottage industries on an individual or co-operative basis in rural areas."

From this it is obvious that one of the directive principles of State policy is to ensure a living wage either to workers employed in industrial concerns or even otherwise. When that is the directive principle of State policy, when the desirability of having living wage is written down into our Constitution in respect of private employment, is it not obvious that that policy should be first followed by a Government which seeks to implement this very directive principle of State policy. It is crystal clear. Living wage has been defined by industrial tribunals and even by the Supreme Court, if I remember aright, as a wage or as a salary which will ensure a decent standard of life. Today, it is obvious that the pay scales prevalent in various States including our State, even after the revision from the 1st January 1957, is not really a living wage. So far as Peons and others whom the Central Pay Commission terms as Class IV employees, they are really what the industrial tribunals say as below the minimum wage High Courts and the Supreme Court have held that any private establishment, industrial or otherwise, which is incapable of giving a minimum wage has no right to exist. That is how the spirit of article 43 has been implemented by the various High Courts and even by the Supreme Court for that matter. When the courts of the land say that if there is a concern which cannot pay the minimum wage to its employees, it has no right to exist—that is the type of social justice that is envisaged in our Constitution. When this is the case, may I know what justification there is for the Government, whether State or Central, to treat its employees without any consideration, without mercy, without even taking into account the provision for—leave alone a decent standard of life—the bare necessities of life to the State Government employees? I am not suggesting that it is the duty cast on the State Government alone to improve the pay scales of its employees. It is also equally the bounden duty of the Government of India. I understand the spirit of the resolution to be that if the State Government does not press the Central Government on the need for bringing about uniformity in the matter of pay scales, it would be failing signally in its duty to its loyal servants but for whose co-operation it is difficult to implement the Five-Year Plan successfully. In this connection, I am surprised to note that the State Governments has failed signally in its duty when it had an opportunity when the Second Pay Commission was appointed by the Government of India to press for the inclusion of the service conditions of State employees in the terms of reference. The State Governments and the Government of Mysore should have approached the Second Pay Commission to include the pay scales of its own employees as one of the terms of reference. In fact, I had sent a short notice question on this matter also. The Finance Minister had agreed to answer this short notice question. He was also under the impression that the pay scales of State Government employees would be included in the terms of reference of the Second Pay Commission, but unfortunately I understand later on that the matter has been turned down. I do not know the reason why it was turned down. As it turned out later, the impression that was given by the Finance Minister was wrong. I think either the Government of India refused to include it in the terms of reference or the State Government did not press for its inclusion in the terms of reference. It is a very tragic state of affairs. At least this matter could have been referred to the Second Pay Commission. It was open to the Second Pay Commission to say that under the present circumstances it was not possible to include it in the terms of reference. It was open to it to say that in view of the sacrifices that the country has to make in the interest of the nation, let the State Government employees also sacrifice. There is nothing wrong in

(SRI M. C. NARASIMHAN)

referring this question to the Second Pay Commission. It is therefore my humble opinion that the State Government has signally failed in its duty when an opportunity afforded itself to it. Even the Finance Minister of the Central Government, Sri T. T. Krishnamachari, was aware of this difference in pay scales.

He has been credited to have said that this discrimination was rather bad. This discrimination leads to a lot of discontent. Sir, it is a truism to suggest that if there is enormous difference in pay scales between persons doing the same job, it will lead to discontent; we are ourselves aware of it. After integration, we see so much of difference in pay scales, disparity in pay scales, that we have to appoint a committee to go into the question. The State Government was itself aware that this discontent was really bad and that it would contribute to inefficiency. Further, Sir, I would also submit that in accordance with the spirit of the Constitution, one important guiding consideration that should be borne in mind in respect of salaries of public servants and which unfortunately has been lost sight of, is that the public servant should be enabled to be above board. A certain high standard of conduct and rectitude is expected of a public servant. So, Sir, in western countries like England, it has been laid down that the salary structure should be such as to keep him above want and help him to lead a decent life. The Central Pay Commission of 1947 also laid down this principle but unfortunately it has not been accepted and has not been implemented by the various State Governments. Now, Sir, I will just illustrate the enormous pay scale difference even after revision. A peon under the Central Government has been since 1947 receiving a minimum salary of Rs 80 whereas now after revision a peon under the Government of Mysore receives either Rs. 55 if he is in the Secretariat or Rs. 50 if he is outside. Similarly, a graduate clerk receives Rs. 145 and has been receiving Rs. 145 since 1947 under Government Order V, whereas here under the Government of Mysore if a person accepts service and does the same type of work he gets either Rs. 85 or Rs. 90 including all allowances. Now, a Superintendent in the Secretariat of that cadre gets Rs. 285 under the Government of India whereas he gets only Rs. 250 here. With regard to I.A.S. people, the pay scale is uniform. Now, Sir, there is further enormous difference in the salaries because the Central Government employees get house rent allowance, city compensatory allowance, etc., whereas none of these things are given to State employees. Even the January 1st order of the Government of Mysore revising the pay scale has thought it fit to give special pay to higher category of officers, whereas when it comes to the question of house rent allowance or such other allowance for people in the lower category, there is no such thing at all. They have detailed the need for special pay but there is no such thing in the matter of lower category people. Sir, I do say that I am not unaware of the financial difficulty. It is a very big hurdle. I am not suggesting that it is a simple matter. That is why, Sir, the Hon'ble Mover did not word his resolution so that it should be done overnight. He has advisedly said that a committee may be constituted to go into this question. Let that committee be authorised by this body to see that there is at least uniformity in scales and let them also suggest ways and means of meeting the financial commitment that may arise as a result of the revision of scales of pay. With these words I commend the resolution for the acceptance of the House.

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಸ್ವಾಮಿ, ಇದೇ ಸಭೆಯ ಮುಂದೆ ಬಡ ನೌಕರರ ಸಂಬಳಗಳ ಮತ್ತು ಆಫೀಸರುಗಳ ವಿಚಾರದಲ್ಲಿ ಹಿಂದೆ ಹೇಳಿದ್ದೇನೆ. ನಮ್ಮ ದೇಶಕ್ಕೆ ಈಸ್ಟ್ ಇಂಡಿಯಾ ಕಂಪೆನಿ ಬಂದು ನಮ್ಮ ನಮ್ಮಲ್ಲಿ ಇದ್ದಂತಹ ವ್ಯತ್ಯಾಸ ಗಳನ್ನೆಲ್ಲ ಉಪಯೋಗಿಸಿಕೊಂಡು ನೂರಾರು ವರ್ಷ ಗಳಿಂದಲೂ ಆಫೀಸರಗಿರಿ ಮಾಡಿದರು. ಬ್ರಿಟಿಷ್ ಸರ್ಕಾರದವರು ಸರ್ಕಾರ ಸ್ಥಾಪನೆ ಮಾಡಿದಮೇಲೆ ಯಾವ ರೀತಿ ಸರ್ಕಾರವನ್ನು ಎಸ್ಟಾಬ್ಲಿಷು ಮಾಡಿ ದ್ದರೋ ಅದೇ ರೀತಿ ನಮ್ಮ ಸರ್ಕಾರದವರೂ ಕೂಡ ಮಾಡುತ್ತಿದ್ದಾರೆ ಎಂದು ಹೇಳಿದರೆ ಪ್ರಾಯಶಃ ಅದು ಅತಿಶಯೋಕ್ತಿಯಾಗಲಾರದು. ಇಂಗ್ಲಿಷಿನವರು ಐ. ಸಿ. ಎಸ್. ಮತ್ತು ಐ. ಪಿ. ಎಸ್. ಎಂದು ಮಾಡಿ

ದರು. ಐ.ಸಿ.ಎಸ್. ಯಾರುಯಾರಿಗೆ ಬೇಕೋ ಅವರಿಗೆ ಕೊಟ್ಟರು ಮತ್ತು ಕೆಲವು ಕಡೆ ನಾಮಿನೇಟು ಕೂಡ ಮಾಡಿದರು. ಹೀಗೆ ಅವರನ್ನು ಸೆಲೆಕ್ಟು ಮಾಡಿದ ನಂತರ ಇಂಗ್ಲೆಂಡಿಗೋ ಅಥವಾ ಇತರ ಪಾಶ್ಚಾತ್ಯ ದೇಶಗಳಿಗೋ ಎರಡು ಮೂರು ವರ್ಷಗಳ ಕಾಲ ಟ್ರೈನಿಂಗಿಗಾಗಿ ಕಳುಹಿಸುತ್ತಿದ್ದರು. ಮತ್ತು ಹಾಗೆ ಬಂದ ಅಧಿಕಾರಿಗಳಿಗೆ ನಮ್ಮ ದೇಶದ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವ ಅವಕಾಶವಿರುತ್ತಿರಲಿಲ್ಲ. ಆಗ ಕೊಡುತ್ತಿದ್ದ ಇಂಗ್ಲಿಷಿನವರ ಟ್ರೈನಿಂಗು ಪದ್ಧತಿ ಹೇಗಿತ್ತು ಎಂದರೆ, ಅಲ್ಲಿಂದ ಬಂದ ಒಬ್ಬ ಅಧಿಕಾರಿಯಾದರೂ ಒಬ್ಬ ಬಡ ಕೂಲಿಗಾರನನ್ನು ಅಥವಾ ಒಬ್ಬ ಬಡ ರೈತನನ್ನು ಕೂಡ ಮಾತನಾಡಿಸುತ್ತಿರಲಿಲ್ಲ. ಹಾಗೆ ಮಾತನಾಡಿಸಿದರೆ ಅವರ ದರ್ಜೆಗೆ ತಕ್ಕಂತಹುದಲ್ಲ ಎಂದು ತಿಳಿದುಕೊಂಡಿದ್ದರು. ನಾನು ಹೀಗೆ ಮಾತನಾಡುತ್ತಿದ್ದೇನೆಂದು ಇಲ್ಲಿ ಇರುವ ಯಾರಾದರೂ ಐ.ಸಿ.ಎಸ್. ದರ್ಜೆಯ ಅಧಿಕಾರಿಗಳು ಕೋಪಿಸಿಕೊಳ್ಳಬಾರದು. ಹತ್ತು ವರ್ಷಗಳಿಂದ ನಮ್ಮ ದೇಶದ ಜನಗಳು ಸೇರಿ ಸರ್ಕಾರವನ್ನು ನಡಸುತ್ತಿದ್ದಾಗ್ಯೂ ಇದನ್ನು ಏಕೆ ಗಮನಕ್ಕೆ ತೆಗೆದುಕೊಳ್ಳಲಿಲ್ಲ ಎಂಬುದು ಶೋಚನೀಯವಾದುದು. ಹಿಂದೆ ದೇಶಕ್ಕೋಸ್ಕರ ರಕ್ತವನ್ನು ಬಸಿದ ದೇಶದ ನಾಯಕರು ಪಂಡಿತ ಜವಹರಲಾಲ್ ನೆಹರುರವರು. ಇಂತಹವರು ಇದ್ದೂ, ಹಿಂದೆ ಇಂಗ್ಲಿಷಿನವರು ಮಾಡಿದ್ದಂತಹ ಪದ್ಧತಿಯನ್ನೇ ಈಗಲೂ ಅನುಸರಿಸಿಕೊಂಡು ಹೋಗುತ್ತಿದ್ದಾರೆ. ನಾವು ಆಗಿನಿಂದಲೂ ಈ ಬಡ ನೌಕರರುಗಳಿಗೆ ಸಂಬಳ ಜಾಸ್ತಿ ಮಾಡಿ ಎಂದು ಹೇಳುತ್ತಿದ್ದರೂ ನಮ್ಮ ಸರ್ಕಾರದವರ ಫೈನಾನ್ಷಿಯಲ್ ಪೊಸಿಷನ್ನು ಚೆನ್ನಾಗಿಲ್ಲ ಎಂದು ಹೇಳುತ್ತಿದ್ದಾರೆ. ರಾಜ್ಯ ಸರ್ಕಾರದ ಸಂಬಳಗಳು ಸೆಂಟ್ರಲ್ ಗೌರ್ನ್ಮೆಂಟಿನ ಸಂಬಳಗಳ ಮಟ್ಟಕ್ಕಿಂತ ಕಡಿಮೆಯಿದೆ. ಅಲ್ಲದೆ ನಮ್ಮ ರಾಜ್ಯ ಸರ್ಕಾರದಲ್ಲಿರುವ ಡಿಸ್ಟ್ರಿಕ್ಟು ಬೋರ್ಡು, ಮುನಿಸಿಪಾಲಿಟಿ ಇವುಗಳಲ್ಲಿರುವ ಸಂಬಳಗಳನ್ನು ನೋಡಿದರೆ ನಿಜವಾಗಿಯೂ ಈಗ ಕೊಡುತ್ತಿರುವ ಸಂಬಳ ಬಹಳ ಕಡಿಮೆಯಾಗಿದೆ. ಮೈಸೂರು ಗೌರ್ನ್ಮೆಂಟು ಕೊಡುವ ಸಂಬಳ ನೋಡಿದರೆ ಅದು ಕಡಿಮೆ ಎನ್ನುವುದನ್ನು ಒಪ್ಪಿಕೊಳ್ಳಬೇಕು. ಆದರೆ ನಮ್ಮ ದೇಶದ ಸ್ಥಿತಿ ಗತಿಗಳು ಹೀಗಿದೆ, ನಮ್ಮ ಉತ್ಪತ್ತಿ ಹೀಗಿದೆ, ನಮ್ಮ ಖರ್ಚು ಹೀಗಿದೆ. ಮೈಸೂರು ಸಿಟಿಗೂ ಬೆಂಗಳೂರು ಸಿಟಿಗೂ ವ್ಯತ್ಯಾಸವಿದೆ, ಹಾಗೆಯೇ ಸೆಂಟ್ರಲ್ ಗೌರ್ನ್ಮೆಂಟಿನಲ್ಲಿರುವ ಸಂಬಳ ಸಾರಿಗೆಗಳಿಗೂ ಇಲ್ಲಿಯ ಸಂಬಳಸಾರಿಗೆಗಳಿಗೂ ವ್ಯತ್ಯಾಸವಿದೆ ಎಂದು ಹೇಳುತ್ತಾರೆ ಈ ಸಂದರ್ಭದಲ್ಲಿ ಒಂದು ಎಕ್ಸಾಂಪಲ್ಲನ್ನು ಹೇಳುತ್ತೇನೆ. 'Hundred Questions and Answers on U.S.S.R.' ಎಂಬ ಒಂದು ಪುಸ್ತಕವು ರಷ್ಯಾ ದೇಶದಿಂದ ಪ್ರಕಟವಾದದ್ದನ್ನು ನಾನು ಈಚೆಗೆ ಓದಿದೆ. ಅದನ್ನು ಓದಿದರೆ ಅವರಿಗೆ ಸ್ವಾತಂತ್ರ್ಯ ಬಂದಮೇಲೆ, ಆ ರಷ್ಯಾ ದೇಶದಲ್ಲಿದ್ದ ಜಾರ್ ಚಕ್ರವರ್ತಿ ನಿರ್ಮೂಲವಾದನಂತರ ಆ ದೇಶವು ಎಷ್ಟು ಬೇಗ ಅಭಿವೃದ್ಧಿಗೆ ಬಂದಿತು ಎನ್ನುವುದು ಗೊತ್ತಾಗುತ್ತದೆ. ಈ 'Hundred Questions and Answers U.S.S.R.' ಎಂಬ ಪುಸ್ತಕವನ್ನು ಓದಿದರೆ ಎಂತಹ ಮನುಷ್ಯನಿಗಾದರೂ ಅವನ ಕೆಲಸಕ್ಕೆ ತಕ್ಕಂತೆ ಸಂಬಳವಿರಬೇಕು ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ.

ನಮ್ಮ ಮಾನ್ಯ ಬೈರೇಗೌಡರು ಹೇಳಿದ ಹಾಗೆ, ಇವೊತ್ತಿನ ದಿನ ಒಬ್ಬ ರೈಲ್ವೇ ಪೋರ್ಟರಿಗೆ ತಿಂಗಳೊಂದಕ್ಕೆ 85 ರೂಪಾಯಿಗಳಷ್ಟು ಸಂಬಳ ಬರುತ್ತಿದೆ. ಆದರೆ ಯೂನಿವರ್ಸಿಟಿಯಲ್ಲಿ ಓದಿರುವ ಮತ್ತು ಬಿ.ಎಲ್. ಮತ್ತು ಬಿ.ಟಿ. ಪರೀಕ್ಷೆಗಳನ್ನು ಪಾಸು ಮಾಡಿಕೊಂಡಿರುವ ಗ್ರಾಜುಯೇಟುಗಳಿಗೆ ತಿಂಗಳೊಂದಕ್ಕೆ 60 ಮತ್ತು 20 ಅಥವಾ 25 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದರಿಂದ ಅವರು ಜೀವನ ಮಾಡುವುದೇ ಕಷ್ಟವಾಗಿದೆ. ಅವರಿಗೆ ಬರುವ ದುಡ್ಡು ಸಾಕಾಗದೆ ಇರುವುದರಿಂದ ಅವರು ಜೀವನ ಮಾಡುವುದೇ ಬಹಳ ಕಷ್ಟವಾಗಿದೆ. ಹಿಂದೆ ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟು ಆಫ್ ಪೋಲೀಸು ಆಫೀಸರುಗಳನ್ನು ಹಿಂದಿದ್ದ ಸರ್ಕಾರದವರು ಐ.ಪಿ.ಎಸ್. ದರ್ಜೆಗೆ ಸೇರಿಸುವಾಗ ಅವರಿಗೆ ಇದ್ದ ಸಂಬಳಗಳನ್ನು 450 ರೂಪಾಯಿಗಳಿಂದ, 1,400-1,500 ರೂಪಾಯಿಗಳವರೆಗೂ ಏರಿಸಿ ಬೇಸ್ತುಬಿದ್ದರು. ಅವರು ಹೇಗೆ ಬೇಸ್ತುಬಿದ್ದರು ಎನ್ನುವುದು ನನಗೆ ಚೆನ್ನಾಗಿ ಗೊತ್ತಿದೆ. ಆಗಿದ್ದ ಮಿನಿಸ್ಟರುಗಳು ದೇಶವನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತ ಈ ರೀತಿ ಮಾಡಿದರು. ಆಗಿದ್ದ ಮಂತ್ರಿಗಳು ಮತ್ತು ಆಗಿನಿಂದ ಹೊಸದಾಗಿ ಬಂದಿದ್ದ ಮಂತ್ರಿಗಳು ಕೂಡ ಈ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ನಾನು ಆಗ ಸಿವಿಲ್ ಸರ್ವಿಸಸ್ ಅಸೋಸಿಯೇಷನ್ನಿನಲ್ಲಿದ್ದೆ ಮತ್ತು ಆಗ ಈ ವಿಷಯವಾಗಿ ಒಂದು ರೆಪ್ರೆಸೆಂಟೇಷನ್ನನ್ನೂ ಸಹ ಕೊಟ್ಟಿದ್ದೆವು. ಅದನ್ನು ಕೂಡ ಸರಿಯಾಗಿ ಪರಿಶೀಲಿಸಲಿಲ್ಲ.

ಹೀಗೆ ಈಗ ಸರ್ಕಾರದಲ್ಲಿ ಡಿವಿಜನಲ್ ಕಮಿಷನರವರಿಗೆ ತಿಂಗಳೊಂದಕ್ಕೆ 1,400 ರೂಪಾಯಿಗಳಿಂದ 2,500 ರೂಪಾಯಿಗಳವರಿಗೆ ಮತ್ತು ಅದಕ್ಕೂ ಮೇಲ್ಪಟ್ಟು ಬರುತ್ತಿದೆ. ಇದನ್ನು ಕಡಿಮೆ ಮಾಡಿದರೆ ಸರ್ಕಾರಕ್ಕೆ ಉಳಿತಾಯವಾಗುವುದಿಲ್ಲವೇ? ಹಾಗೇ ಈಗ ಸಬ್ ಡಿವಿಜನ್ ಆಫೀಸರು ಎಂಬ ಅಧಿಕಾರಿಗಳಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ ಶಾಖೆಯ ಮಂತ್ರಿಗಳು).—ನೀವು ಸಬ್ ಡಿವಿಜನ್ನು ಆಫೀಸರು ಆಗಿರಲಿಲ್ಲವೇ?

ಶ್ರೀ ಜಿ. ಎನ್. ಪುಟ್ಟಣ್ಣ.—ಆಗಿದ್ದೆ. ನೀವು ಜಾರಿ ಮಾಡಿದ ಆರ್ಡರನ್ನು ನಾನು ಜಾರಿ ಮಾಡುತ್ತಿದ್ದೆ. ಹೀಗೆ ಈ ಆಫೀಸರು ಇರುವ ಅವಶ್ಯಕತೆಯೇ ಇಲ್ಲ. ಇಂತಹ ಅಧಿಕಾರಿಗಳನ್ನು ತಪ್ಪಿಸುವುದಕ್ಕೆ ಆಗುವುದಿಲ್ಲವೇ ಎಂದು ನಾನು ಕೇಳಬೇಕಾಗಿದೆ. ಈ ಆಫೀಸುಗಳಿರುವುದರಿಂದ ಏನೂ ಉಪಯೋಗವಿಲ್ಲ. ಹಾಗೆ ಹೇಳುತ್ತಿದ್ದರೂ ಕೂಡ ಸರ್ಕಾರ ಈ ಕಡೆ ಗಮನ ಕೊಟ್ಟಿಲ್ಲ. ರಾಜ ಮಹಾ

4 P.M.

ರಾಜರ ಒಂದು ಕಾಲವಿದ್ದದ್ದು ಹೋಯಿತು, ಸಂಬಳದಲ್ಲಿ ಭೇದಭಾವ ಜಾಸ್ತಿಯಾಗಿರುವುದರಿಂದ ಸುಖವಾಗಿ ಜೀವನವನ್ನು ಮಾಡಲು ಆಗುವುದಿಲ್ಲ. ಬಡ ನೌಕರರ ಪರಿಸ್ಥಿತಿಯನ್ನು ದೇವರೇ ಬಲ್ಲ. ಒಬ್ಬ ಕ್ಲಾರ್ಕು ಬೆಳಿಗ್ಗೆ $10\frac{1}{2}$ ಗಂಟೆಯಿಂದ ಸಾಯಂಕಾಲ $5\frac{1}{2}$ ಗಂಟೆಯವರೆಗೆ ಕೆಲಸ ಮಾಡಬೇಕಾಗುತ್ತದೆ. ಅವನ ಸ್ಥಿತಿಗತಿಗಳು ಬಹಳ ಸಂಕಟಕರವಾಗಿರುವುದರಿಂದ ಹೆಚ್ಚಿಗೆ ಹೇಳುವದಕ್ಕಾಗುವದಿಲ್ಲ. ದೊಡ್ಡ ಅಧಿಕಾರಿಗಳ ಭಾವನೆ ಏನು ಇದೆ ಎಂದರೆ—"I am a fine flower of humanity born to rule the people. Do as I tell you but do not do as I do." ಪಟೇಲ ಶಾನುಭೋಗರಿಗೆ ಭರವಸೆ ಕೊಟ್ಟು ಶೇಕಡಾ 50 ರಷ್ಟು ಜಾಸ್ತಿ ಮಾಡಿಬಿಟ್ಟರು. ಆದರೆ ಅದೇ ಎನ್. ಜಿ. ಓ. ಅಸೋಸಿಯೇಷನ್ನಿನವರು ಗಲಾಟೆ ಮಾಡುತ್ತಾರೆಂದು ಕಂಡುಬಂದಾಗ ಅವರಿಗೆ

(ಶ್ರೀ ಜಿ. ಎನ್. ಪುಟ್ಟಣ್ಣ)

ಶೇಕಡಾ ಒಂದೋ ಎರಡೋ ಅಷ್ಟನ್ನು ಕೊಡುತ್ತೇವೆಂದು ಹೇಳಿದರು. ಅದು ಕೂಡ ಎಲೆಕ್ಷನ್ ಬರುವ ಮುಂಚೆ ಆ ರೀತಿ ಹೇಳಿದರು. ಅದರಲ್ಲಿ ಅವರಿಗೆ ಹೆಚ್ಚಿಗೆ ಏನೂ ದೊರೆತಿಲ್ಲ. ಇನ್ನೊಂದು ವಿಷಯ. ರಾಜ್ಯ ಪುನರ್ವಿಂಗಡಣೆ ಆಗುವ ಪೂರ್ವದಲ್ಲಿ, ಹೈದ್ರಾಬಾದು, ಮುಂಬಯಿ ಕರ್ನಾಟಕ, ಮದ್ರಾಸ್, ಕೊಡಗು ಮುಂತಾದ ಪ್ರದೇಶಗಳಲ್ಲಿ ನೌಕರರನ್ನು ಕನ್‌ಫರ್ಮ್ ಮಾಡಿಬಿಟ್ಟಿದ್ದಾರೆ. ಆದರೆ ಮೈಸೂರಿನ ಬಡ ನೌಕರರಿಗೆ ಗ್ರೇಡ್ ಮಾಡಲಿಲ್ಲ. ಕನ್‌ಫರ್ಮ್ ಮಾಡಲಿಲ್ಲ. ಹೊರಗಿನಿಂದ ಬಂದ ನೌಕರರಿಗೆ ಸೀನಿಯಾರಿಟಿ ದೊರೆಯಿತು. ಆದರೆ ಈ ಬಡ ನೌಕರರನ್ನು ತ್ರಿಶಂಕುವಿನ ಹಾಗೆ ಮಾಡಿ ನಾಮಾಹಾಕಿ ಬಿಟ್ಟಿದ್ದಾರೆ. ಅನ್ಯಾಯವಾಗಿದೆ ಎಂದು ಹೇಳುವದಕ್ಕೋಸ್ಕರ ಮಂತ್ರಿಗಳನ್ನು ಕಾಣಬೇಕೆಂದರೆ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ ಪರಮಿಷನ್ ಕೊಡುವದಿಲ್ಲ. ಮಂತ್ರಿಗಳನ್ನು ಕಾಣಬೇಕೆಂದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಈ ವಿಷಯವನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡುವುದಕ್ಕಾಗಿ ನಾನ್-ಅಫೀಷಿಯಲ್ ಮೆಂಬರುಗಳನ್ನು ಸೇರಿಸಿ ಒಂದು ಕಮಿಟಿಯನ್ನು ನೇಮಕ ಮಾಡಬೇಕು. ಸಾವಿರದ ಮೇಲೆ ಸಂಬಳ ಪಡೆಯುವ ಅಧಿಕಾರಿಗಳು ಒಂದು ಕಡೆ ಇದ್ದು ಅಜೀರ್ಣವಾದಂತೆ ಇದ್ದರೆ ಇನ್ನೊಂದು ಕಡೆ ಬಡನೌಕರರು ಕಡಿಮೆ ಸಂಬಳಪಡೆದು ಉಪವಾಸ ಬೀಳುವಂಥ ಪರಿಸ್ಥಿತಿ ಉಂಟಾಗಿದೆ. ಸಾವಿರ ರೂಪಾಯಿ ಮೇಲೆ ಅಧಿಕಾರಿಗಳಿಗೆ ಸಂಬಳ ಏಕೆ ಬೇಕು ? ಹೆಚ್ಚು ಸಂಬಳ ದೊರೆಯುತ್ತಿದ್ದರೂ ತಮ್ಮ ಸ್ವಂತ ಖಾಸಗೀ ಕೆಲಸಕ್ಕಾಗಿ ಸಿನೀಮಾಕ್ಕೆ ಹೋಗುವದಕ್ಕೆ ಆಗಲಿ ಸರ್ಕಾರಿ ವ್ಯಾನನ್ನು ಜೀಪು ಉಪಯೋಗಿಸುತ್ತಾರೆ. ಸರ್ಕಾರಿ ಜೀಪು, ಡ್ರೈವರ್, ಪೆಟ್ರೋಲ್ ಎಲ್ಲವನ್ನು ಉಪಯೋಗಿಸುತ್ತಾರೆ. ಈ ರೀತಿ ಸರ್ಕಾರದ ಹಣವನ್ನು ದುರ್ವಿನಿಯೋಗ ಮಾಡುತ್ತಾರೆ. ಖಂಡಿತವಾಗಿ ಅವರು ಮನಸ್ಸು ಮಾಡಿದರೆ ಸದ್ವಿನಿಯೋಗ ಮಾಡಬಹುದು. ಹೆಚ್ಚು ಸಂಬಳ ಪಡೆಯುವವನು ಸಮೀಚೀನವಾದ ಊಟ ಮಾಡಿದರೆ ಬಡ ನೌಕರನಿಗೆ ಹೊಟ್ಟೆ ತುಂಬ ಅನ್ನ ದೊರೆಯುವದಿಲ್ಲ. ಹೊಟ್ಟೆಬಟ್ಟೆಗೆ ಇಲ್ಲದ ಮೂಲಕ ದೇಶದಲ್ಲಿ discontentment ಸ್ಥಿತಿ ಕಂಡುಬರುತ್ತದೆ. ದೊಡ್ಡ ದೊಡ್ಡ ಅಧಿಕಾರಿಗಳು ಬಹುಮಾನ, ಲಂಚ ಬೇಕಾದ ಹಾಗೆ ತೆಗೆದುಕೊಳ್ಳುತ್ತಾರೆ. ಅದೇ ಒಬ್ಬ ಬಡ ನೌಕರನು ಏನಾದರೂ ಕಾಫಿ ತಿಂಡಿ ತೆಗೆದುಕೊಂಡರೆ ಲಂಚ ತೆಗೆದುಕೊಂಡಿದ್ದಾನೆಂದು ಚಾರ್ಜು ಹಾಕುತ್ತಾರೆ. ಇದು ಯಾವ ನ್ಯಾಯ ? ಯಾವ ಧರ್ಮ ? ಹೈಕೋರ್ಟು ಜಡ್ಜುಗಳಿಗೆ 3,000 ದಿಂದ 4,000 ರೂಪಾಯಿ ಸಂಬಳ ದೊರೆಯುತ್ತದೆ. ಇಷ್ಟು ಸಂಬಳ ಯಾಕೆ ಕೊಡುತ್ತಾರೋ ಇದರ ಅರ್ಥ ಆಗುವದಿಲ್ಲ. ಹೈಕೋರ್ಟು ಜಡ್ಜುಗಳ ನೇಮಕವನ್ನು ಸೆಂಟ್ರಲ್ ಗವರ್ನಮೆಂಟ್ ಮಾಡುವುದೆಂದು ಹೇಳಲಾಗುತ್ತದೆ. ಆದರೆ ಈ ಎಲ್ಲಾ ಖರ್ಚಿನಭಾರವೂ ಸಾಮಾನ್ಯ ಪ್ರಜೆಯ ತಲೆಯ ಮೇಲೆ ಬೀಳುತ್ತದೆ. ಹೆಚ್ಚು ಟ್ಯಾಕ್ಸ್ ಕೊಡಬೇಕಾಗುತ್ತದೆ. L.M.P. ಪಾಸ್ ಮಾಡಿದ ಡಾಕ್ಟರಿಗೆ 30 ರೂಪಾಯಿ ಸಂಬಳದ ಸ್ಕೇಲು ಕೊಡಲಾಗಿದೆ. ಅವರ ಸ್ಕೇಲನ್ನು 150ರಿಂದ 200 ರೂಪಾಯಿಗಳವರೆಗೆ ಮಾಡಲು ಸರ್ಕಾರಕ್ಕೆ ಮನಸ್ಸಿಲ್ಲ. ಈ ರೀತಿ ಬಡ ನೌಕರರು ಕಡಿಮೆ ಸಂಬಳ ಪಡೆಯುವುದರಿಂದ ಬಹಳ ಕಷ್ಟಪಡುತ್ತಾರೆ.

ಈಗ ನಮ್ಮ ದೇಶದಲ್ಲಿ ಏನಾಗಿದೆಯೆಂದರೆ, ಯಾವ ಯಾವ ದೊಡ್ಡ ಮನುಷ್ಯರಿದ್ದಾರೋ ಮತ್ತು ಆಡಳಿತ ಪಕ್ಷದವರಿಗೆ ಯಾರು ಯಾರು ಸಂಬಂಧೀಕರುಗಳಿದ್ದಾರೋ ಅಂಥವರಿಗೆ ಮಾತ್ರ ಈ ದೊಡ್ಡ ಹುದ್ದೆಗಳು ದೊರೆಯುವುದಕ್ಕೆ ಅವಕಾಶವಿದೆ. ಆದರೆ ಕಾಂಗ್ರೆಸ್‌ನವರು ಬಾಯಲ್ಲಿ ಹೇಳುತ್ತಿರುವುದನ್ನು ನೋಡಿದರೆ "ನಮ್ಮಲ್ಲಿ ಆ ಜಾತಿಭೇದವೆನ್ನುವುದೇ ಇಲ್ಲ" ಎಂದು ಹೇಳುತ್ತಿದ್ದಾರೆ. ಹೀಗೆ ಬಾಯಲ್ಲೊಂದು ಹೇಳುತ್ತಾ ಕೈಲೊಂದು ರೀತಿ ಕೆಲಸ ಮಾಡುತ್ತಾ ಎಲ್ಲೆಲ್ಲಿ ಜಾತಿಭೇದ—ಭಿನ್ನ ಭೇದಗಳು ತಲೆಹಾಕಲು ಅವಕಾಶವಿರುವುದೋ ಅಂಥ ದೇಶ ಮತ್ತು ಜನಾಂಗಗಳು ಎಂದಿಗೂ ಮುಂದಕ್ಕೆ ಬರಲಾರವು. ಆದರೆ ನಾನು ವಿರೋಧಪಕ್ಷದಲ್ಲಿರತಕ್ಕವನಾದ್ದರಿಂದ ಕಾಂಗ್ರೆಸ್ ಪಕ್ಷವನ್ನು ಹೀಗೆಲ್ಲಾ ದೂಷಣೆ ಮಾಡುತ್ತಿದ್ದಾನೆಂದು ತಾವುಗಳು ಯಾರೂ ದಯವಿಟ್ಟು ಭಾವಿಸಬಾರದು. ದೇಶದಲ್ಲಿ ನಡೆಯುತ್ತಿರುವಂಥ ಸ್ಥಿತಿಗತಿಗಳ ನಿಜಾಂಶ ಯಾವ ರೀತಿಯದೆ ಎನ್ನುವುದನ್ನು ಮಾತ್ರ ನಾನೀಗ ಸಭೆಯ ಮುಂದೆ ಇಡುತ್ತಿದ್ದೇನೆ. ಇತ್ತೀಚೆಗೆ ದೇಶದಲ್ಲಿ ಈ ರೀತಿಯ ಕೋಮುವಾರು ಭಾವನೆಗಳೂ ಭಿನ್ನ ಭೇದಗಳೂ ದಿನದಿನಕ್ಕೂ ಜಾಸ್ತಿಯಾಗುತ್ತಿವೆ. ಇದರಿಂದ ಸಾಮಾನ್ಯ ಜನತೆಗೆ ಬಹಳ ಅನಾನುಕೂಲಗಳೂ ಅನ್ಯಾಯಗಳೂ ಆಗುತ್ತಿವೆ. ಇಂಥ ಅನ್ಯಾಯಗಳನ್ನು ತಡೆಗಟ್ಟಲು ಇರತಕ್ಕ ಒಂದೇ ಒಂದು ಮಾರ್ಗವೆಂದರೆ ಈ ಸಂಬಳ ಸಾರಿಗೆಗಳ ಪರಮಾವಧಿ ಮಟ್ಟವನ್ನು ಒಂದು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿರದಂತೆ ಮಾಡತಕ್ಕದ್ದೊಂದೇ ಮಾರ್ಗ. ಹಾಗೆ ಮಾಡದಿದ್ದರೆ ಪಕ್ಷಪಾತ ಭಾವನೆಗಳು ಬೆಳೆಯಲು ಅವಕಾಶವಾಗುತ್ತದೆ.

Sri D. DEVARAJ URS (Hunsur).—Sir, I rise to a point of order. If we read the resolution, we will find that the resolution says that there is no uniformity in the scales of pay between the Central Services and the State Services and so the resolution hopes to bring about uniformity between them. Now the scope of the discussion is much more than what the resolution itself contemplates. We are discussing the need to reduce the Central scales of pay and to increase the minimum in the State Services. I submit that this is definitely outside the scope of the resolution. The resolution as it stands does not contemplate any reduction in the scales of pay. It only contemplates to bring about uniformity between the scales of pay of the Central Services and the State Services. So I want a ruling from the Chair that the debate should be confined to the scope of the resolution.

Sri C. K. RAJAIAH SETTY (Chiknaikanahally).—There is no point of order. After all, uniformity is brought about either by reducing the higher scales of pay or by increasing the lower scales of pay to the level of the Central scales. I do not know why my Hon'ble

friend is under a misconception about the purpose of the resolution and why he has raised this point of order.

Sri H. M. CHANNABASAPPA (Krishnarajanagar).—Before a ruling is given, I would like to add a few words to what my Hon'ble friend Sri Devaraj Urs said. The scope of the resolution is sufficiently wide. It wants to bring about uniformity between the various scales.

Sri Y. VEERAPPA (Holenarsipur).—That is no point of order. The Hon'ble Member Sri Channabasappa is only trying to add some words to the point of order raised by Sri Devaraj Urs. So it is no point of order that he is raising.

Mr. DEPUTY SPEAKER.—He is only clarifying the point of order raised by the Hon'ble Member Sri Devaraj Urs.

Sri H. M. CHANNABASAPPA.—There are two scales of pay, namely, the State scales and the Central scales. Uniformity in the pay scales does not necessarily mean that the Central pay scales should be brought down to the State pay scales or the State pay scales should be enhanced to the level of the Central pay scales. Uniformity also includes the evolution of a new structure of pay scales which may be adopted as the uniform structure by the States as well as the Centre. Therefore, there is no point in the point of order.

Sri C. J. MUCKANNAPPA (Gubbi).—Sir, I rise to a point of order. My friend Sri Devaraj Urs raised a point of order and requested for a ruling from the Chair. My Hon'ble friend Sri Rajaiah Setty said that there was no point of order. No sooner my friend closed his speech than the Hon'ble Member Sri Channabasappa stood up and gave a ruling. So we presume for a moment that there are two Chairs in this House, one there and one here. I request the Speaker to call the member to order irrespective of whether he is a member on this side or on that side. The Chair should not take things like this very slightly and it must give a ruling on what Sri Channabasappa has said.

Mr. DEPUTY SPEAKER.—I have already said that Sri Channabasappa only clarified the point of order raised by Sri Devaraj Urs. So there is nothing for the Hon'ble Member to worry about.

ಶ್ರೀ ಜಿ. ಎನ್. ಪುಟ್ಟಣ್ಣ.—ಸ್ವಾಮಿ, ನಾವಿಲ್ಲಿ ಏರ್ ಕಂಡೀಷನ್ಡ್ ರೂಂನಲ್ಲಿ ಕುಳಿತಿದ್ದಾಗ್ಯೂ ಭಾಷಣಗಳಲ್ಲಿ ಏಕೋ ಬಹಳ ಬಿಸಿಯೇರುತ್ತಿದೆ. ಆದರೆ ಇದರಲ್ಲಿ ನನ್ನ ಉದ್ದೇಶ ಕಾಂಗ್ರೆಸ್ ಪಕ್ಷವನ್ನು ಜರೆಯಬೇಕೆಂದಾಗಲಿ ಅಥವಾ ದೂಷಣೆ ಮಾಡಬೇಕೆಂದಾಗಲಿ ಏನೂ ಇರುವುದಿಲ್ಲ. ದೇಶದ ನಿಜಸ್ವರೂಪವನ್ನು ಮಾತ್ರ ಬಿಚ್ಚಿ ತೋರಿಸುತ್ತಿದ್ದೇನೆ. ಆದರೆ ಇಲ್ಲಿರ ತಕ್ಕವರ ಪೈಕಿ ಕೆಲವರನ್ನು ಬಿಟ್ಟರೆ ಇನ್ನುಳಿದವರೆಲ್ಲಾ ಬಹಳ ಬಡತನದಲ್ಲಿದ್ದು ಕಷ್ಟಗಳನ್ನು ಅನುಭವಿಸಿರ ತಕ್ಕವರಾಗಿದ್ದಾರೆಂದು ನಾನು ಭಾವಿಸಿದ್ದೇನೆ. ಈ ದಿವಸ ಒಂದು ವೇಳೆ ಈಗಿರತಕ್ಕ ಮಂತ್ರಿಮಂಡಲದಲ್ಲಿ ನಾನೂ ಸಹ ಒಬ್ಬ ಮಂತ್ರಿಯೇನಾದರೂ ಆಗಿದ್ದಿದ್ದರೆ ನಾನು ಖಂಡಿತ ಈ ವಿಚಾರಗಳಲ್ಲಿ ಮಾತ್ರ ಕೇಂದ್ರ ಸರ್ಕಾರದಿಂದ ಬರುತ್ತಿದ್ದಂಥ ಆಜ್ಞೆಗಳನ್ನು ಪಾಲಿಸುತ್ತಿರಲಿಲ್ಲ. ನಾವು ಈ ಸಭೆಯಲ್ಲಿ ಏನಾದರೊಂದು ವಿಚಾರವನ್ನು ಚರ್ಚೆ ಮಾಡುವಾಗ ಸಭೆಗೆ ಅದನ್ನು ಒಪ್ಪಿಸಬೇಕಾಗಿರುವುದರಿಂದ ಅದಕ್ಕೆ ಸೂಕ್ತ ಕಂಡೆ ವಿಚಾರಗಳನ್ನು ತಿಳಿಸಿ ಅನಂತರ ಸಭೆಯು ಮುಂದಿರ ತಕ್ಕ ವಿಚಾರಕ್ಕೆ ಎಲ್ಲರೂ ಅನುಮತಿ ನೀಡಬೇಕೆಂದು ಕೇಳಿಕೊಳ್ಳಬೇಕೇ ಹೊರತು ಸುಮ್ಮನೆ ಸಭೆಯ ಮುಂದಿರತಕ್ಕ ವಿಚಾರವನ್ನು ಅದು ಇದ್ದಹಾಗೆಯೇ ನಾವೆಲ್ಲರೂ ಅಂಗೀಕರಿಸಬೇಕೆಂದು ಹೇಳಿದರೆ ಅದಕ್ಕೆ ಯಾರೂ ಒಪ್ಪುವುದಿಲ್ಲ. ಈ ದಿವಸ ಮೈಸೂರು ದೇಶಕ್ಕೆ ಹೊಸದಾಗಿ ಬಂದಿರತಕ್ಕ ಕನ್ನಡ ಪ್ರದೇಶದ ನೌಕರರುಗಳನೇಕರಿಗೆ ಇಂಗ್ಲೀಷೇ ಬರುತ್ತಿಲ್ಲ. ಆದಾಗ್ಯೂ ಅವರಿಗೆ ತಿಂಗಳಿಗೆ 300 ರೂಪಾಯಿಗಳ ಸಂಬಳವನ್ನು ಕೊಡಲಾಗುತ್ತಿದೆಯೆಂದು ನಾನು ಕೇಳುತ್ತಿದ್ದೇನೆ. ಈ ಸೆಕ್ರೆಟೇರಿಯಟ್ ಆಫೀಸುಗಳಲ್ಲೇ ಆ ವಿಚಾರ ಕೇಳುತ್ತಿದ್ದೇನೆ.

Sri H. S. RUDRAPPA (Minister for Agriculture).—The argument advanced by the Hon'ble Member is that there is no uniformity in the scales of pay of the officials coming from the various integrated areas of the new State. That is not the purpose of the resolution. The purpose of the resolution is quite different. He is elaborating his argument that we should bring about uniformity in the scales of pay prevailing in the various integrating units of the new State. That is not within the scope of the resolution.

Sri G. N. PUTTANNA.—Confining myself to the resolution I say that without giving an analogy, I cannot support the argument that I place before this House.

ದೇಶದಲ್ಲಿ ಅಂಥಾ ಭಿನ್ನ ಭಿನ್ನ ಪರಿಸ್ಥಿತಿಗಳಿವೆ ಒಬ್ಬರಿಗೊಂದು ರೀತಿಯ ಸಂಬಳ ಇನ್ನೊಬ್ಬರಿಗೆ ಇನ್ನೊಂದು ರೀತಿಯ ಸಂಬಳ. ಹೀಗೆ ಒಂದೇ ಕೆಲಸ ಮಾಡತಕ್ಕವರಿಗೆ ಎರಡು ವಿಧವಾದ ಸಂಬಳ ಸಾರಿಗೆಗಳನ್ನು ಕೊಡಲಾಗುತ್ತಿದೆ. ಆದರೆ ನಾನು ಯಾರೊಬ್ಬರನ್ನೂ ಸಂಕಟಕ್ಕೆ ಗುರಿ ಮಾಡಬೇಕೆಂಬ ಉದ್ದೇಶದಿಂದ ಹೇಳುತ್ತಿಲ್ಲ. ಈ ವ್ಯತ್ಯಾಸ

(SRI G. N. PUTTANNA)

ಗಳನ್ನು ನಾನು ಹೇಳುತ್ತಿರುವುದಕ್ಕೆ ಮುಖ್ಯ ಕಾರಣ ಗಂಟೆಗೆ 60 ಮೈಲಿ ವೇಗದಲ್ಲಿ ಆಡಳಿತ ನಡೆಸಿಕೊಂಡು ಹೋಗುತ್ತಿರುವ ನಮ್ಮ ಸರ್ಕಾರಕ್ಕೆ ವಿಚಾರಗಳು ಚೆನ್ನಾಗಿ ಮನವರಿಕೆಯಾಗಲೆಂದು ಈ ವ್ಯತ್ಯಾಸಗಳನ್ನೆಲ್ಲಾ ಎತ್ತಿ ಹಿಡಿಯಬೇಕಾಗಿದೆ. ಆದ್ದರಿಂದ ಈಗಲಾದರೂ ನಮ್ಮ ಸರ್ಕಾರದವರು ಸಂಬಳದ ಪರಮಾವಧಿ ದರವನ್ನು ಒಂದು ಸಾವಿರಕ್ಕೆ ಇಳಿಸಿ, ಅನ್ಯಾಯವಾಗಿ ದುರ್ವಿನಿಯೋಗವಾಗುತ್ತಿರುವ ದುಡ್ಡನ್ನು ಉಳಿಸಬೇಕೆಂದೂ ಮತ್ತು ಜವಾನರು ಇತ್ಯಾದಿ ಕಡಮೆ ದರ್ಜೆಯ ನೌಕರರ ಸಂಬಳ ಸಾರಿಗೆಗಳನ್ನು ಉತ್ತಮ ಪಡಿಸಿ ಇನ್ನು ಮುಂದಕ್ಕೆ ಸೆಂಟ್ರಲ್ ಸ್ಕೇಲುಗಳು—ಸ್ಟೇಟ್ ಸ್ಕೇಲುಗಳೆಂದು ಹೇಳುತ್ತಿರುವ ಭಿನ್ನ ಭೇದಗಳಿಗೆ ಅವಕಾಶವಿಲ್ಲದಂತೆ ಎಲ್ಲ ನೌಕರರಿಗೂ ಒಂದೇ ಸಮನಾದ ಸಂಬಳ ಸಾರಿಗೆಗಳನ್ನು ನಿರ್ಧಾರ ಮಾಡಿ ಇಂದಿನ ಮಂತ್ರಿಮಂಡಲ ಒಂದು ಆಚಂದ್ರಾರ್ಕವಾದ ಕಾರ್ಯವನ್ನು ಮಾಡಿ ಹೆಸರುಗಳಿಸಿಕೊಳ್ಳಬೇಕೆಂದೂ ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಸಭಾಪತಿಗಳೇ, ನಿನ್ನೆಯ ದಿವಸ ಕೂಡ ಇಂಥದೇ ಒಂದು ನಿರ್ಣಯ ಈ ಸಭೆಯ ಮುಂದೆ ಚರ್ಚೆಗೆ ಬಂದಿತ್ತು. ಆ ನಿರ್ಣಯದ ಮೇಲೆ ಬಹಳ ವಿಪುಲವಾಗಿ ಚರ್ಚೆಗಳೂ ಆದುವು. ಆದರೆ ಕೊನೆಗೆ ಆದ ಪರಿಣಾಮವೇನು ಎಂದರೆ ಆ ನಿರ್ಣಯವನ್ನು ಸಭೆಯ ಅನುಮತಿ ಮೇಲೆ ವಾಪಸ್ಸು ತೆಗೆದುಕೊಳ್ಳಲಾಯಿತು. ಆ ದೃಷ್ಟಿಯಿಂದ ನೋಡುವುದಾದರೆ ಈ ದಿವಸ ಇಲ್ಲಿ ಚರ್ಚೆಗೆ ಬಂದಿರತಕ್ಕ ನಿರ್ಣಯದ ಬಗ್ಗೆ ಆಗತಕ್ಕದ್ದೂ ಅಷ್ಟೇ. In the end, the mover of this resolution will withdraw it. ಇದರ ವಿಚಾರ ಹಾಗಿರಬೇಕಾಗಿದ್ದರೆ ನಾವೇಕೆ ಇದರ ಮೇಲೆ ಮಾತನಾಡಬೇಕು ? ಸುಮ್ಮನೆ ಸಭೆಯ ಕಾಲವನ್ನು ಏಕೆ ಹರಣ ಮಾಡಬೇಕು ? ನಾವು ಸುಮ್ಮನೆ ಇದನ್ನು ಕೈಬಿಟ್ಟು ಮುಂದಿನ ನಿರ್ಣಯಕ್ಕೆ ಏಕೆ ಹೋಗಬಾರದು ಎಂದು ನನಗೆ ಎನಿಸುತ್ತಿದೆ. ಆದರೆ ಯಾವ ಸದಸ್ಯರಾಗಲಿ ಮಾತನಾಡಿದ್ದು ಮುಗಿದ ಕೂಡಲೆ ಮತ್ತೊಬ್ಬ ಸದಸ್ಯರು ಅದಕ್ಕೆ ಒಂದು ಕ್ಲೋಷರ್ ಮೋಷರ್ ಮೂವ್ ಮಾಡದೆ ಇರುವುದರಿಂದ ನಾವೀಗ ಎದ್ದೆದ್ದು ಇಲ್ಲಿ ಮಾತನಾಡುವುದಕ್ಕೆ ಅವಕಾಶವಾಗಿದೆ. ನಾವು ಒಂದು ವೇಳೆ ಈ ಸಭೆಯಲ್ಲಿ ಈ ವಿಚಾರವಾಗಿ ಎಷ್ಟೋ ವಿಧವಾಗಿ ವಾದ-ವಿವಾದಗಳನ್ನು ಮಾಡಿದರೂ ಕೊನೆಗಾಗುವುದೇನೆಂಬುದು ನಮಗೆ ಈಗಾಗಲೇ ಗೊತ್ತಾಗಿದೆ. ಆಖೈರಿನಲ್ಲಿ ಸರ್ಕಾರದವರು ಕೇಂದ್ರ ಸರ್ಕಾರದ ಕಡೆಗೆ ಕೈ ತೋರಿಸಿಬಿಡುತ್ತಾರೆ. ಅಲ್ಲಿಗೆ ನಮ್ಮ ಆರ್ಗ್ಯುಮೆಂಟ್ಸ್‌ಗಳೆಲ್ಲಾ ಮುಗಿದು ಹೋದಂತೆಯೇ ಸರಿ. ಈ ನಿರ್ಣಯದಲ್ಲಾದರೂ ಏನು ಕೇಳಿದ್ದಾರೆಂದರೆ ಒಂದು ಸಮಿತಿಯನ್ನು ನೇಮಕ ಮಾಡಿ ಎಂಬುದಾಗಿ. ಹಾಗೆ ಒಂದು ಸಮಿತಿಯನ್ನು ನೇಮಕ ಮಾಡಲಾಗುತ್ತದೆಂದೇ ಇಟ್ಟುಕೊಳ್ಳೋಣ. ಆದರೆ ಕೊನೆಗೆ ಆ ಸಮಿತಿಯವರೇನು ತೀರ್ಮಾನ ಹೇಳುತ್ತಾರೆಂದರೆ ಬಹುಶಃ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಒಂದು ಡೈರೆಕ್ಟೀವ್ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿಬಿಡಬಹುದು. ಹೀಗೆಲ್ಲಾ ಇದರ ಭವಿಷ್ಯವಿರುವಾಗ ಇಲ್ಲಿ ನಾವೇಕೆ ಸುಮ್ಮನೆ ಈ ನಿರ್ಣಯದ ಬಗ್ಗೆ ಸಮರ್ಥನೆ ಮಾಡಬೇಕೋ ನನಗೆ ಅದು ತಿಳಿಯದಾಗಿದೆ. ಈ ನಿರ್ಣಯದಲ್ಲಿ ಅಡಕವಾಗಿರುವುದಾದರೂ ಏನು ? ಇದರ ಬಗ್ಗೆ ನಾನು ನನ್ನ ಮನ ಒಪ್ಪುವ ಹಾಗೆ ಬಡ ನೌಕರರ ಬಗ್ಗೆ ಏನು ಹೇಳಬೇಕಾಗಿದೆ ಎಂಬುದರ ಬಗ್ಗೆ ಬಹಳ ಆಲೋಚನೆ ಮಾಡಿ ನೋಡಿದೆನು. ಆದರೆ ಬಹಳ ಕಾಲದವರೆಗೂ ನನ್ನ ತಲೆಗೆ ಏನೂ ಹೊಳೆಯಲಿಲ್ಲ. ಆಖೈರಿನಲ್ಲಿ ನನಗೆ ಏನೋ ಒಂದು ಸಣ್ಣ ವಿಚಾರ ಹೊಳೆಯಿತು. ಆ ವಿಚಾರವೇನೆಂದರೆ ಹಿಂದೂ ದೇಶವು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡ ಮೇಲೆ ಇಲ್ಲಿ ಆಡಳಿತವನ್ನು ಪ್ರಾರಂಭಿಸಿದ ಬ್ರಿಟಿಷರು ಈ ದೇಶದ ಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಇಲ್ಲಿಯ ಜನರಿಗೊಂದು ಬೋಧೆ ಮಾಡಲು ಪ್ರಾರಂಭಿಸಿದರು. ಆ ಬೋಧೆ ಏನೆಂದರೆ "ನೀವುಗಳೆಲ್ಲರೂ ಆ ನಮ್ಮ ಇಂಗ್ಲೆಂಡ್ ದೇಶಕ್ಕೆ ಬಂದು I.C.S. ಪರೀಕ್ಷೆಯನ್ನು ಪಾಸು ಮಾಡಿ, ಆಗ ನಿಮಗೆ ನಾಲ್ಕು ಸಾವಿರ, ಐದು ಸಾವಿರ, ಆರು ಸಾವಿರ ರೂಪಾಯಿಗಳ ಸಂಬಳ ಕೊಡುತ್ತೇವೆ ; ನಿಮ್ಮನ್ನು ಗೌರ್ನರ್ ಆಗಿ ಅಪಾಯಿಂಟ್ ಮಾಡುತ್ತೇವೆ ; ಹೈಕೋರ್ಟಿನ ಜಡ್ಜಿಗಳನ್ನಾಗಿ ಮಾಡುತ್ತೇವೆ" ಎಂದು ಹೇಳಿ ಅವರು ನಮ್ಮ ಜನರನ್ನು ಸುಲಭದಿಂದ ಆಳಲು ಆ ಒಂದು ಡಿವೈಡ್ ಅಂಡ್ ರೂಲ್ ಪಾಲಿಸಿ ಮೇಲೆ ಹೀಗೆಲ್ಲಾ ಸಂಬಳ ಸಾರಿಗೆಗಳನ್ನು ಜಾಸ್ತಿ ಮಾಡಿ ಅದರ ಸಹಾಯದಿಂದ ಅವರಿಲ್ಲಿ ಅನೇಕ ವರ್ಷಗಳ ಕಾಲ ರಾಜ್ಯಭಾರ ಮಾಡಿದರು. ಆ ಸಂದರ್ಭದಲ್ಲಿ ಸಂಬಳ ಸಾರಿಗೆಗಳನ್ನು ಎರಡು ಸಾವಿರ, ನಾಲ್ಕು ಸಾವಿರ, ಐದು ಸಾವಿರ ಹೀಗೆಲ್ಲಾ ಮಾಡಿದರು. ನನಗೆ ಹೀಗೆ ಅನ್ನಿಸುತ್ತದೆ: ದೇಶದಲ್ಲಿ ಇಂಗ್ಲೀಷ್‌ನವರನ್ನು "ನಿಮ್ಮ ರಾಜ್ಯ ಬೇಡ, ನಿಮ್ಮ ಆಡಳಿತ ಬೇಡ, ನಿಮ್ಮ ಯಜಮಾನಿಕೆ ಬೇಡ ನಮಗೆ" ಎಂದು ಓಡಿಸಿದ ಜನ ನಾವು. ನಮ್ಮ ಕೈಯಲ್ಲಿ ಅಧಿಕಾರ ಬಂದ ಮೇಲೆ ಇಂತಹ ಒಂದು ಗಹನವಾದ ವಿಚಾರವನ್ನು ರಾಜ್ಯಸರ್ಕಾರವಾಗಲಿ ಹಾಗೂ ಕೇಂದ್ರ ಸರ್ಕಾರವಾಗಲಿ ಏತಕ್ಕೆ ಯೋಚನೆ ಮಾಡಲಿಲ್ಲ ? ಆ ರೀತಿ ಯೋಚನೆ ಮಾಡಿದ ರೆ, ಅಂತಹ ಹಾದಿಯಲ್ಲೇ ಏತಕ್ಕೆ ಹೋಗಲಿಲ್ಲ ? ಏತಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳಲಿಲ್ಲ ? ನಾನು ಈಗ ಈ ಸಭೆಯ ಮುಖಾಂತರ ಕೇಂದ್ರ ಸರ್ಕಾರದವರಿಗೆ ಅಪೀಲು ಮಾಡುತ್ತಿದ್ದೇನೆ. ಏತಕ್ಕೆಂದರೆ ಇಲ್ಲಿಯ ಸಂಬಳದಲ್ಲಿ ಡಿಸ್‌ಪ್ಯಾರಿಟಿ ಬಹಳ ಹೆಚ್ಚಾಗಿದೆ. ಇಂಟೆಗ್ರೇಷನ್ ಆದಮೇಲೆ, ಐ.ಎ.ಎಸ್. ಮತ್ತು ಐ.ಪಿ.ಎಸ್. ಹುದ್ದೆಗಳನ್ನು ಕ್ರಿಯೇಟ್ ಮಾಡಿದ ಮೇಲೆ, ಬೇರೆ ಪ್ರಾಂತ್ಯಗಳ ಅಧಿಕಾರಿಗಳು ಇಲ್ಲಿಗೆ ಬಂದ ಮೇಲೆ, ಅವರಿಗೆ ಕೊಡತಕ್ಕ ಸಂಬಳಕ್ಕೂ, ಅವರಷ್ಟೇ ಕೆಲಸ ಮಾಡುವ ನಮ್ಮ ರಾಜ್ಯ ಸರ್ಕಾರದಲ್ಲಿರತಕ್ಕ ಅಧಿಕಾರಿಗಳಿಗೆ ಕೊಡತಕ್ಕ ಸಂಬಳಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಇದರಿಂದ ಅಸಂತೋಷವೆಂಬುದು ಅವರ ನಾಡಿ ನಾಡಿಯಲ್ಲಿ, ಧಮನಿ ಧಮನಿಯಲ್ಲಿ ಮತ್ತು ಅಧಿಕಾರಿಗಳ ರಕ್ತದಲ್ಲಿ ಸೇರಿಕೊಂಡಿದೆ. ಆ ಕಡೆ ಡಿಗ್ರಿ ಪಡೆಯದೆ ಕುಳಿತಿರುವವರಿಗೆ 70 ರೂಪಾಯಿಗಳ ಸಂಬಳ, ನನ್ನ ಸ್ನೇಹಿತರು ಹೇಳಿದ ಹಾಗೆ ವಿಶ್ವವಿದ್ಯಾನಿಲಯದ ಡಿಗ್ರಿಯನ್ನು ಪಡೆದು ಬಂದಿರುವವರಿಗೂ 70 ರೂಪಾಯಿಗಳ ಸಂಬಳ. ಇದು ಯಾವ ನ್ಯಾಯ ? ಮಹಾತ್ಮಾ ಗಾಂಧಿಯವರ ಹೆಸರನ್ನು ಹೇಳಿ ರಾಜ್ಯಭಾರ ಮಾಡುವ ಜನ ನೀವು. ಇದನ್ನು ಹೇಗೆ ನೋಡಿಕೊಂಡು ರಾಜ್ಯಾಡಳಿತವನ್ನು ನಡೆಸುತ್ತಿದ್ದೀರಿ ? ಒಂದು ಸಾರಿ ಶ್ರೀಮತಿ ಸರೋಜಿನಿ ನಾಯುಡು ಅವರು ಒಂದು ವಾಕ್ಯವನ್ನು ಹೇಳಿದ್ದಾರೆ. ಅದು ಈ ರೀತಿ ಇದೆ. Shall we not follow the footsteps of our master ? ಮಹಾತ್ಮಾ ಗಾಂಧಿಯವರು ಕೆಳಗಿರುವವರು ಕೆಳಗೇ ಇರಲಿ, ಮೇಲೆ ಇರುವವರು ಮೇಲೆಯೇ ಇರಲಿ, ಅರಮನೆಯಲ್ಲಿರುವವರು ಅರಮನೆ

ಯಲ್ಲಿಯೇ ಇರಲಿ, ಸೆರೆಮನೆಯಲ್ಲಿರುವವರು ಸೆರೆಮನೆಯಲ್ಲಿಯೇ ಇರಲಿ—ಎಂದು ಏನಾದರೂ ಹೇಳಿದ್ದಾರೆಯೇ? ತಾವು ಮನಸ್ಸು ಮಾಡಿದರೆ ಇದೇನು ಹೆಚ್ಚಿನ ಕೆಲಸವಲ್ಲ. ಮಹಾತ್ಮಾ ಗಾಂಧಿಯವರ ತತ್ವಗಳನ್ನು ಎದುರಿಗೇ ಇಟ್ಟುಕೊಂಡು ಅವರ ಹೆಸರಿನಲ್ಲಿಯೇ ರಾಜ್ಯಭಾರ ಮಾಡುವ ಜನ ನೀವು ಈ ಅಂತರವನ್ನು ಹೋಗಲಾಡಿಸುವುದಕ್ಕೆ ಏತಕ್ಕೆ ಪ್ರಯತ್ನಪಡಲಿಲ್ಲ? ಈ ಪ್ರಶ್ನೆಯನ್ನು ತಮಗೂ ಮತ್ತು ಕೇಂದ್ರ ಸರ್ಕಾರಕ್ಕೂ ಕೇಳುತ್ತಿದ್ದೇನೆ. ತಾವು ಇಡೀ ಹಿಂದೂಸ್ಥಾನಕ್ಕೆ ಒಂದು ದೊಡ್ಡ ರಾಜ್ಯಾಂಗವನ್ನೇ ರಚನೆ ಮಾಡಿ ಬರೆದಿರಿ. ದೇಶದಲ್ಲಿರತಕ್ಕ ಕೀಳು, ಮೇಲು ಎಂಬ ಭಾವನೆಯನ್ನು ಹೋಗಲಾಡಿಸತಕ್ಕ ದಾರಿಯಲ್ಲಿ ತಾವೂ ಮತ್ತು ಕೇಂದ್ರ ಸರ್ಕಾರದವರೂ ಏತಕ್ಕೆ ಹೋಗಲಿಲ್ಲ? ಅಂದ ಮೇಲೆ ನೀವು ಅಧಿಕಾರದಲ್ಲಿರತಕ್ಕ ಜನ ''ಏನೋ ನಂಜಣ್ಣ ಅಂದರೆ ಬಂದಷ್ಟು ಗುಂಜಣ್ಣ'' ಎಂದುಕೊಂಡು ನೀವು ಸುಖವಾಗಿದ್ದರೆ ಸಾಕೇ? ನಿಮ್ಮಲ್ಲಿರತಕ್ಕ ಕಾಗದ ಪತ್ರಗಳ ಮೇಲೆ ಆರ್ಡರ್ ಮಾಡಿದರೆ ಸಾಕೇ? ಮಿಕ್ಕವರ ವಿಷಯ ಹೇಗಾದರೂ ಇರಲಿ ಎಂದು ಹೇಳಬಾರದು. ಇದಕ್ಕೆ ಏನಾದರೂ ಮಾಡಬೇಕು. ಎಂಥೆಂಥ ಕಠಿಣ ಪರಿಸ್ಥಿತಿಯನ್ನು ಮತ್ತು ಎಂಥೆಂಥ ಜಟಿಲವಾದ ವಿಷಯಗಳನ್ನು ತಾವು ತೀರ್ಮಾನ ಮಾಡಿದ್ದೀರಿ. ಇವತ್ತಿನ ದಿವಸ ಸುಮಾರು 560 ದೇಶೀಯ ಸಂಸ್ಥಾನಗಳನ್ನು ತೆಗೆದು ಹಾಕಿ, ಮಹಾರಾಜರುಗಳನ್ನು ರಾಜಪ್ರಮುಖರನ್ನಾಗಿಯೂ ಆಮೇಲೆ ಗೌರ್ನರನ್ನಾಗಿಯೂ ಮಾಡಿ ಐದು ಸಾವಿರ ರೂಪಾಯಿಗಳ ಸಂಬಳವನ್ನು ಅವರಿಗೆ ಕೊಡಬೇಕು ಎಂದು ಗೊತ್ತು ಮಾಡಿದ ಜನ ನೀವು ಅಧಿಕಾರದಲ್ಲಿದ್ದುಕೊಂಡು ಈ ಸಂಬಳ ಸಾರಿಗೆಗಳಲ್ಲಿರತಕ್ಕ ಅಂತರವನ್ನು ಕಡಮೆ ಮಾಡುವುದಕ್ಕೆ ಏತಕ್ಕೆ ಪ್ರಯತ್ನ ಮಾಡಲಿಲ್ಲ? ಅಧಿಕಾರದಲ್ಲಿ ಇಷ್ಟು ಮಂದಗಾಮಿಗಳಾಗುವುದಕ್ಕೆ ಕಾರಣವೇನು? ಏನೋ ಪ್ರಬಲವಾದ ಕಾರಣಗಳಿವೆ. ಅದಕ್ಕೋಸ್ಕರ ಹೀಗೆ ಮಾಡಿದ್ದೀರಿ. ನಿನ್ನೆ ತಾನೇ ಹಣಕಾಸಿನ ಮಂತ್ರಿಗಳಾದ ಶ್ರೀ ಮರಿಯಪ್ಪನವರು ಚೀಫ್ ಸೆಕ್ರೆಟರಿಯವರ ಸಂಬಳವೆಷ್ಟು ಎಂದು ಕೇಳಿದ್ದಕ್ಕೆ ಅವರ ಸಂಬಳವೇನು ಎಂಬುದನ್ನು ಏನೂ ಕೇಳಬೇಕಾಗಿಲ್ಲ. ಎಲ್ಲರಿಗೂ ಗೊತ್ತಿದೆ ಎಂದು ಹೇಳಿಬಿಟ್ಟರು. ಅವರಿಗೆ ಮೂರು ಸಾವಿರ ರೂಪಾಯಿಗಳ ಮೇಲೆ ಸಂಬಳವನ್ನು ಕೊಡುತ್ತಿದ್ದಾರೆ. ರಾಜ್ಯ ಪರಿಪಾಲನೆ ಮಾಡತಕ್ಕ ಮಂತ್ರಿಗಳಾಗಿರುವವರು 900 ರೂಪಾಯಿಗಳ ಸಂಬಳ ಪಡೆಯುತ್ತಿದ್ದಾರೆ. ಆದರೆ ಅವರ ಕೈಕೆಳಗೆ ಕೆಲಸ ಮಾಡತಕ್ಕ ಚೀಫ್ ಸೆಕ್ರೆಟರಿಯವರಿಗೆ ಮೂರು ಸಾವಿರ ರೂಪಾಯಿಗಳು ಅಂದರೆ ಏನು ಅರ್ಥ? ನಿಮ್ಮ ಮನೆಯಲ್ಲಿ ಹಾಸಿಗೆ ಹಾಸಿ, ಬಟ್ಟೆ ಒಗೆದು ಮನೆಗೆ ಹೋದರೆ ಆ ಬಡ ಜವಾನನಿಗೆ ಒಂದು ಹೊತ್ತಿಗೆ ಸರಿಯಾಗಿ ಊಟ ಮಾಡಲಿಕ್ಕೆ ದುಡ್ಡು ಇಲ್ಲ. ಹಿಮಾಲಯ ಪರ್ವತಕ್ಕೂ ಒಂದು ಗುಡ್ಡಕ್ಕೂ ಎಷ್ಟು ಅಂತರವಿದೆಯೋ ಆ ರೀತಿಯಾಗಿದೆ. ಹೀಗಿದ್ದರೆ ಅವರಿಗೆ ಸರ್ಕಾರದಲ್ಲಿ ಕೆಲಸ ಮಾಡುವುದಕ್ಕೆ ಯಾವರೀತಿ ಮನಸ್ಸು ಇರುತ್ತದೆ? ಅದನ್ನು ಸರಿಪಡಿಸುವುದಕ್ಕೆ ಮಂತ್ರಿಗಳು ಏಕೆ ಮನಸ್ಸು ಮಾಡಲಿಲ್ಲ? ಇದರಲ್ಲಿ ಧರ್ಮ, ನ್ಯಾಯ, ನೀತಿ ಇದೆಯೋ ಎಂಬುದನ್ನು ತೂಕ ಹಾಕಿ ನೋಡಿದರೆ ಇವತ್ತಿನ ದಿವಸ ನ್ಯಾಯ ಮಾಯವಾಗಿಹೋಗಿದೆ ಎಂದು ಹೇಳುತ್ತೇನೆ. ಆದರೆ ಅವರ ಹೆಸರಿನಲ್ಲಿ ರಾಜ್ಯಭಾರ ಮಾಡುತ್ತಿದ್ದಾರೆ. ನಾವು ದ್ದೇವೆ ಎಂದು ಬಾಯಲ್ಲಿ ಸುಮ್ಮನೆ ಹೇಳುತ್ತಾರೆ. ಈಗ ಉದಾಹರಣೆಗೆ ತೆಗೆದುಕೊಂಡರೆ, ಒಬ್ಬ ಜವಾನನಿಗೆ 50 ರೂಪಾಯಿ ಸಂಬಳ ಬರುತ್ತದೆ. ಅದರಲ್ಲಿ 25 ರೂಪಾಯಿ ಸಂಬಳ ಇನ್ನುಳಿದ 25 ರೂಪಾಯಿಗಳು ಅಲೋಯನ್ಸ್. ಇಷ್ಟು ಕೇವಲ ಅಲ್ಪ ಸಂಬಳದಿಂದ ಅವನು ಯಾವ ರೀತಿ ಜೀವನ ಮಾಡಬೇಕು? ಮೂರು ಸಾವಿರ ರೂಪಾಯಿಗಳಷ್ಟು ಸಂಬಳ ಬರುವವರ ಮನೆಯಲ್ಲಿ ಸುಮಾರು ಆರು ಜನರಿರುತ್ತಾರೆ. ಆದರೆ 50 ರೂಪಾಯಿಗಳಷ್ಟು ಸಂಬಳ ಪಡೆಯುವವನ ಮನೆಯಲ್ಲಿ ಸುಮಾರು 12 ಜನರಿರುತ್ತಾರೆ. ಅವರಿಗೆ ಬಂದ ಸಂಬಳದಿಂದ ಅವರ ಹೆಂಡತಿ ಮಕ್ಕಳನ್ನು ಸಾಕುವುದು ಹೇಗೆ? ಅವರ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಮಾಡಿಸುವುದು ಹೇಗೆ? ಅವರೂ ದೇಶದ ನಿಜವಾದ ಪ್ರಜೆಯೆಂದು ಅನ್ನಿಸಬೇಕಲ್ಲವೇ? ಇವೆಲ್ಲವನ್ನೂ ತಾವು ಯೋಚನೆ ಮಾಡಬೇಕು. ಈ ವಿಷಯದಲ್ಲಿ ಎಲ್ಲೋ ಒಂದು ತೊಡಕಿದೆ. ಅದನ್ನು ಸರಿಮಾಡುವ ಕಾರ್ಯಕ್ಕೆ ನಾವು ಕೈ ಹಾಕಬೇಕು. ಈ ನಿರ್ಣಯವನ್ನು ತಂದಿರುವ ನನ್ನ ಸ್ನೇಹಿತರು ಇದನ್ನು ಇನ್ನೂ ಬೇರೆ ರೀತಿಯಲ್ಲಿ ತಂದಿದ್ದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಮತ್ತು ಸರ್ಕಾರಕ್ಕೆ ಚೆನ್ನಾಗಿ ಈ ವಿಷಯ ಮನದಟ್ಟಾಗುವ ರೀತಿಯಲ್ಲಿ ಮಾತನಾಡಬಹುದಾಗಿತ್ತು. ಒಂದೇ ಮಾತಿನಲ್ಲಿ ಹೇಳುತ್ತೇನೆ. ಕೇಂದ್ರ ಸರ್ಕಾರದವರು ಹಣ ಸಹಾಯ ಮಾಡಿದರೂ ನಮ್ಮಲ್ಲಿ ದುಡ್ಡು ಇಲ್ಲ, ನಮ್ಮದು ಖೋತಾ ಬಡ್ಜೆಟ್ ಎಂದು ಹೇಳಿಕೊಂಡು ಈ ಸಂಬಳ ಸಾರಿಗೆಗಳ ಅಂತರವನ್ನು ಹೋಗಲಾಡಿಸಲು ಪ್ರಯತ್ನ ಪಡದೇ ಇರುವುದು ನನಗೆ ಅತ್ಯಂತ ವಿಷಾದವಾಗಿದೆ. ಈಗಲಾದರೂ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಈ ತಾರತಮ್ಯವನ್ನು ಹೋಗಲಾಡಿಸಲು ಶ್ರಮಿಸಬೇಕು. ಒಂದು ವೇಳೆ ಇದನ್ನು ಒಂದೇ ದಿವಸಕ್ಕೆ ಬಗೆಹರಿಸುವುದಕ್ಕೆ ತಮ್ಮ ಕೈಯ್ಯಲ್ಲಿ ಆಗದೆ ಇರಬಹುದು. ನಮಗೆ ಸ್ವಾತಂತ್ರ್ಯ ಬಂದ ಮೇಲೆ ದೇಶದಲ್ಲಿ ಹೆಚ್ಚಿಗೆ ಸಂಬಳವನ್ನು ಯಾರಿಗೂ ಕೊಡಬಾರದು. ಅವನ ಸಂಸಾರದ ಆಗು ಹೋಗುಗಳನ್ನನುಸರಿಸಿ ಅವನ ನಿತ್ಯ ಜೀವನದ ಪುಟ್ಟಕ್ಕನುಸಾರವಾಗಿ ಎಷ್ಟು ಬೇಕೋ ಅಷ್ಟನ್ನು ಮಾತ್ರ ಕೊಡಬೇಕೇ ಹೊರತು ಸುಮ್ಮನೆ ಐ.ಸಿ.ಎಸ್. ಮತ್ತು ಐ.ಪಿ.ಎಸ್. ಡಿಗ್ರಿ ಪಡೆದಾಕ್ಷಣಕ್ಕೆ ಇಷ್ಟಿಷ್ಟು ಸಾವಿರ ಗಟ್ಟಲೆ ಸಂಬಳಗಳನ್ನು ಕೊಟ್ಟರೆ, ಜನ ದೊಡ್ಡ ಚಳುವಳಿಯನ್ನೇ ಹೂಡಿಯಾರು. ತಾವು ಮಂತ್ರಿಗಳಾಗಿದ್ದೀರಿ, ಇವತ್ತಿನ ದಿವಸ. ದೇಶದಲ್ಲಿ ಕೊಟ್ಟಂಥ ಮಾತು, ಜನಗಳಿಗೆ ಹೇಳಿದ ಮಾತು—ಇವುಗಳನ್ನು ಸಾಧಿಸುವುದಕ್ಕೆ ನೀವು ಏತಕ್ಕೆ ಮನಸ್ಸು ಮಾಡಲಿಲ್ಲವೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದಕ್ಕೋಸ್ಕರ ತಾವು ದೊಡ್ಡ ಮನಸ್ಸು ಮಾಡಬೇಕು. ಇವತ್ತಿನ ದಿವಸ ನೀವು ಏನು ಹೇಳುತ್ತಿದ್ದೀರಿ ಎಂದರೆ, ಈಗಾಗಲೇ ಸರ್ಕಾರದ ನೌಕರರಿಗೆ ಸಂಬಳ ಸಾರಿಗೆಗೋಸ್ಕರ 11 ಕೋಟಿ ರೂಪಾಯಿಗಳು ಖರ್ಚಾಗುತ್ತಿವೆ, ಇವತ್ತಿನ ದಿವಸ ಸಂಬಳವನ್ನು ಯಾವುದಾದರೂ ಒಂದು ಮಟ್ಟಕ್ಕೆ ತರಬೇಕು ಎಂದರೆ, ಕನಿಷ್ಠ ವೇತನವನ್ನು ನೂರು ರೂಪಾಯಿಗಳಿಗೇರಿಸಬೇಕು ಎಂದರೆ ಆಗ ದೇಶಾಭ್ಯುದಯ ಕೆಲಸ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ. ಇದರಿಂದ ದೇಶದಲ್ಲಿ ಅಸಂತೋಷ, ಅತೃಪ್ತಿ ಅಸಮಾಧಾನ ನೌಕರರಲ್ಲಿ ಉಂಟಾಗಿ, ಅವರು ನಿಮ್ಮ ಕೈಗೆ ಸಿಲುಕದೆ ಹೋದರೆ ಪರಿಸ್ಥಿತಿ ಪ್ರಕೋಪಕ್ಕೆ ಹೋಗುತ್ತದೆ. ಅದಕ್ಕಿಂತ ಮುಂಚೆಯೇ ಈ ಜಾಡ್ಯವನ್ನು ಬಗೆಹರಿಸುವುದಕ್ಕೆ ಏನಾದರೂ ತಾವು ಪ್ರಯತ್ನಮಾಡಬೇಕು. ಆ ರೀತಿ ಮನಸ್ಸುಮಾಡದೆ ಹೋದರೆ, ಅವನು ಸಾಯಲಿಲ್ಲ, ಬದುಕಲಿಲ್ಲವೆಂದು ಮಾಡಿದರೆ, ನಾವು ಒಪ್ಪುವುದಕ್ಕಾ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಗುವುದಿಲ್ಲ. ಕೇಂದ್ರ ಸರ್ಕಾರದವರು ಈ ವಿಷಯದಲ್ಲಿ ಏತಕ್ಕೆ ದೊಡ್ಡ ಮನಸ್ಸು ಮಾಡಲಿಲ್ಲವೋ ಗೊತ್ತಿಲ್ಲ. ಕೇಂದ್ರ ಸರ್ಕಾರದವರು ದುಡ್ಡು ಇಲ್ಲವೆಂದು ಹೇಳಿ, ಅಮೇರಿಕಾ, ಇಂಗ್ಲೆಂಡ್, ಚೈನಾ, ರಷ್ಯಾಗಳನ್ನು ಸಹಾಯ ಮಾಡಿ ಎಂದು ಒಂದು ಕಡೆ ಕೇಳಿ, ಇನ್ನೊಂದು ಕಡೆ ಐ.ಎ.ಎಸ್., ಐ.ಪಿ.ಎಸ್., ಧರ್ಮ ರತ್ನಾಕರ, ರಾವ್‌ಬಹದ್ದೂರ್ ಎಂದು ಟೈಟಲ್ ಪಡೆದ ವರಿಗೆ ಎರಡು ಸಾವಿರ, ಮೂರು ಸಾವಿರ ರೂಪಾಯಿಗಳ ಸಂಬಳ ಕೊಡಿ ಎನ್ನುವುದರಲ್ಲಿ ಏನೂ ಅರ್ಥವಿಲ್ಲ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಶಾಖೆಯ ಮಂತ್ರಿಗಳು).—ಅದು ಟೈಟಲ್ ಅಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಆ ಮೂರು ಅಕ್ಷರಗಳನ್ನು ಕರೆಯುವುದೇ ನಾನು ಟೈಟಲ್ ಎನ್ನು ವುದು. ನಮ್ಮಲ್ಲಿ ಯೂನಿವರ್ಸಿಟಿ ಡಿಗ್ರಿ ಪಡೆದು ಕೊಂಡೇ ಎಷ್ಟೋ ಜನ ಡೆಪ್ಯುಟಿ ಕಮಿಷನರಾಗಿ ದಕ್ಷತೆ ಯಿಂದ ಕೆಲಸ ಮಾಡುತ್ತಿಲ್ಲವೇ? ಅದನ್ನು ಬಿಟ್ಟು ಸುಮ್ಮನೆ ಐ.ಎ.ಎಸ್. ಡಿಗ್ರಿ ಬಂದಾಕ್ಷಣಕ್ಕೆ ಅವರಿಗೆ ಹೆಚ್ಚು ಸಂಬಳ ಕೊಟ್ಟು ಅವರ ಸಂಬಳ ಸಾರಿಗೆಗೂ ಬಡ ನೌಕರರ ಸಂಬಳ ಸಾರಿಗೆಗೂ ಏತಕ್ಕೆ ಅಷ್ಟು ಅಂತರವನ್ನು ತೋರಿಸುತ್ತಿದ್ದೀರಿ? ಇದು ಹೇಗಿದೆ ಎಂದರೆ ಅವರನ್ನು ಸರ್ವಿಸ್ಸಿನಲ್ಲಿ ಸೇರಿಸುವುದು ಓಡದೆ ಇರುವ ಕುದುರೆಯನ್ನು ಗಾಡಿಗೆ ಕಟ್ಟಿದ ಹಾಗೆ ಇದೆ. ಸುಮ್ಮನೆ ಐ.ಎ.ಎಸ್. ಎಂದು ಹೆಸರು ಅಷ್ಟೇ ಹೊರತು ಇನ್ನೇನೂ ಇಲ್ಲ. ಒನಕೆ ಮಂಡಿ ಚಿಗುರು ತ್ತದೆಯೇ? ಅವರನ್ನು ನೇಮಕ ಮಾಡುವುದು ಹೀಗಾಗಿದೆ

4-30, P.M.

ಬರೀ ಬಿ. ಎ. ಮಾಡಿಕೊಂಡವರಿಗೆ ಒಂದು ಸಾವಿರ ರೂಪಾಯಿ ಸಂಬಳ. ಏನು ಅನ್ಯಾಯ! ಹೀಗಾದರೆ ಏನು ಸಮನ್ವಯ ಮಾಡುತ್ತೀರಿ? ಮಹಾತ್ಮ ಗಾಂಧಿಯವರು ಏನು ಹೇಳಿದರು! ಗಾಂಧಿಜಿ ಯವರು ಹೊರಟು ಹೋಗಿಬಿಟ್ಟರು. ಅವರು ಹೇಳಿದ ಹಾಗೆ ಮಾಡುತ್ತೇವೆ ಎನ್ನುವ ಜನಗಳ ಆಡಳಿತ ದಲ್ಲಿ ರಾಮರಾಜ್ಯ ಕಾಣುತ್ತಿದ್ದೇವೆಯೇ? ಈ ಬಡ ನೌಕರರಿಗೂ, ಮೇಲ್ಪಟ್ಟ ಅಧಿಕಾರಿಗಳಿಗೂ ಇರುವ ಸಂಬಳದ ಅಂತರವನ್ನು ಹೋಗಲಾಡಿಸಿ, ಬಡ ನೌಕರರಿಗೆ ಒಂದು ಹಿಡಿ ಅನ್ನ, ಅವರ ಮಕ್ಕಳಿಗೆ ವಿದ್ಯೆಯನ್ನು ಗಳಿಸುವ ಅವಕಾಶವನ್ನು ಕಲ್ಪಿಸಿ, ಅವರ ಮಕ್ಕಳೂ ಡಾಕ್ಟರಾಗಲಿ, ಮನೆ ಕಟ್ಟಿಕೊಳ್ಳಲಿ. ಅವರ ಮಕ್ಕಳೂ ಮೈಸೂರಿನ ಚೀಫ್ ಸೆಕ್ರೆಟರಿ ಆಗು ತ್ತಾರೆ ಎಂಬ ತೃಪ್ತಿ ಇಟ್ಟುಕೊಳ್ಳಲಿ, ಎಂಬ ಭಾವನೆ ತಮ್ಮಲ್ಲಿದ್ದರೆ ಸರ್ಕಾರಿ ನೌಕರರ ಸಂಬಳ ಗಳನ್ನು ಸಮನ್ವಯ ಮಾಡುವುದಕ್ಕೆ, ತಾವು ಏಕೆ ಪ್ರಯತ್ನ ಮಾಡಲಿಲ್ಲ? ಎಕನಾಮಿಕ್ಸ್, ಪಾಲಿಟಿಕ್ಸ್ ಎಂದು ಏನೇನೋ ಹೇಳುತ್ತೀರಿ. ಎಲ್ಲಿದೆ ನಿಮ್ಮ ಎಕಾನಮಿ? ನಿಮ್ಮ ಎಕಾನಮಿ ಎಲ್ಲಿ ಎಫೆಕ್ಟ್ ಮಾಡಿ ದ್ದೀರಿ? ನಾನು ಒಂದು ವಿಚಾರ ಕೇಳಿದೆ; ಅದನ್ನು ಸರ್ಕಾರದವರ ಮುಂದಿಡುತ್ತೇನೆ. ನಮ್ಮ ಫೈನಾನ್ಸಿ ಯಲ್ ಸೆಕ್ರೆಟರಿಯವರು ಈ ಊರಿಗೆ ಬರುವಾಗ, ಅವರ ಬರೀ ಲಗ್ಗೇಜ್ ಚಾರ್ಜು ಮೂರು ಸಾವಿರ ರೂಪಾಯಿ ಆಯಿತು ಎಂದು. ಒಬ್ಬ ಸೆಕ್ರೆಟರಿ ಮೈಸೂರು ಸಂಸ್ಥಾನಕ್ಕೆ ಬರಬೇಕಾದರೆ ಅವರ ಲಗ್ಗೇಜ್ ಚಾರ್ಜ್ ಮೂರು ಸಾವಿರ ರೂಪಾಯಿ ಖರ್ಚು ಮಾಡಬೇಕಾಯಿತೇ? ರಾಮ, ರಾಮ! ಶಿವ, ಶಿವ! ಇದನ್ನು ಕೇಳಿದರೆ ನಿಜವಾಗಿಯೂ ಎದೆ ಒಡೆಯುತ್ತದೆ. ಶ್ರೀ ವೀರಣ್ಣಗೌಡರಿಗೆ ಎಷ್ಟು ಜಮೀನು ಇದ್ದರೂ, ಕಂದಾಯ ಖರ್ಚು ಕಳೆದು, ಅವರಿಗೆ ಮೂರು ಸಾವಿರ ರೂಪಾಯಿ ಉಳಿಯುವುದಿಲ್ಲ. ಮೂರು ಸಾವಿರ ರೂಪಾಯಿ ಲಗ್ಗೇಜು ಚಾರ್ಜು! ಛೆ! ಛೆ! ಮಹಾತ್ಮ ಗಾಂಧಿಯವರು: "To the Princes, To the People, To the Women, To the Students, To the Servants of Government" ಎಂಬುದಾಗಿ ಹೀಗೆ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಅವು ಗಳಲ್ಲಿ ಹೇಳಿರುವಂತೆ ಈ ಅಧಿಕಾರಿಗಳಲ್ಲಿ, ದೇಶಾಭಿ ಮಾನ, ದೇಶವಾತ್ಸಲ್ಯ ಇರಬೇಕು: ಅದಿಲ್ಲದೆ, ಬರೀ ಮೂರು ಸಾವಿರ ರೂಪಾಯಿ ಕೊಡುವವನ ಲೇಖಣಿ ನಿಮಿಷಕ್ಕೆ ಇನ್ನೂರು ಪದಗಳನ್ನು ಬರೆಯುತ್ತದೆಯೇ? ಮುನ್ನೂರು ರೂಪಾಯಿ ಸಂಬಳ ತೆಗೆದುಕೊಂಡರೆ ಎರಡು ಪದ ಬರೆಯುತ್ತದೆಯೇ? ನನಗೆ ಏನೂ ಅರ್ಥವಾಗುವುದಿಲ್ಲ. ಗ್ಯಾಬರ್‌ಡೀನ್ ಸೂಟ್, ಫೇಲ್ಟ್ ಹ್ಯಾಟ್, 25-30 ರೂಪಾಯಿ ಬೆಲೆ ಬಾಳುವ ಫ್ಲೆಕ್ಸ್ ಷೂಸ್ ಹಾಕಿಕೊಳ್ಳಲಿ, ಇಂಗ್ಲೀಷ್ ಟೈ ಕಟ್ಟಿ ಕೊಳ್ಳಲಿ ಅಂತಲೇ ಅವರಿಗೆ ಇಷ್ಟು ಸಂಬಳ ಕೊಡು ವುದು? ಒಂದು ಕಡೆ, ಖಾದಿ ಹಾಕಿಕೊಂಡು, ಗ್ರಾಮ ಕೈಗಾರಿಕೆಗಳಿಗೆ ಉತ್ತೇಜನ ಕೊಡಿ, ಕಾಟೇಜ್ ಇಂಡಸ್ಟ್ರೀಸ್ ಅಭಿವೃದ್ಧಿಯಾಗಲಿ ಎಂದು ಹೇಳುತ್ತೀರಿ. ಇವತ್ತು ಖಾದಿ ಬಟ್ಟೆ ಹಾಕಿಕೊಂಡು ನೀವು ರಾಜ್ಯಭಾರ ಮಾಡುತ್ತಾ ಇಲ್ಲವೇ? ಗ್ಯಾಬರ್‌ಡೀನ್ ಸೂಟ್ ಹಾಕಿಕೊಂಡ ತಕ್ಷಣ, ಸಂಬಳ 1,500 ರೂಪಾಯಿಗೆ ಏರುತ್ತದೆ. ದೇಶದಲ್ಲಿರುವ ಅಭಾವವನ್ನು ಕಂಡು, ನಮ್ಮ ರಾಜ್ಯಪಾಲರು ವೇತನ ಬೇಕಾಗಿಲ್ಲ ಎಂದು ಹೇಳಿದರು. ಹಾಗೆಯೇ 2000–3000 ರೂಪಾಯಿ ಸಂಬಳ ತೆಗೆದು ಕೊಳ್ಳು ವವರೂ ಹೇಳಬೇಕು: "ನಾವು ಸಾವಿರ ರೂಪಾಯೇ ತೆಗೆದು ಕೊಳ್ಳುತ್ತೇವೆ. ನಾವೆಲ್ಲಾ ಭಾರತೀಯರು; ನಮ್ಮ ಅಣ್ಣ ತಮ್ಮಂದಿರು, ನೂರು ರೂಪಾಯಿ ಸಂಬಳ ತೆಗೆದುಕೊಳ್ಳುವವರು, ಕ್ಷಾಮದಿಂದ ನರಳುತ್ತಿದ್ದಾರೆ. ನಮ್ಮ ನಾಯಕರು ನಮ್ಮ ದೇಶವನ್ನು ಕಟ್ಟಬೇಕೆಂಬ ಪ್ರಯತ್ನದಲ್ಲಿರುವಾಗ, ನಾವೂ ಕೈಲಾದ ಸಹಾಯ ಮಾಡಬೇಕು." ಎನ್ನುವುದಾಗಿ ದೊಡ್ಡ ದೊಡ್ಡ ಅಧಿಕಾರಿ ಗಳು ಸ್ವಲ್ಪ ಮನಸ್ಸು ಮಾಡಿ ತಮ್ಮ ಸಂಬಳಗಳನ್ನು ಕಡಿಮೆ ಮಾಡಿಕೊಂಡರೆ, ಸಣ್ಣ ಪುಟ್ಟ ನೌಕರರಿಗೂ ತಾವು ನೂರು ರೂಪಾಯಿನ ಮೇಲೆ ಸಂಬಳ ಕೇಳಬಾ ರದು ಎಂಬ ಮನಸ್ಸು ಬರಬಹುದು. ಪಂಡಿತ ಜವಹರ ಲಾಲ್ ನೆಹರೂ ಅವರಿಗೆ ನೀವು ಹೇಳಬೇಕು—"ಬೇಡಿ, ಈ ಭಾರಿ ಸಂಬಳದವರು ನಮಗೆ. ಈ ಅಧಿಕಾರಿಗಳ ಸಂಬಳಗಳನ್ನು ಸಕಾರಗಳಿಂದ ಸರ್ಕಾರಗಳಿಗೆ ಇಳಿಸಿ, ಈ ದಾರಿದ್ರ್ಯ, ಬಡತನವನ್ನು ಹೋಗಲಾಡಿಸುವುದಕ್ಕೆ ಮನಸ್ಸು ಮಾಡಿ" ಎಂದು. ಈ ಸಂಬಳಗಳಲ್ಲಿರುವ ವ್ಯತ್ಯಾಸವನ್ನು ಹೋಗಲಾಡಿಸುವುದಕ್ಕೆ ತಂದಿರುವ ನಿರ್ಣಯಕ್ಕಾಗಿ, ಶ್ರೀ ಬೈರೇಗೌಡರನ್ನು ವಂದಿಸ ಬೇಕಾಗಿದೆ. ನಿಜವಾಗಿಯೂ ನಿಮ್ಮ ಪಾಲಿಸಿಗಳನ್ನು ಇಂಪ್ಲಿಮೆಂಟ್ ಮಾಡುತ್ತಾ ಇರುವವರು ಯಾರು? ಅಮಲ್ದಾರರು, ರೆವೆನ್ಯೂ ಇನೆಸ್ಪೆಕ್ಟರು, ಮತ್ತು ಇತರ ಸಣ್ಣ ಅಧಿಕಾರಿಗಳು. ಅವರು ಸರಿಯಾಗಿ ದಕ್ಷತೆಯಿಂದ ಕೆಲಸ ಮಾಡದಿದ್ದರೆ, ನೀವು ಇಲ್ಲಿ ಕುಳಿತುಕೊಂಡು ಏನು ಮಾಡಿದರೂ ಉಪಯೋಗವಾಗುವುದಿಲ್ಲ. ಈ ಸ್ಕೇಲು ಗಳಲ್ಲಿರುವ ಅಂತರವನ್ನು ಹೋಗಲಾಡಿಸಲು, ಈ ಸಣ್ಣ ಕಮಿಟಿಯನ್ನು ಅಪಾಯಿಂಟ್ ಮಾಡುವುದು ನನಗಂತೂ ಇಷ್ಟವಿಲ್ಲ. ಈ ಕಮಿಟಿಯಿಂದ ಏನೂ ಪ್ರಯೋಜನ ವಾಗುವುದಿಲ್ಲ. ಒಂದು ಸಣ್ಣ ಕಮಿಟಿಯನ್ನು ರಚಿಸಿ

ಮಾಡಿದರೆ, ಅದು ಒಂದು ರಿಪೋರ್ಟ್ ಕೊಡುತ್ತದೆ, ಏನೋ ಒಂದು ಸಲ್ಯೂಷನ್, ಒಂದು ಮಾರ್ಗ ಕಂಡು ಹಿಡಿಯುತ್ತದೆ. ಹೋಗಲಿ, ಅಷ್ಟಕ್ಕಾದರೂ ಒಂದು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಹಿಮಾಚಲದಿಂದ ಕನ್ಯಾಕುಮಾರಿಯವರೆಗೆ ನಾವೆಲ್ಲಾ ಒಂದೇ ಎಂದು ಹೇಳುತ್ತಾರಲ್ಲ, ಕೇಳಿ ಆ ಪಂಡಿತ ಜವಹರಲಾಲ್‌ರವರನ್ನ: "ಯಾರಿಗೋ ಒಬ್ಬನಿಗೆ 1 ಸಾವಿರ, 2 ಸಾವಿರ, 3 ಸಾವಿರ, 4 ಸಾವಿರ ರೂಪಾಯಿ ಕೊಡುವುದಕ್ಕೆ, ಇನ್ನೊಬ್ಬನಿಗೆ ಅರೆ ಹೊಟ್ಟೆ ಅನ್ನ, ಅರಬೆತ್ತಲೆ ಮಾಡಬೇಕೇ?" ಪಂಡಿತ ನೆಹರುರವರಲ್ಲಿ ನನಗೆ ಅತ್ಯಂತ ಗೌರವ ಇದೆ. ನಮ್ಮ ಕೇಂದ್ರ ಸರ್ಕಾರದ ಮುಖಂಡರುಗಳಲ್ಲಿಯೂ ನನಗೆ ಬಹಳ ಗೌರವ ಇದೆ. ಆದರೆ ಅವರ ಹತ್ತಿರ ಇರುವ ದೊಡ್ಡ ಅಧಿಕಾರಿಗಳಿಗೆ ಮಂತ್ರಿಗಳ access ಇದೆ ಅಂತ, ಯಾವುದೋ ಕಾನೂನು ಅವರಿಗೆ ತೋರಿಸಿ, ನೋಟ್ ಹಾಕಿ, ಈ ಭಾರಿ ಸಂಬಳಗಳನ್ನು ಪಡೆಯುವುದಕ್ಕೆ ಅನುಮತಿ ಪಡೆದಿದ್ದಾರೆ. ಆದರೆ ಸಣ್ಣ ಪುಟ್ಟ ನೌಕರರು, ನಾನ್-ಗೆಜೆಟೆಡ್ ಅಧಿಕಾರಿಗಳು ಈ ಅಂತರವನ್ನು ಹೋಗಲಾಡಿಸಿ ಎಂದು ಹೇಳುವುದಕ್ಕೆ, ಒಂದು ರೆಪ್ರಸೆಂಟೇಷನ್ ಕೊಡಬೇಕಾಗುತ್ತದೆ. ಆ ರೆಪ್ರಸೆಂಟೇಷನ್ ತಮ್ಮ ಹತ್ತಿರ ಬರುತ್ತಿಲ್ಲ. ಅದು ಬರುವ ಹೊತ್ತಿಗೆ ವಾಟರ್ ಡೌನ್ ಆಗಿ ಹೋಗಿರುತ್ತದೆ. ಇಂಟಿಗ್ರೇಷನ್ ಆದ ಮೇಲಂತೂ ಈ ಸಂಬಳದ ಸ್ಕೇಲುಗಳ ವ್ಯತ್ಯಾಸ ನಮ್ಮ ರಾಜ್ಯದಲ್ಲ ಜಾಸ್ತಿಯಾಗಿದೆ. ಇದನ್ನೆಲ್ಲಾ ನೋಡಿದರೆ, ನನಗೆ ಅನ್ನಿಸುತ್ತದೆ: "ಏನಪ್ಪಾ, ಈ ಸರ್ಕಾರಿ ನೌಕರರಲ್ಲಿ ನಿಜವಾಗಿಯೂ ನಮ್ಮ ದೇಶ ಕಟ್ಟಬೇಕೆಂಬ ಮನಸ್ಸಿದೆಯೇ? ಇವರು ಸರ್ಕಾರವನ್ನೇ ಏನು ಮಾಡಿಬಿಡುತ್ತಾರೋ? ಜಿಯೋಪಾರ್ಡೈಸೇ ಮಾಡಿಬಿಡುತ್ತಾರೋ! ಈ ನೌಕರರ ಅಸಮಾಧಾನ ಎಷ್ಟು ದೂರ ಹೋಗುತ್ತದೋ" ಎನ್ನುವ ಭಯ ನನಗಾಗಿದೆ. ಸಣ್ಣ ಪುಟ್ಟ ನೌಕರರಿಗೆ ಅನ್ಯಾಯವಾಗಿದೆ. ಇದು ಹೋಗಬೇಕು. ಸರ್ಕಾರಿ ನೌಕರರ ಸಂಬಳದಲ್ಲಿರುವ ವ್ಯತ್ಯಾಸ ಹೋಗಬೇಕು ಎನ್ನುವ ವಿಚಾರದಲ್ಲಿ ಏಕಾಭಿಪ್ರಾಯವಿದೆ. ಅದಕ್ಕೋಸ್ಕರ, ಶ್ರೀ ಬೈರೇಗೌಡರ ಈ ನಿರ್ಣಯವನ್ನು ಒಂದು ಪ್ರೆಸ್ಟೀಜ್‌ಗಾಗಿ ವಾಪಸ್ಸು ತೆಗೆದುಕೊಳ್ಳಬಾರದು. ಸರ್ಕಾರದವರು ಕೂಲಂಕಷವಾಗಿ ಈ ವಿಷಯಗಳನ್ನೆಲ್ಲಾ ವಿಮರ್ಶೆಮಾಡಿ, ಒಂದು ಸಣ್ಣ ಕಮಿಟಿಯನ್ನು ಈ ಸಂಬಳ ಸ್ಕೇಲುಗಳಲ್ಲಿ ಇರುವ ಅಂತರವನ್ನು ಹೋಗಲಾಡಿಸುವ ವಿಷಯದಲ್ಲಿ ರಿಪೋರ್ಟ್ ಮಾಡಲು ರಚಿಸುತ್ತಾರೆಂದು ನಂಬಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

*Sri MAHMOOD SHARIFF (Broadway).—Mr. Speaker, Sir, the resolution under discussion seeks for the appointment of a Committee in order to advise ways and means for bringing about uniformity in the scales of pay of the Central as well as State services. It is argued that unless this is done, it will not be conducive to efficient management of the Departments concerned and that it is going to create some ill-feeling between the persons concerned. So far as this resolution is concerned, it does not seek the immediate implementation of the proposal because it seems to me that the gentleman who has placed this proposition before our House knows so many handicaps in the immediate implementation of this resolution. What he wants is that an expert committee may be appointed so that these people may examine all aspects of the question and examine whether some people are overpaid and others are underpaid. Therefore, I do not think that any serious objection could be raised either by the Government or by any member of the party, whatever party he may belong to. So far as this point is concerned, it is not necessary for me to dilate upon this point. India has now become one unit. It has become one entity so to speak from political as well as other points of view and all the key departments which were formerly under the States have been taken over by the Centre and so far as other Departments that remain with the State are concerned, they are under the direct control of the Government. So far as the Central Government is concerned, it has become very centralised so to speak and it is very necessary because the country is in a formative stage and such kind of centralisation is very necessary. Modern trend in all countries has been to have a uniform administration. Therefore this centralisation to which I just now referred seems to me to be justifiable in view of the fact that our country is still in the formative stage of development. You may remmber that under the pressure of public opinion, in order to redraw the map of India anew, also in pursuance of the agitation carried on by different people to see that so far as these States are concerned, they might be made larger in the interests of administrative efficiency, a Commission known as the Fazl Ali Commission was appointed and in pursuance of the recommendation made by that Commission our State with larger territorial limits came into being and officers belonging to other States have come to our own state with the result that the work-load has become very heavy. It seems to me that to meet the ends of justice the peoeple serving here should be given higher pay. But that does not

(SRI MAHMOOD SHARIFF)

mean that those that are overpaid should get an increase. As has been pointed out, the I.A.S. officers and the I.P.S. officers who have been drawing higher salaries do not deserve any increase. I submit many people belonging to old Mysore have been receiving very petty salaries and they cannot keep their pot boiling. Therefore, the whole thing has to be reviewed. Apart from these things, after integration of the five areas, people coming from different places are working in one and the same Department but they have been receiving better scales of pay while those working here are receiving lower scales of pay which would naturally produce dissatisfaction in the people. Therefore, what I feel is that the Committee which is proposed to be appointed should go into all aspects of the question and see whether there is justification for certain categories of people to receive higher rates of pay and others who receive apittance should continue like this. Day before yesterday, during the question hour, my friend the Finance Minister said that these anomalies should necessarily continue under the passing stage of things for some time more. So far as our finances are concerned, they are such that they would not justify the increase of pay so far as certain categories are concerned. But it seems to me that these anomalies could certainly be set at naught. Suppose the Committee takes into consideration all the facts as they exist and then comes to some conclusion. This committee must consist of expert people. Let them examine the whole thing. So far as the mover of the resolution is concerned, he does not want the uniform scales to be implemented immediately. So, from all points of view, there is justification for the appointment of such a Committee so that all the aspects of the question may be taken into consideration and they may come to a decision. After all, six months' time is such that within that time our conditions may improve and all porsons connected with this may be satisfied. As a matter of fact, I do appreciate the view-point of those belonging to the other group and those belonging to the Congress that certain members have been overfed. What is the meaning in these days when the country is passing through a very delicate situation that people should receive Rs. 1,400? Why should the Chief Secretary, as was pointed out, get Rs. 3,000? I think an appeal may be made to Pandit Nehru to bring the scales of pay in conformity with the national income so that the Second Five-Year Plan may be successfully pushed through. I wholeheartedly support the resolution moved by Sri Byre Gowda.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೃಷ್ಣರಾಜನಗರ).—ಈ ನಿರ್ಣಯದಲ್ಲಿ ಮೂರು ಮುಖ್ಯಾಂಶಗಳು ಅಡಕವಾಗಿವೆ ಒಂದನೆಯದು ಕೇಂದ್ರ ಸರ್ಕಾರದಲ್ಲಿರತಕ್ಕ ಸಂಬಳ ಸಾರಿಗೆಗಳಿಗೂ ಮತ್ತು ಪ್ರಾಂತ ಸರ್ಕಾರಗಳಲ್ಲಿರತಕ್ಕ ಸಂಬಳಸಾರಿಗೆಗಳಿಗೂ ಅಂತರ ಬಹಳ ಇದೆ. ಈ ಅಂತರದಿಂದ ಅತೃಪ್ತಿ ಅಸಮಾಧಾನ ಕೆಲಸಗಾರರಲ್ಲಿ ಹೆಚ್ಚಿದೆ. ಇದನ್ನು ಕಡಿಮೆ ಮಾಡಬೇಕಾದರೆ ಎಲ್ಲರಿಗೂ ಅನುಕೂಲವಾದ ಯೂನಿಫಾರಂ ಪೇ ಮಾಡಬೇಕು ಎಂಬುದು. ಎರಡನೆಯದು ಯಾವರೀತಿ ಮಾಡಬೇಕೆಂಬುದರ ಬಗ್ಗೆ ಒಂದು ಕಮಿಟಿ ಮಾಡಬೇಕು ಎಂಬುದು. ಈ ವಿಷಯು ಒಂದು ದೊಡ್ಡ ತತ್ವವನ್ನು ಒಳಗೊಂಡಿದೆ. ಒಂದೇಸಮನಾದ ಕೆಲಸಕ್ಕೆ ಅಥವಾ ಒಂದೇ ವಿಧವಾದ ಕೆಲಸಕ್ಕೆ ಒಂದು ಪ್ರಮಾಣದಲ್ಲಿ ಸಂಬಳ ಸಾರಿಗೆ ಕೊಡಬೇಕು ಎನ್ನುವುದು ಎಲ್ಲರೂ ಒಪ್ಪತಕ್ಕ ಮಾತು. ಮತ್ತು ಇದನ್ನು ಕಾನ್‌ಸ್ಟಿಟ್ಯೂಷನ್‌ನಲ್ಲಿ ಕೂಡ ಡೈರೆಕ್ಟಿವ್ ಪಾಲಿಸಿ ಆಗಿ ಇಟ್ಟುಕೊಂಡಿದ್ದಾರೆ. ಹೀಗಿರುವಾಗ ನಾವು ಒಂದೇ ಸ್ಥಳದಲ್ಲಿ ಒಂದೇ ತರಹ ಕೆಲಸಕ್ಕೆ ವಿಧವಿಧವಾದ ಸಂಬಳ ಸಾರಿಗೆಗಳನ್ನು ಕೊಡುತ್ತಿರುವುದು ನಮ್ಮ ನೀತಿಗೆ ವಿರೋಧವಾಗುತ್ತದೆ.

ಎರಡನೆಯದು ಕೇಂದ್ರಸರ್ಕಾರದವರು ಕೊಡುತ್ತಾ ಇರತಕ್ಕ ಸಂಬಳಸಾರಿಗೆ ಮತ್ತು ನಮ್ಮ ಸಂಸ್ಥಾನದಲ್ಲಿ ಕೊಡುತ್ತಾ ಇರುವ ಸಂಬಳ ಸಾರಿಗೆ ಇವೆರಡೂ ಕೂಡ ನಮ್ಮ ದೇಶದ ಉತ್ಪನ್ನ ಏನಿದೆ ಅದಕ್ಕೆ ಅನುಗುಣವಾಗಿದೆಯೇ ಎಂಬುದನ್ನು ಪ್ರಶ್ನೆ ಮಾಡಬೇಕು. ಈ ವಿಷಯು 1955ನೆಯ ಇಸ್ವಿ ಮಾರ್ಚಿ ತಿಂಗಳಲ್ಲಿ ಆಗಿದ್ದ ಲೆಜಿಸ್ಲೇಟಿವ್ ಅಸೆಂಬ್ಲಿ ಮುಂದೆ ಬೇರೆ ರೂಪದಲ್ಲಿ ಬಂದಿತ್ತು. ಆಗ್ಗೆ ಬಹಳ ಕೂಲಂಕಷವಾಗಿ ಅದರಮೇಲೆ ಚರ್ಚೆ ನಡೆಯಿತು. ಎಲ್ಲಿಯೇ ಆಗಲಿ ಮೈಸೂರು ಸಂಸ್ಥಾನದ ಸರ್ಕಾರದಲ್ಲಿಯಾಗಲಿ ಕೇಂದ್ರ ಸರ್ಕಾರದಲ್ಲಿಯಾಗಲಿ ಒಂದು ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ಎಲ್ಲೂ ಯಾವ ಅಧಿಕಾರಿಗೂ ಸಂಬಳ ಇರಕೂಡದು ಎನ್ನತಕ್ಕದ್ದು ಆ ನಿರ್ಣಯದ ಮುಖ್ಯಾಂಶ.

ಆ ವಿಷಯವನ್ನು ಪ್ರತಿಪಾದನೆ ಮಾಡುವಾಗ ಅನೇಕ ಅಂಶಗಳನ್ನು ಈ ಸಭೆಯ ಮುಂದೆ ತಂದಿದ್ದಾರೆ. ಅದನ್ನೆಲ್ಲ ಈಗ ಹೇಳತಕ್ಕದ್ದು ಅನಾವಶ್ಯಕ. ಪ್ರತಿಯೊಬ್ಬ ಮನುಷ್ಯನಿಗೂ ಸರ್ಕಾರವು ಅವನ ಕೆಲಸಕ್ಕನುಗುಣವಾಗಿ ಸಂಬಳವನ್ನು ಕೊಡುತ್ತಿದೆ. ಹಾಗೆ ಕೊಡುವಾಗ ಅವನಿಗೆ ಅವಶ್ಯಕತೆಯಿದೆಯೇ ಎನ್ನುವುದನ್ನು ನೋಡಿಕೊಂಡು ಅದರ ಪ್ರಕಾರ ಕೊಡಬೇಕು

While giving and while taking, each according to his need. ಈ ತತ್ವವನ್ನು ನಾವು ಒಪ್ಪಿಕೊಳ್ಳುವುದಾದರೆ ನಮ್ಮ ಸಂಸ್ಥಾನದಲ್ಲಾಗಲಿ, ಕೇಂದ್ರದಲ್ಲಾಗಲಿ ಈ ರೀತಿಯಾದ ಹೆಚ್ಚಿನ ಸಂಬಳ ಕೊಡುವುದರಿಂದ ಒಬ್ಬ ಮನುಷ್ಯನ ದಕ್ಷತೆ ಹೆಚ್ಚುತ್ತದೆ, ಅವನ ಶಕ್ತಿ ಹೆಚ್ಚುತ್ತದೆ ಎಂದು ಯಾರಾದರೂ ನಂಬಿದ್ದರೆ ಅದು ಈ ವೆಲ್‌ಫೇರ್ ಸ್ಟೇಟಿನಲ್ಲಿ ಸರಿಹೊಂದುವುದಿಲ್ಲ. I.A.S. I.P.S. ಅಧಿಕಾರಿಗಳಿಗೆ retrospective effect ಆಗಿ ಸಂಬಳ ಕೊಡಬೇಕಾಗಿ ಬಂದಾಗ ಪ್ರತಿಯೊಬ್ಬರಿಗೂ ಏಕಕಾಲದಲ್ಲಿ 12 ಸಾವಿರ ರೂಪಾಯಿಗಳನ್ನು ಸುಮ್ಮನೆ ಖಜಾನೆಯಿಂದ ಕೊಡಲಾಯಿತು. ನಾನು ಆಗಲೇ ಈ ವಿಷಯದಲ್ಲಿ ಹೇಳಿದ್ದೆ. ಅವರನ್ನು I.A.S. ಎಂದು ಬೇರೆ ಒಂದು ಗುಂಪಿಗೆ ಸೇರಿದವರೆಂದು ಅವರಿಗೆ ರಿಟ್ರಾಸ್ಪೆಕ್ಟೀವ್ ಆಗಿ ಕೊಡಬೇಕೆಂದು ೯೦ದಿನಿಂದಲೂ ಬಾಕಿ ಹಣವನ್ನೆಲ್ಲ ಒಂದೇ ಮೊತ್ತದಲ್ಲಿ ಕೊಟ್ಟರು. ಆದರೆ ಆ ರೀತಿ ಹಣ ದೊರೆತುದುದಕ್ಕಾಗಿ ಅವರ ಮನಸ್ಸಿಗೆ ಸಂತೋಷವೇನೋ ಆಯಿತು. ಅಷ್ಟೇವಿನಾ ಅದರಿಂದ ಆ ಅಧಿಕಾರಿಗಳ ದಕ್ಷತೆ ಏನೂ ಹೆಚ್ಚಲಿಲ್ಲ, ಅವರ ಶಕ್ತಿಯೇನೂ ಹೆಚ್ಚಲಿಲ್ಲ. ಈಗಾಗಲೇ ನಾವು ಈ ವೆಲ್‌ಫೇರ್ ಸ್ಟೇಟಿನಲ್ಲಿ ಒಂದು ಹೊಸ ಸಮಾಜವನ್ನು ನಿರ್ಮಾಣಮಾಡುತ್ತಿದ್ದೇವೆ. ಈ ಹೊಸ ಸಮಾಜದಲ್ಲಿ ಸೇವೆಗೆ ಹೆಚ್ಚಿನ ಘನತೆ ಗೌರವಗಳನ್ನು ಕೊಡಬೇಕು. ನಿಸ್ವಾರ್ಥ ಮನೋಭಾವ, ಮತ್ತು ದೇಶಪ್ರೇಮ ಇವುಗಳಿಂದ ನಾವು ದೇಶದ ಅಭಿವೃದ್ಧಿಯನ್ನು ಮಾಡಬೇಕೆಂದು ಮೇಲಿಂದ ಮೇಲೆ ಹೇಳುತ್ತ ಈ ಸೇವೆಯನ್ನು ದುಡ್ಡು, ಆಣೆ, ಪೈಗಳ ತರಹದಲ್ಲಿ ತೂಕಮಾಡುವ ಪರಿಸ್ಥಿತಿಯಲ್ಲಿಲ್ಲ. ಒಂದುಕಡೆ ಒಬ್ಬ ಮನುಷ್ಯನಿಗೆ ಇಷ್ಟು ಸಂಪಾದನಾ ಶಕ್ತಿ ಇರಬೇಕು ಎಂದು ಹೇಳುತ್ತಿದ್ದೇವೆ. ಹೆಚ್ಚುವರಿ ಭೂಮಿಯನ್ನೇ ಬಿಡು ಎನ್ನುವಾಗ, ವರ್ಷವೊಂದಕ್ಕೆ 1,200 ರೂಪಾಯಿಗಳು ಒಂದು ಫ್ಯಾಮಿಲಿಗೆ ಇರಬೇಕೆಂದು ಸಲಹೆ ಕೂಡ ಮಾಡಬೇಕೆಂದಿರುವಾಗ, ಇವರಿಗೆ ತಿಂಗಳಿಗೆ 2,250 ರೂಪಾಯಿಗಳನ್ನು ಕೊಡಬೇಕು ಎಂದು ವಾದ ಮಾಡುವುದೇ ನಮ್ಮ ದೇಶದ ದೌರ್ಭಾಗ್ಯ. ಅದಕ್ಕಾಗಿ ಅನೇಕ ಆರ್ಗ್ಯುಮೆಂಟುಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಒಂದನೆಯದು, ನಮ್ಮ ದೇಶದಲ್ಲಿ ಅಧಿಕಾರಿಗಳಿಗೆ ಅಭಾವ ಬರುತ್ತದೆ, ಅವರು ಲಂಚ ರುಷುವತ್ತಿಗೆ ಒಳಗಾಗದ ರೀತಿಯಲ್ಲಿ ಸರ್ವ ಸಮರ್ಪಕವಾದ ಒಂದು ರೀತಿಯಲ್ಲಿರಬೇಕೆಂದು ಹೇಳುತ್ತ ಅವರಿಗೆ ಒಂದು ಹೆಚ್ಚಿನ ಸಂಬಳ ಕೊಡಬೇಕು. ಎಂಬುದು ಎರಡನೆಯದು, ಹೆಚ್ಚಿನ ಸಂಬಳ ಕೊಡುವುದರಿಂದ ದಕ್ಷರಾದ ಬುದ್ಧಿವಂತರು ಮತ್ತು ಮೇಧಾವಿಗಳು ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಬೇಕಾಗಿದೆ ಎಂದು ಹೇಳುವುದು. ಇದು ಶುದ್ಧ ತಪ್ಪು. ಒಬ್ಬ ಮನುಷ್ಯ ಲಂಚವನ್ನು ತೆಗೆದುಕೊಳ್ಳುವುದಕ್ಕೂ ಬಿಡುವುದಕ್ಕೂ ಅವನ ಮನೋಭಾವವೇ ಕಾರಣವಾಗಿದೆ, ಬೇರೆ ಏನೂ ಇಲ್ಲ. ನಮ್ಮಲ್ಲಿ ಮತ್ತು ನಮ್ಮ ಅನೇಕ ಮಾನ್ಯ ಸದಸ್ಯರ ಅನುಭವದಲ್ಲಿ, ಅನೇಕ ದುಡ್ಡಿರುವ ಮನುಷ್ಯರು ಬೇಕಾದಷ್ಟು ಐಶ್ವರ್ಯವಿದ್ದರೂ ಕೂಡ ಇನ್ನೂ ಆಸೆ ಪಡುತ್ತಿರುತ್ತಾರೆ. ಇದು ನಮ್ಮ ಅನುಭವದಲ್ಲಿದೆ. ಲಂಚ ತೆಗೆದುಕೊಳ್ಳುತ್ತಾನೆ. ಅದು ಅವನ ರಕ್ತದಲ್ಲಿ ಬಂದಂತಹ ಕೆಟ್ಟಪದ್ಧತಿ. ಅಂತಹವನಿಗೆ ವಾಸ್ತವವಾಗಿ ಹೆಚ್ಚಿಗೆ ದುಡ್ಡು ಕೊಟ್ಟರೆ ಅವನು ಲಂಚವನ್ನು ಬಿಡುತ್ತಾನೆ ಎನ್ನುವುದನ್ನು ನಾನು ನಂಬುವುದಿಲ್ಲ. ಈಗಲೂ ಕೂಡ ಸಣ್ಣಪುಟ್ಟ ಅಧಿಕಾರಿಗಳು ದಕ್ಷರಾಗಿ, ಸತ್ಯ ಧರ್ಮಗಳಿಂದ ಕೆಲಸಮಾಡತಕ್ಕ ಎಷ್ಟೋ ಜನ ಇದ್ದಾರೆ. ಆದುದರಿಂದ ನಾವು ಸತ್ಯ ಧರ್ಮದ ಮೇಲಿನ ಪ್ರೇಮ, ದೇಶಪ್ರೇಮ, ಸೇವಾಪ್ರೇಮ ಇವುಗಳಿಗಾಗಿ ಕೆಲಸ ಮಾಡಬೇಕಾದ ಕಾಲವಿದು. ಈಗ ನಾವು ದೇಶದಲ್ಲಿ ಅಧಿಕಾರಿಗಳಿಗೆ ಅವರಿಗೆ ಅವಶ್ಯಕವಾದ ಒಂದು ಪ್ರಮಾಣದಲ್ಲಿ ಸಂಬಳ ಸಾರಿಗೆಗಳನ್ನು ಕೊಡಬೇಕಾದುದು ನ್ಯಾಯವಾದುದು. ಸೆಂಟ್ರಲ್ ಪೇ ಕಮಿಷನ್ನಿನವರು 1930ನೆಯ ಇಸವಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ.

"This view was strongly urged by Dr. Gadgil in a pamphlet that he published about 15 years ago. Quoting an observation of Sir William Beveridge that the civil servant "must look upon his salary as maintenance adequate to the needs of himself and to bring highest standards of education in the country and that is not always the standard of the business world and the profit making world', he maintained that high scales of pay in the Indian Public Service had been responsible for artificially diverting the attention of our young men from other fields and concentrating it on Government service. An even more serious consequence, according to him, was that the standards and conceptions of Indian officers had become a reflected image of the European officials and a large number of educated Indians had developed aspirations and expectations which in the ordinary course were scarcely likely to be attained by most of them. Like many others, he condemned the wide gulf between the earnings of those in the higher ranks and the emoluments of the less fortunate among the public servants in this country."

ಇದು ಇವೊತ್ತಿಗೂ ಕೂಡ ಎಷ್ಟು ಸತ್ಯವಾಗಿ ಕಾಣುತ್ತದೆ ಎನ್ನುವುದಕ್ಕಾಗಿ ಇದನ್ನು ನಾನು ಇಲ್ಲಿ ಹೇಳಬೇಕಾಯಿತು ನಾವು ಈಗ ದೇಶದ ಮೂಲೆ ಮೂಲೆಯಲ್ಲಿಯೂ ಒಂದು ರೀತಿಯಾದ ಸಮತಾವಾದ ಸಮಾಜವನ್ನು ನಿರ್ಮಾಣ ಮಾಡಬೇಕೆಂದು ಅದಕ್ಕನುಗುಣವಾದ ಸಮಾಜವನ್ನು ನಿರ್ಮಾಣ ಮಾಡುತ್ತೇವೆ ಎಂದು ಹೇಳುತ್ತ ಒಬ್ಬ ಅಧಿಕಾರಿಗೆ ಮೂವತ್ತು ದಿನಗಳಿಗೆ, 2,250 ರೂಪಾಯಿಗಳಂತೆ ಸಂಬಳವನ್ನು ಕೊಡುವುದು ಸರಿಯಾಗಿದೆಯೇ? ಅವನು ಅಷ್ಟು ಹಣವನ್ನು ಏನು ಮಾಡಿಕೊಳ್ಳುತ್ತಾನೆ? ಎಂದು ನಾನು ಕೇಳುತ್ತೇನೆ. ಹೀಗೆ ಹೆಚ್ಚಿಗೆ ಬರುವ ಹಣವನ್ನು ಬ್ಯಾಂಕಿನಲ್ಲಿಟ್ಟು ಸುಮ್ಮನೆ ಆ ಹಣವನ್ನು ನೋಡಿ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಕೊಂಡು ಪ್ರೇಮದಿಂದ ಕೂಡಬೇಕು, ಅಷ್ಟೇ. ಹೀಗೆ ತಿಂಗಳೊಂದಕ್ಕೆ 2,250 ರೂಪಾಯಿಗಳ ಸಂಬಳ ಬರುವ ಅಧಿಕಾರಿಯೂ ಕೂಡ . . . .

ಶ್ರೀ ಹೆಚ್. ಎಸ್. ರುದ್ರಪ್ಪ.—ಅಷ್ಟು ದುಡ್ಡು ಬಂದರೂ ಸಹ ಸಾಲವನ್ನು ಮಾಡುತ್ತಿರುವರಲ್ಲ! ಅದಕ್ಕೇನು ಹೇಳುತ್ತೀರಿ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಹೀಗೆ ಹೆಚ್ಚಿಗೆ ಸಂಬಳ ಕೊಡುತ್ತಿರುವುದರಿಂದ ಅವನು ದುರ್ಮಾರ್ಗಗಳಿಗೆ ಈಡಾಗಲು ಕಾರಣನಾಗುತ್ತಾನೆ. ಆ ರೀತಿ ಅವರೆಲ್ಲ ಹಣವನ್ನು ಖರ್ಚುಮಾಡುವುದರಿಂದ ಹಾಗಾಗುತ್ತಿದೆ.

ಒಬ್ಬ ಸದಸ್ಯರು.—ಸರಿಯಾಗಿ ಖರ್ಚುಮಾಡುವುದಕ್ಕೆ ಅವರಿಗೆ ಬರುವುದಿಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಖರ್ಚು ಮಾಡತಕ್ಕ ವಿಚಾರದಲ್ಲಿ ನಾನೇನೂ ಹೇಳಬೇಕಾಗಿಲ್ಲ. ಆದರೂ ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಹಣವನ್ನು ಕೊಡಬೇಕೆಂದು ವಾದ ಮಾಡುತ್ತಿರುವಾಗ ನಮಗೆ ಅಷ್ಟು ಹಣವನ್ನು ಕೊಡುವುದಕ್ಕೆ ಸಾಧ್ಯವೇ ಎನ್ನುವುದು ಬಹಳ ಪ್ರಾಮುಖ್ಯವಾದ ಅಂಶ. ನಮ್ಮ ದೇಶದಲ್ಲಿ ಜನಗಳ ಸಾಮಾನ್ಯ ಸಂಪಾದನಾ ಶಕ್ತಿ ನಮ್ಮ ರಾಷ್ಟ್ರದ ಉತ್ಪಾದನಾ ಶಕ್ತಿ ಶೇಕಡ 50. ನಮ್ಮ ಜನರ ಸಾಮಾನ್ಯ ಜೀವನದಮಟ್ಟ ಏನು, ಅವರ ಕೊಡತಕ್ಕ ಶಕ್ತಿಯೇನು, ಎನ್ನುವುದನ್ನು ನೋಡಬೇಕು. ದಕ್ಷರಾಗಿರುವವರು, ಚೆನ್ನಾಗಿರುವ ಯೋಗ್ಯತೆ ಉಳ್ಳವರು ನಮ್ಮ ದೇಶವನ್ನು ಬಿಟ್ಟು ಹೊರಗಡೆ ಹೋಗುತ್ತಾರೆ. ಅದರಿಂದಾಗಿ ನಮ್ಮಲ್ಲಿ ದಕ್ಷರಾದ ಜನಗಳು ಸಿಗುವುದು ಕಷ್ಟವಾಗಿದೆ. ಸರ್ಕಾರೀ ಕ್ಷೇತ್ರಗಳಲ್ಲಿ ಸಾರ್ವಜನಿಕ ಕ್ಷೇತ್ರಗಳಲ್ಲಿ ಈ ಸಂಬಳದ ಮಟ್ಟ ಇಷ್ಟೇ ಇರಬೇಕೆಂದು ವ್ಯವಸ್ಥೆ ಮಾಡಿದರೆ ಆಗ ಒಬ್ಬ ವಿದ್ಯಾವಂತನಾದವನು ನನಗೆ ಇಷ್ಟೇ ಸಂಬಳ ಕೊಡಬೇಕು ಎಂದು ಹೇಳುವುದಕ್ಕಾಗುತ್ತದೆಯೇನು ? ಅವನು ಎಲ್ಲಿಗಾದರೂ ಹೋಗಲಿ, ಜೆಕೋಸ್ಲೋವಕೀಯಾಕ್ಕೆ ಬೇಕಾದರೂ ಹೋಗಲಿ, ಅಮೆರಿಕಕ್ಕಾದರೂ ಹೋಗಲಿ, ಅಥವಾ ಪಶ್ಚಿಮ ಖಂಡಕ್ಕಾದರೂ ಹೋಗಲಿ. ಆ ಮನುಷ್ಯನಿಗೆ ಹೆಚ್ಚು ದುಡ್ಡಿನ ಆವಶ್ಯಕತೆಯಿರಬಹುದು. ಆದರೆ ಸರ್ಕಾರದಲ್ಲಿ ಕೊಡುವ ಶಕ್ತಿಯಿಲ್ಲ. ಸಂಬಳ ಕೊಡಲಿಲ್ಲವೆಂದು ದೇಶದ ಅಭಿವೃದ್ಧಿಗೆ ಕುಂದಕವನ್ನು ತರುವಂತಹ ಕೆಲಸವನ್ನು ಮಾಡುವವನು ದೇಶ ದ್ರೋಹಿಯೇ ವಿನಾ ಬೇರೇನಲ್ಲ. ಸರ್ಕಾರದಲ್ಲಿ ಒಬ್ಬ ಅಧಿಕಾರಿಗೆ ಅವನ ಶಕ್ತಿ ಸಾಮರ್ಥ್ಯಗಳನ್ನು ಅನುಸರಿಸಿ ಅವನಿಗೆ ಸಂಬಳ ದೊರಕುವುದಿಲ್ಲ. ಮತ್ತು ಸರ್ಕಾರಿ ನೌಕರಿಯಲ್ಲಿರುವ ಮನುಷ್ಯನಿಗೂ ಸಾರ್ವಜನಿಕ ಕ್ಷೇತ್ರದಲ್ಲಿರುವ ಮನುಷ್ಯನಿಗೂ ಸಂಬಳದಲ್ಲಿ ವ್ಯತ್ಯಾಸಗಳಿವೆ. ಸಾರ್ವಜನಿಕ ಕ್ಷೇತ್ರಗಳಲ್ಲಿ ಕೆಲಸಮಾಡುತ್ತಿರುವವನು ಸರ್ಕಾರಿ ನೌಕರಿಗೆ ಬರುವುದಿಲ್ಲ. ಅಲ್ಲದೆ ಈಗ ಎಲ್ಲ ಕಡೆಗಳಲ್ಲಿಯೂ ಒಂದು ರೀತಿಯಾದ ಹೊಸ ಸಮಾಜ ನಿರ್ಮಾಣ ಮಾಡತಕ್ಕಕಾಲದಲ್ಲಿ, ಯಾವ ಕ್ಷೇತ್ರದಲ್ಲೂ, ಅವನಿಗೆ ನಿರ್ದಿಷ್ಟವಾದ ಪರಿಮಿತಿಯಲ್ಲಿ ಸಂಬಳ ಕೊಡಬೇಕಾದುದು ಅಗತ್ಯ. ಅದಕ್ಕಿಂತ ಹೆಚ್ಚಾಗಿ ಸಿಗಬಾರದು ಎನ್ನುವ ನೀತಿಗನುಗುಣವಾಗಿ ಒಂದು ಹೊಂದಾವಣಿಕೆ ಇರಬೇಕು. ಒಟ್ಟಿನಲ್ಲಿ ಈ ವಿಷಯವನ್ನು ನಮ್ಮ ಸಂಸ್ಥಾನದವರೂ ಬೇರೆ ಸಂಸ್ಥಾನದವರೂ ಯೋಚನೆ ಮಾಡಬೇಕು. ನಮ್ಮ ಸಂಸ್ಥಾನದವರೂ, ಮತ್ತು ಇಡೀ ಇಂಡಿಯಾದಲ್ಲಿರತಕ್ಕ ಎಲ್ಲ ಪ್ರಾಂತ ಸರ್ಕಾರಗಳೂ, ಮತ್ತು ಕೇಂದ್ರ ಸರ್ಕಾರದವರೂ ಕಲೆತು ಈ ವಿಷಯದಬಗ್ಗೆ ಗಮನ ಕೊಡಬೇಕು.

ಕಾನ್‌ಸ್ಟಿಟ್ಯೂಷನ್ನಿನ 302ನೇ ಆರ್ಟಿಕಲ್ ಪ್ರಕಾರ I.A.S. ಮತ್ತು I.P.S. ಎಂಬ ಹೊಸ ದರ್ಜೆಯನ್ನೇನೋ ಮಾಡಿದರು. ಆದರೆ ಇವರ ಸಂಬಳ ಇಷ್ಟೇ ಇರಬೇಕೆಂದು Constitutionನಲ್ಲೇನೂ ಹೇಳಿಲ್ಲ. ಅಲ್ಲಿ ಅವರವರ ಅನುಕೂಲಕ್ಕೆ ತಕ್ಕಂತೆ ರಾಷ್ಟ್ರಕ್ಕನುಗುಣವಾದರೀತಿಯಲ್ಲಿ ಈ ಕೇಡರನ್ನು ವ್ಯವಸ್ಥೆಮಾಡಿದ್ದಾರೆ. ಅವರ ಸಂಬಳ ಇಷ್ಟೇ ಇರಬೇಕೆಂದು ಹೇಳಿಲ್ಲ. ಈ ಪರಿಸ್ಥಿತಿಯಲ್ಲಿ ನಾವಿರುವಾಗ ಈ ಹೊಸ ಸಮಾಜ ನಿರ್ಮಾಣ ಮಾಡತಕ್ಕಂತಹ ಈ ಕಾಲದಲ್ಲಿ ಈ ವಿಷಯವನ್ನು ಪರಿಶೀಲನೆ ಮಾಡಬೇಕಾಗಿದೆ. ಅಧಿಕಾರಿಗಳಿಗೆ ಹೆಚ್ಚಿನ ಸಂಬಳ ಕೊಡದೆ ನಮಗೆ ದಕ್ಷರು ಸಿಗುವುದಿಲ್ಲ ಎನ್ನುವ ವಿಷಯವೇನಿಲ್ಲ. ಒಂದು ವೇಳೆ ಯಾರೇಆಗಲೀ ಈಗ ಭೂಮಿಯನ್ನು ಹೆಚ್ಚಿಗೆ ಇಟ್ಟುಕೊಂಡಿರುವ ಮನುಷ್ಯ ಆ ಭೂಮಿಯನ್ನು ಸಾರ್ವಜನಿಕರ ಹಿತರಕ್ಷಣೆಯ ದೃಷ್ಟಿಯಿಂದ ಬಿಡಬೇಕು ಎನ್ನುವ ಸ್ಥಿತಿಯಲ್ಲಿರುವಾಗ, ಯಥೋಚಿತವಾಗಿ ಹಣವನ್ನು ಸಾರ್ವಜನಿಕರ ಜೀವನಕ್ಕಾಗಿ ಈಗ ಕಿತ್ತುಕೊಳ್ಳುವ ಸ್ಥಿತಿಯಲ್ಲಿರುವಾಗ ನಾವು ಇನ್ನೂ ಇಂಗ್ಲೀಷು ಸರ್ಕಾರದವರು ಕೊಡುತ್ತಿದ್ದಂತೆ, 2,000, 3,000 ಮತ್ತು 4,000 ಹೀಗೆ ಸಂಬಳಗಳನ್ನು ಕೊಡುವುದು ಸರಿಯಾದುದೇ, ಎನ್ನುವುದನ್ನು ನಾವೆಲ್ಲರೂ ಯೋಚಿಸಬೇಕಾಗಿದೆ.

5 P.M.

ದೇಶ ಪ್ರೇಮದಿಂದ ನೌಕರನು ತನ್ನ ಬುದ್ಧಿಶಕ್ತಿಗೆ ಅನುಗುಣವಾಗಿ ಕೆಲಸ ಮಾಡಲಿಕ್ಕೇ ಬೇಕು. ಅವನ ಬುದ್ಧಿಶಕ್ತಿ ರಾಷ್ಟ್ರದ ಒಂದು ಸ್ವತ್ತು. ಅದು ತನ್ನದೆಂದು ಅವನು ಹೇಳುವುದು ತಪ್ಪು. ಆದುದರಿಂದ ಬುದ್ಧಿ ಶಕ್ತಿಗೆ ಅನುಗುಣವಾಗಿ ಸಂಬಳ ಕೊಡಬೇಕು ಎಂದು ಹೇಳುವುದು ಸರಿಯಲ್ಲ. ರಾಷ್ಟ್ರದ ಸಂಪತ್ತನ್ನು ಖರ್ಚುಮಾಡಿ ಶಾಲೆ ಕಾಲೇಜುಗಳನ್ನು ನಡೆಸುತ್ತಿರುವದರಿಂದ ಎಲ್ಲರಿಗೂ ಸಮಾನವಾದ ಸೌಲಭ್ಯ ದೊರಕುತ್ತಿದೆ. ಈರೀತಿ ಸೌಲಭ್ಯಗಳ ಮೂಲಕ ಅವನು ತನ್ನ ಬುದ್ಧಿಶಕ್ತಿಯನ್ನು ಹೆಚ್ಚಿಸಿಕೊಳ್ಳುವುದರಿಂದ ಅದು ಯಾರೊಬ್ಬರ ಸ್ವಂತ ಸ್ವತ್ತಲ್ಲ. ಬುದ್ಧಿಶಕ್ತಿ ದಕ್ಷತೆ ಇವುಗಳನ್ನು ಅವನ ತಂದೆ ತಾಯಿಗಳು ನಿರ್ಮಾಣ ಮಾಡುವುದಿಲ್ಲ. ರಾಷ್ಟ್ರದ ಹಣದಿಂದ ನಡೆಸಲ್ಪಡುವ ಶಾಲೆ ಕಾಲೇಜುಗಳಲ್ಲಿ ತರಪೇತಿ ಹೊಂದಿ ಬುದ್ಧಿ ಶಕ್ತಿಯನ್ನು ವಿಕಾಸಗೊಳಿಸಿಕೊಳ್ಳುವುದರಿಂದ ಅದು ರಾಷ್ಟ್ರದ ಸ್ವತ್ತು. ಆದುದರಿಂದ ಬುದ್ಧಿಶಕ್ತಿ ಇದೆ, ಹೆಚ್ಚುಸಂಬಳ ಕೊಡಿ ಎಂದು ಹೇಳುವುದು ಸರಿಯಲ್ಲ. ರಾಷ್ಟ್ರದ ಸ್ವತ್ತನ್ನು ಸಮಾಜದ ಹಿತಕ್ಕೋಸ್ಕರ ಉಪಯೋಗಿಸಿಕೊಳ್ಳತಕ್ಕದ್ದು ರಾಷ್ಟ್ರಕ್ಕೆ ಸೇರಿದ್ದು. ಆದಕಾರಣ ಈ ದೃಷ್ಟಿಯಿಂದ ವಿಷಯವನ್ನು ಪರಿಶೀಲನೆ ಮಾಡಿ ಸಂಬಳ ಸಾರಿಗೆಗಳನ್ನು ನಿಗದಿ ಮಾಡತಕ್ಕದ್ದು ಸರಿಯಾದ ಮಾರ್ಗ. ನಮ್ಮ ದೇಶದ ಪರಿಸ್ಥಿತಿಯು ಚೀಣಾ ದೇಶಕ್ಕೆ ಅನುಗುಣವಾಗಿದೆ. ಚೀಣಾದೇಶದಲ್ಲಿ ಕೊಡುವ ಸಂಬಳ ಸಾರಿಗೆಗಳನ್ನು ನೋಡಿದರೆ ನಮಗೆ ಬಹಳ ಆಶ್ಚರ್ಯವಾಗುತ್ತದೆ. ಒಬ್ಬನು ತನ್ನ ಜೀವನವನ್ನು ಉತ್ತಮ ರೀತಿಯಿಂದ ನಡೆಸುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಸಂಬಳ ತೆಗೆದುಕೊಳ್ಳುತ್ತಾನೆ. ತನಗೆ ಬೇಕಾಗಿರುವುದಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳಲಿಕ್ಕೆ ಅವನಿಗೆ ಅಧಿಕಾರವಿಲ್ಲ. ಚೀಣಾದೇಶದಲ್ಲಿ ಹೆಚ್ಚಿನ ಸಂಬಳ ಎಂದರೆ 640ರೂಪಾಯಿ ಮಾತ್ರ ಇದೆ. ಅಲ್ಲಿಯ

ರಾಜ್ಯದ ಅಧ್ಯಕ್ಷರು ಹಿಂದೆ 750 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದುದು ಈಗ 1,250 ರೂಪಾಯಿ ಆಗಿವೆ. ಕಾಲೇಜ ಪ್ರೊಫೆಸರರಿಗೆ 500 ರೂಪಾಯಿ ಸಂಬಳ, ಲೆಕ್ಚರರಿಗೆ 250-260ರೂಪಾಯಿ ಸಂಬಳ ಇದೆ. ಒಬ್ಬ ಕ್ಲಾರ್ಕ ಅಂದರೆ ಗುಮಾಸ್ತನಿಗೆ ಅತಿ ಕಡಿಮೆ ಸಂಬಳ ಎಂದರೂ ಅದು 70 ರೂಪಾಯಿ. ಕಾರ್ಖಾನೆಯಲ್ಲಿ ಕೆಲಸ ಮಾಡುವ ಕೂಲಿಕಾರರಿಗೂ 70 ರೂಪಾಯಿ ಸಂಬಳ ದೊರೆಯುತ್ತದೆ. ಕೂಲಿಕಾರ ಹಾಗೂ ಗುಮಾಸ್ತ ಇವರ ಸಂಬಳದಲ್ಲಿ ವ್ಯತ್ಯಾಸವಿಲ್ಲ. ವ್ಯವಸಾಯದಲ್ಲಿ ತೊಡಗಿದ ಒಬ್ಬ ರೈತನ ಉತ್ಪತ್ತಿಯೂ ಸಹ ಒಂದು ತಿಂಗಳಿಗೆ 75ರೂಪಾಯಿ ಇರುತ್ತದೆ. ಸಾಮಾನ್ಯ ಮನುಷ್ಯನಿಗೂ ದುಡಿಯುವವನಿಗೂ ಒಬ್ಬ ಗುಮಾಸ್ತನಿಗೂ ಒಂದೇ ಮಟ್ಟದಲ್ಲಿ ಉತ್ಪತ್ತಿ ಪ್ರಮಾಣವು ಇದೆ. ಒಬ್ಬನಿಗೆ ಹೆಚ್ಚು ಮತ್ತೊಬ್ಬನಿಗೆ ಕಡಿಮೆ ಸಂಬಳ ಇಲ್ಲ. ಚೀಣಾದಲ್ಲಿ ಅಕ್ಕಿ, ಗೋಧಿ, ರಾಗಿ ಎಲ್ಲವೂ ಅವನಿಗೆ ದೊರೆಯುತ್ತಿದೆ. ಅಕ್ಕಿ ಒಂದು ಪಲ್ಲಾಕ್ಕೆ ರೂ. 57-13, ಇದ ಗೋಧಿ ರೂ. 65-50, ಇದೆ. ಒಂದು ಸೇರು ಮಟನ್ನಿಗೆ ಎರಡು ಆಣೆ ಕೊಡಬೇಕಾಗುತ್ತದೆ. ಚೀಣಾದಲ್ಲಿಯ ಜೀವನ ಮೇಲ್ಮಟ್ಟದ್ದಾಗಿದೆ. ಅಕ್ಕಿ ಗೋಧಿ ಬೆಲೆ ಜಾಸ್ತಿಯಾಗಿದೆ. ಹೆಚ್ಚು ಸಂಬಳ ಕೊಡಿ ಎಂದು ಅಲ್ಲಿಯ ಅಧಿಕಾರಿಗಳು ಕೇಳುವುದಿಲ್ಲ. ಕಾರ್ಖಾನೆಯಲ್ಲಿ ದುಡಿಯುವ ಕೂಲಿಕಾರ ಹೆಚ್ಚು ದೈಹಿಕ ಶ್ರಮ ವಹಿಸಬೇಕಾಗುವುದರಿಂದ ಅವನಿಗೆ ಹೆಚ್ಚು ಆಹಾರ ಬೇಕಾಗುತ್ತದೆ. ಚೀಣಾದೇಶದಲ್ಲಿ ಈ ರೀತಿ ಧಾರಣೆವಾಸಿ ಇದೆ.

Sri T. PARTHASARATHY (Malleswaram).—As a doctor, I may inform the Hon'ble Member that a trained worker also requires as much caleries of food value as a labourer.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲರಿಗೂ ಆಹಾರ ಪದಾರ್ಥಗಳು ಬೇಕಾಗುತ್ತವೆ. ನಿಜ. 60ರೂಪಾಯಿ ಸಂಬಳ ಮತ್ತು 2,500 ರೂಪಾಯಿ ಸಂಬಳ ಪಡೆಯುವ ನೌಕರರ ಮಟ್ಟದಲ್ಲಿ ಇರುವ ವ್ಯತ್ಯಾಸ ಎಷ್ಟಿದೆ ಎಂಬುನ್ನು ನೋಡಬೇಕು. ಬಟ್ಟೆಯ ವಿಷಯದಲ್ಲಿಯೂ ಸಹ ಇದೇ ರೀತಿ ಬಹಳ ವ್ಯತ್ಯಾಸ ಇದೆ. ಇಲ್ಲಿ ನಾಲ್ಕು ರೂಪಾಯಿಗೆ ಒಂದು ಗಜ ನೂಲಿನ ಬಟ್ಟೆ ದೊರೆಯುತ್ತಿದೆ. ಒಂದು ಉಲನ್ ಸೂಟಿಂಗಿಗೆ 50 ರೂಪಾಯಿ ಕೊಡಬೇಕಾಗುತ್ತದೆ. ಆದರೆ ಚೀಣಾದಲ್ಲಿ ನೌಕರರ ಹಾಗು ಅಧಿಕಾರಿಗಳ ಖರ್ಚುವೆಚ್ಚ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಮಟ್ಟದಲ್ಲಿ ಇದೆ. ಅಲ್ಲಿ ಅವರೆಲ್ಲರೂ ದೇಶ ಪ್ರೇಮದಿಂದ ಸೇವಾ ಮನೋಭಾವದಿಂದ ತಮ್ಮ ಬುದ್ಧಿ ಶಕ್ತಿಯನ್ನು, ಅನುಭವವನ್ನು ದೇಶಕ್ಕೋಸ್ಕರ ಕೊಡಬೇಕೆಂಬುದನ್ನು ಅನುಷ್ಠಾನಕ್ಕೆ ತಂದು ಕೊಂಡು ಕೆಲಸ ಮಾಡುತ್ತಾರೆ.

Sri C. M. ARUMUGHAM (Kolar Gold Fields).-Is there no time-limit for speeches? Yesterday and the day before yesterday a time-limit had been put for speeches.

ಶ್ರೀ ಎಚ್. ಎಂ. ಚನ್ನಬಸಪ್ಪ:—ಈ ರೀತಿ ಅಂಕಿ ಅಂಶಗಳನ್ನು ನಿಮ್ಮ ಮುಂದೆ ಇಡಬಹುದು. ಆದರೆ ತಾತ್ವಿಕ ದೃಷ್ಟಿಯಿಂದ ವಾದ ಮಾಡುವುದು ಬೇಡ. ಆದಕಾರಣ ಹೆಚ್ಚು ಸಂಬಳವನ್ನು ಅಪೇಕ್ಷಿಸುವುದನ್ನು ಬಿಟ್ಟುಕೊಡುವಂತೆ ಮಾನಸಿಕ ಪರಿವರ್ತನೆಯು ಆಗಬೇಕಾಗಿದೆ. ಎಲ್ಲರೂ ದೇಶ ಪ್ರೇಮದಿಂದ ದೇಶಕ್ಕಾಗಿ ತಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸದಿದ್ದರೆ ನಮ್ಮ ದೇಶ ಉದ್ಧಾರವಾಗುವುದಿಲ್ಲ. ಎಲ್ಲರೂ ದೇಶ ಪ್ರೇಮದಿಂದ ದುಡಿಯಬೇಕೆಂದು ನಮ್ಮ ರಾಷ್ಟ್ರ ನಾಯಕರಾದ ಪಂಡಿತ ಜವಾಹಿರಲಾಲ್ ನೆಹರು ಅವರು ತಮ್ಮ ಭಾಷಣದಲ್ಲಿ ಮೇಲಿಂದ ಮೇಲೆ ಹೇಳುತ್ತಾರೆ. ಪಾರ್ಲಿಮೆಂಟ್ ಸದಸ್ಯರು, ಇತರ ಪ್ರಾಂತ್ಯಗಳ ಮಾನ್ಯ ಸದಸ್ಯರುಗಳು ಪ್ರಯತ್ನಪಟ್ಟು ದೇಶ ಪ್ರೇಮವು ಹೆಚ್ಚಾಗುವಂತೆ ಮಾಡಿ ಮಾನಸಿಕ ಪರಿವರ್ತನೆಯುಂಟಾಗುವಂತೆ ಮಾಡತಕ್ಕದ್ದು ಅವಶ್ಯಕವಾಗಿದೆ. ಹೆಚ್ಚು ಸಂಬಳ ಬೇಡುವುದು ಹೋಗಲಕ್ಕೆ ಬೇಕು. ಈ ರೀತಿ ಮಾನಸಿಕ ಪರಿವರ್ತನೆಯು ಆಗಬೇಕಾದುದು ಬಹಳ ಅವಶ್ಯಕವಾಗಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮಾನ್ಯ ಸದಸ್ಯರು ಹೇಳುತ್ತಿರುವುದು ರೆಜಲ್ಯೂಷನ್ನಿಗೆ ಸಂಬಂಧಪಟ್ಟದ್ದು ಆಗಿರುವುದಿಲ್ಲ. ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರದ ನೌಕರರ ಸಂಬಳದ ಸ್ಕೇಲುಗಳಲ್ಲಿರುವ ವ್ಯತ್ಯಾಸದ ಬಗ್ಗೆ ಈ ನಿರ್ಣಯ ಇದೆ. ಇಂಡಿಯಾ ದೇಶ ಮತ್ತು ಚೀಣಾ ದೇಶದ ಬಗ್ಗೆ ಅವರು ಹೇಳುತ್ತಿದ್ದಾರೆ. ಈ ನಿರ್ಣಯಕ್ಕೆ ಸಂಬಂಧಪಟ್ಟದ್ದಲ್ಲವಾದುದನ್ನು ಮಾತನಾಡುತ್ತಿದ್ದಾರೆ. ಅವರು ಹೇಳುತ್ತಿರುವುದು ಈ ನಿರ್ಣಯಕ್ಕೆ ಏನೂ ಸಂಬಂಧಪಟ್ಟದ್ದು ಆಗಿರುವುದಿಲ್ಲ.

Sri T. PARTHASARATHY.—The Hon'ble Member is referring to the patriotism of officials. His remarks against the officials that they are unpatriotic in demanding more salaries or raising salaries to an uniform level, is not correct. I request the Hon'ble Member to withdraw the allegation.

Mr. DEPUTY SPEAKER.—There is no allegation.

Sri H. M. CHANNABASAPPA.—I maintain that concentration of wealth and property is detrimental to the nation and is an unpatriotic attitude on the part of anybody. The principle applies to concentration of farms also. If it is detrimental to the nation, it is unpatriotic and I stick to that opinion. Probably my Hon'ble friend has never been in the habit of giving. He must have been probably in the habit of taking. A ryot or a farmer always is well-known, from historic times, to give and not to take.

ಈ ವಿಷಯವನ್ನು ನಾನು ಇಷ್ಟು ಒಂದು ಪ್ರಬಲವಾದ ಆರ್ಗ್ಯುಮೆಂಟ್ಸ್‌ನಲ್ಲಿ ಏತಕ್ಕೆ ಹೇಳುತ್ತಿದ್ದೇನೆಂದರೆ, ಅವರ ಮಾನಸಿಕ ಪರಿವರ್ತನೆ ಆಗಬೇಕು. ದಕ್ಷತೆ ಮತ್ತು ಸಾಮರ್ಥ್ಯ ಎಲ್ಲಾ ಹೆಚ್ಚಬೇಕು. ದುಡ್ಡನ್ನೇ ಪ್ರಾಮುಖ್ಯವಾಗಿ ಇಟ್ಟುಕೊಳ್ಳಕೂಡದು. ಒಂದು ಕಡೆ ಮೈಸೂರು ಸಂಸ್ಥಾನದಲ್ಲಿರತಕ್ಕ ಒಬ್ಬ ಜವಾನನಿಗೆ 38 ರೂಪಾಯಿ ಸಂಬಳ. ಇನ್ನೊಂದು ಕಡೆ ಪಕ್ಕದ ಮನೆಯಲ್ಲಿರುವ ಇನ್ನೊಬ್ಬ ಇಂಡಿಯಾ ಗೌರ್ನಮೆಂಟ್ ಸರ್ವೆಂಟಿಗೆ 80 ರೂಪಾಯಿ ಸಂಬಳ. ಇದು ಯಾವ ಧರ್ಮಕ್ಕನುಗುಣವಾಗಿದೆ? ಹೀಗಿರುವುದರಿಂದ ಅಸಮಾಧಾನ ಅವನಲ್ಲಿ ಹುಟ್ಟುತ್ತದೆಯೋ ಇಲ್ಲವೋ ಎಂದು ನಾವೇ ಯೋಚನೆ ಮಾಡಬೇಕು. ಒಂದು

((SRI H. M. CHANNABASAPPA)

ಕಡೆ ಮೈಸೂರು ಸಂಸ್ಥಾನದಲ್ಲಿ ಗ್ರಾಜುಯೇಟ್ ಆದವನಿಗೆ 83 ರೂಪಾಯಿ ಸಂಬಳ ಇದೆ. ಅದೇ ರೂಮಿನಲ್ಲಿ ಅದೇ ವಿಧವಾದ ಕೆಲಸ ಮಾಡುವ ಇಂಡಿಯಾ ಸರ್ಕಾರದ ಗ್ರಾಜುಯೇಟಿಗೆ 145 ರೂಪಾಯಿ ಸಂಬಳ. ಈ ರೀತಿ ಇದ್ದರೂ ಅತೃಪ್ತಿ ಅಸಮಾಧಾನ ಹೆಚ್ಚಾಗಕೂಡದು ಎಂದು ಹೇಳಿದರೆ ಆ ರೀತಿ ಅಸಮಾಧಾನ ಹುಟ್ಟುವುದಿಲ್ಲವೇ ! ಹುಟ್ಟಿಯೇ ಹುಟ್ಟುತ್ತದೆ. ಐ. ಎ. ಎಸ್. ಮತ್ತು ಐ. ಪಿ. ಎಸ್. ಹುದ್ದೆಗಳಿಗೆ ಮನಸ್ಸು ಬಂದ ಹಾಗೆ ಜನರನ್ನು ಪಿಕ್‌ಅಪ್ ಮಾಡುತ್ತಾರೆ. ಪುನಃ ಇದೇ ಸಂಸ್ಥಾನದಲ್ಲಿ ಒಬ್ಬ ಜೂನಿಯರ್ ಅಧಿಕಾರಿಗೆ ಆ ಹುದ್ದೆಗೆ ಬಡ್ತಿಕೊಟ್ಟರೆ ಅವನಿಂಗಿತಲೂ ಸೀನಿಯರ್ ಆಗಿರತಕ್ಕ ಮನುಷ್ಯನಿಗೆ ಸಂತೃಪ್ತಿ ಇರುತ್ತದೆಯೇ ! ಪ್ಲಾನಿಂಗ್ ಕಮೀಷನ್ ರಿಪೋರ್ಟಿನ ಅಡ್ಮಿನಿಸ್ಟ್ರೇಷನ್ ಆಫ್ ಸರ್ವೀಸಿನಲ್ಲಿರುವುದನ್ನು ತಾವು ಓದಿ. ನಮ್ಮ ನೀತಿ ಯಾವತ್ತು ಒಂದೇ ಸಮನಾಗಿ ಇಲ್ಲದೆ ಹೋದರೆ ಅದರಲ್ಲಿ ಅತೃಪ್ತಿ ಅಷ್ಟೇ ಅಲ್ಲದೆ ಲಂಚಕೋರತನ ಹೆಚ್ಚುತ್ತಿದೆ. ಇದು ಯಾರಿಗೂ ಗೊತ್ತಾಗುವುದಿಲ್ಲ. ಕೇಂದ್ರ ಸರ್ಕಾರಕ್ಕೂ ಗೊತ್ತಾಗುವುದಿಲ್ಲ. ಈ ವಿಷಯವನ್ನು ಧೈರ್ಯದಿಂದ ಎದುರಿಸುವ ದಿಟ್ಟತನವನ್ನು ನಾವು ಇನ್ನೂ ಹೊಂದಿಲ್ಲ. ಆದ್ದರಿಂದ ಒಂದು ವೇಳೆ ಸ್ಥಳಕ್ಕೆ ಸಂಬಂಧಪಟ್ಟಂತೆ ಒಬ್ಬ ವಲ್ಲಿ ಶಕ್ತಿ ಇದ್ದರೆ ಅವನಿಗೆ ಸ್ಪೆಷಲ್ಲಾಗಿ ಆಯಾ ಸ್ಥಳಕ್ಕೆ ಅನುಗುಣವಾಗಿ ಅಲೋಯನ್ಸ್ ಕೊಡೋಣ. ಕನ್ಯಾಕುಮಾರಿಯಿಂದ ಆಸೇತುಹಿಮಾಚಲಪರ್ಯಂತ ಒಂದೇ ತರಹ ಸಂಭಾವನೆ ವಿಧಾಯಕವಾಗಬೇಕು. ಈ ಸಂಭಾವನೆ ಆರ್ಥಿಕ ಪರಿಸ್ಥಿತಿಗನುಗುಣವಾಗಿರಬೇಕು. ನಮ್ಮ ದೇಶದ ಬಡವರ ಜೀವನದ ಮಟ್ಟಕ್ಕೆ ಅನುಗುಣವಾಗಿರಬೇಕು. ಒಂದು ಕಡೆ ಅಷ್ಟೈಶ್ವರ್ಯ ಮತ್ತೊಂದು ಕಡೆ ಕಡು ಬಡತನ ಇರಬಾರದು. ಅಧಿಕಾರಿಗಳ ಸಂಬಳದಲ್ಲಿ ಅಂತರ ಬಹಳ ಕಡಮೆ ಇರಬೇಕು. ಒಬ್ಬ ಕನಿಷ್ಠ ಪ್ರಮಾಣದ ಸಂಬಳದವನ ಮನೆಯಲ್ಲಿ ಬಹಳ ಜನ ಇರುತ್ತಾರೆ. ಕನಿಷ್ಠ ಪ್ರಮಾಣದ ಸಂಬಳದ ಏರಿಕೆ ಅತ್ಯಗತ್ಯ. ಅದನ್ನು ಕೊಟ್ಟೇತೀರಬೇಕು. ಮತ್ತೆ ಅಧಿಕಾರ ಹೆಚ್ಚಿದ ಹಾಗೆಲ್ಲಾ ಅವನ ಮನೆಯಲ್ಲಿ ಹತ್ತರಷ್ಟು ಜನ ಇದ್ದರೆ ಅವನಿಗೆ ಒಂದಕ್ಕೆ ಹತ್ತರಷ್ಟು ಸಂಬಳ ಕೊಡಬಹುದು. ಬಡವರಿಗೇ ಹೆಚ್ಚಿಗೆ ಮಕ್ಕಳು ಐಶ್ವರ್ಯವಂತರಿಗೆ ಕಡಿಮೆ ಮಕ್ಕಳು. ಅದು ಏನು ಕಾರಣವೋ ಗೊತ್ತಿಲ್ಲ. ಅವರಿಗೆ ಐಶ್ವರ್ಯ ಹೆಚ್ಚಿದಂತೆಲ್ಲಾ ಮಕ್ಕಳು ಕಡಮೆ. ಈ ದೃಷ್ಟಿಯಿಂದ ಇವನ್ನೆಲ್ಲಾ ಪರ್ಯಾಲೋಚನೆಮಾಡಬೇಕು. ಉದಾಹರಣೆಗೆ ಒಬ್ಬ ಜಿಲ್ಲಾಧಿಕಾರಿಗೂ ಒಬ್ಬ ಅಮಲ್ದಾರನಿಗೂ ಮತ್ತು ಒಬ್ಬ ಗುಮಾಸ್ತನಿಗೂ ಸಂಬಳದಲ್ಲಿರುವ ವ್ಯತ್ಯಾಸವನ್ನು ನೋಡಿದರೆ ಗುಮಾಸ್ತನಿಗೆ 45 ರೂಪಾಯಿಗಳು, ಅಮಲ್ದಾರನಿಗೆ 250–300, ಜಿಲ್ಲಾಧಿಕಾರಿಗಳಿಗೆ 1,200—1,400 ರೂಪಾಯಿ, I.A.S. ಆಫೀಸರಿಗೆ 1,800 ರೂಪಾಯಿ ಈ ಅಂತರ ಕಡಮೆಯಾಗಬೇಕು. 50 ರಿಂದ 100, 100 ರಿಂದ 1,000 ಹೀಗೆ ಸಂಬಳ ಹೆಚ್ಚಾಗಕೂಡದು. ಮಿನಿಮಂ 50 ರೂಪಾಯಿಗಳು ಮ್ಯಾಗ್ಜಿಮಂ 1000 ರೂಪಾಯಿಗಳು ಇರಬೇಕು. ಸಾಮಾನ್ಯವಾಗಿ ಒಬ್ಬ ಅಧಿಕಾರಿಗೆ ಒಂದು ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಸಂಬಳ ಇರಕೂಡದು.

ಶ್ರೀ ಟಿ. ಪಾರ್ಥಸಾರಥಿ.—ತಾವು ಹೇಳಿದ್ದು ಮಂತ್ರಿಗಳಿಗೂ ಅನ್ವಯಿಸುತ್ತದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂತ್ರಿಗಳಿಗೂ ಅನ್ವಯಿಸುತ್ತದೆ. ಡಾಕ್ಟರುಗಳಿಗೂ ಅನ್ವಯಿಸುತ್ತದೆ ತಮ್ಮಲ್ಲಿರುವ ವಿಶೇಷವಾದ ಪಾಂಡಿತ್ಯದಿಂದ ದೇಶಕ್ಕೋಸ್ಕರವಾಗಿ ಸೇವೆ ಸಲ್ಲಿಸುತ್ತಿದ್ದೇನೆಂದು ನೀವು ಹೇಳುವವರು ಕೊಡಬೇಕು.

ಶ್ರೀ ಟಿ. ಪಾರ್ಥಸಾರಥಿ.—ಧಾರಾಳವಾಗಿ ಕೊಡುತ್ತಿದ್ದೇನೆ.

Sri H. M. CHANNABASAPPA.—Thank you very much, Sir, I am so much obliged that the Doctor has been so generous. ಈ ರೀತಿಯಲ್ಲಿ ಇನ್ನೂ ಅಧಿಕಾರಿಗಳಲ್ಲಿರತಕ್ಕ ಅಂತರ ಕಡಮೆಮಾಡಬೇಕು, ಮುಖ್ಯವಾಗಿ ಹೊಟ್ಟೆ ತುಂಬ ಅನ್ನ, ಮೈ ತುಂಬಾ ಬಟ್ಟೆ-ಇರುವುದಕ್ಕೆ ಮನೆ ಇತ್ಯಾದಿ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಅವಶ್ಯಕತೆ ಇರಲಿ ಇಲ್ಲದೆ ಹೋದರೂ ಅವರ ಜೇಬು ತುಂಬಲಿ ಎಂದರೆ ಈ ಸಭೆ ಒಪ್ಪುವುದಿಲ್ಲ. ನಮ್ಮ ಸರ್ಕಾರದವರು ಇದನ್ನು ಯಾವ ರೀತಿಯಾದರೂ ಯೋಚನೆಮಾಡಿ ಪ್ರಜಾಭಿಪ್ರಾಯವನ್ನು ಕ್ರೋಡೀಕರಿಸಿ ಕೇಂದ್ರ ಸರ್ಕಾರದವರು ಈ ಅಭಿಪ್ರಾಯಕ್ಕೆ ಹೊಂದಿಕೊಳ್ಳುವಂತೆ ಏನು ಮಾಡಬೇಕೋ ಅದನ್ನು ಮಾಡಬೇಕು. ಕಮಿಟಿ ಮಾಡಿದರೆ ಅನುಕೂಲವೇ ಎನ್ನುವುದನ್ನು ನೋಡಬೇಕು. ದೇಶಾಭಿಪ್ರಾಯವನ್ನು ರೂಪಿಸಬಹುದು. ಆ ರೀತಿ ರೂಪಿಸುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಒಂದು ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಸಂಬಳ ಯಾರಿಗೂ ಇರಕೂಡದು ಎನ್ನುವ ತತ್ವವನ್ನು ಒಪ್ಪಿಕೊಂಡಿರುತ್ತೇನೆ.

Sri C. M. ARUMUGHAM.—Both of them belong to the same party. The Congress party is continuing.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ತಾವು ಐ.ಎ.ಎಸ್. ಪೇ, ಐ.ಪಿ.ಎಸ್. ಪೇ ಮತ್ತು ಸೂಪರ್ ಟೈಂ ಸ್ಕೇಲ್ ಪೇ—ಮೂರನ್ನು ಓದಬೇಕು. ಇವುಗಳನ್ನು ನಿರ್ಧಾರಮಾಡುವಾಗ ಸ್ವಲ್ಪ ಯೋಚನೆ ಮಾಡಬೇಕು. ಅದು 1,800 ರಿಂದ 2,250 ರೂಪಾಯಿಗಳವರೆಗೂ ಹೋಗುತ್ತದೆ. ಇದರಿಂದ ಡಿಸ್‌ಕಂಟೆಂಟ್‌ಮೆಂಟ್ ನಮ್ಮ ಸರ್ವೀಸಿನಲ್ಲಿ ಹೋಗುವುದಿಲ್ಲ. ಸತ್ಯ ಮತ್ತು ಧರ್ಮದಿಂದ ನೌಕರರು ಕೆಲಸ ಮಾಡುವುದಕ್ಕಾಗುವುದಿಲ್ಲ. ಸೆಕ್ರೆಟೇರಿಯಟ್‌ನಲ್ಲಿ ಅನೇಕ ವೇಳೆ ನಾನು ನೋಡಿದ್ದೇನೆ. ನಾನು ಮಂತ್ರಿಯಾಗಿರುವಾಗ ಬಡನೌಕರರು ರಾತ್ರಿವೇಳೆಯಲ್ಲಿ ಸುಮಾರು 10–11–12 ಘಂಟೆಯವರೆಗೂ ಕೆಲಸ ಮಾಡುತ್ತಿದ್ದರು. ಅಲ್ಪ ಸಂಬಳ ತೆಗೆದುಕೊಂಡು ಬೆಳಗಿನಿಂದ ರಾತ್ರಿ 10 ಘಂಟೆಯವರೆಗೂ ದುಡಿದು ಯಾವ ರೀತಿ ಹೆಂಡತಿ ಮಕ್ಕಳನ್ನು ಸಾಕಬೇಕು, ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇದು ನನಗೆ ಸಂಬಂಧಪಟ್ಟ ವಿಷಯವಲ್ಲ. ದೇಶಕ್ಕೆ ಸಂಬಂಧಪಟ್ಟ ವಿಷಯ. ಆಡಳಿತದಲ್ಲಿ ಹೆಚ್ಚಿನ ಕೆಲಸ ಮಾಡತಕ್ಕಂಥವರು ಸಣ್ಣಪುಟ್ಟ ನೌಕರರೇ. ಮೇಲೆ ಮೇಲೆ ಹೀಗೆ ಹೆಚ್ಚು ಹೆಚ್ಚು ಕೆಲಸ ಮಾಡಿಸುವಾಗ, ಜವಾನರಿಗೆ ಅವರ ಜೀವನಕ್ಕೆ ಹಣ ಎಷ್ಟು ಬೇಕೋ ಅಷ್ಟನ್ನು ಕೊಡಬೇಕು. ಚೈನಾದಲ್ಲಿ ಸಪ್ಲೈ ಸಿಸ್ಟಂ ಮತ್ತು ಸ್ಯಾಲರಿ ಸಿಸ್ಟಂ ಹೀಗೆ ಎರಡು ವಿಧಗಳಿವೆ. ಯಾರು ಯಾರಿಗೆ ಸಂಬಳ ಸಾಲದೋ ಅವರಿಗೆ ಸಪ್ಲೈ ಸಿಸ್ಟಂ ಇಟ್ಟಿದ್ದಾರೆ, ಅವರಿಗೆ ಮೂರು ಮೂರು ಊಟ, ಮೂರು ಮೂರು ತಿಂಡಿ ಕೊಡುತ್ತಾರೆ. ನಿರ್ದಿಷ್ಟ ಪ್ರಮಾಣದಲ್ಲಿ ಬಟ್ಟೆ ಕೊಡುತ್ತಾರೆ, ಮನೆ ಕೊಡುತ್ತಾರೆ, ಪಾಕೆಟ್

ಮಾನಿ ಕೊಡುತ್ತಾರೆ. ಅದಕ್ಕೆ ಒಪ್ಪುವುದಾದರೆ ಒಪ್ಪಲಿ; ಇಲ್ಲಿಯೂ ಆರೀತಿ ಮಾಡಲಿ. ಬಡವನಿಗೆ ಇರುವುದಕ್ಕೆ ಅನುಕೂಲವಿಲ್ಲದಿದ್ದರೆ ಕೆಲಸವನ್ನು ದಕ್ಷತೆಯಿಂದ ಮಾಡಿ ಎಂದು ಹೇಳುವುದಕ್ಕಾಗುತ್ತದೆಯೇ? ಮನೆಯಲ್ಲಿ ಹೆಂಡತಿ ಮಕ್ಕಳು ಸಾಯುತ್ತಾ ಇದ್ದರೆ ಬರೀ ಹನ್ನೆರಡು ಘಂಟೆ ಕೆಲಸಮಾಡಿ ಎಂದು ಹೇಳಿದರೆ ಹೇಗೆ ಮಾಡಬೇಕು? ಇನ್ನೊಂದು ವಿಚಾರ ದೊಡ್ಡ ಅಧಿಕಾರಿಗಳನ್ನು ಕಡಮೆ ಮಾಡುವುದರಿಂದ ಹಣ ಎಷ್ಟು ಉಳಿತಾಯವಾಯಿತು? ಸೆಕ್ರೆಟೇರಿಯಟ್ ಲೆವೆಲ್ಲಿನಲ್ಲಿ ಇದೆಲ್ಲವನ್ನು ವರ್ಕ್‌ಔಟ್ ಮಾಡುತ್ತಾ ಇರುವಾಗ ನೋಡಿದ್ದೇನೆ. ಬಹಳ ಕಮ್ಮಿ ಉಳಿತಾಯವಾಗುತ್ತದೆ. ಇದರಿಂದ ಸೈಕೊಲಾಜಿಕಲ್ ಎಫೆಕ್ಟ್ ಮಾತ್ರ ಆಗುತ್ತದೆ. ಖರ್ಚಿಗೆ ತಕ್ಕಂತೆ ಉತ್ಪತ್ತಿ ಹೆಚ್ಚಬೇಕು. ದೇಶದ ಹಿತ ದೃಷ್ಟಿಯಿಂದ ಎಲ್ಲರೂ ಕೆಲಸ ಮಾಡೋಣ. ಮೊದಲು ನಾವು ತ್ಯಾಗಮಾಡೋಣ. ಆಗ ಸೈಕೊಲಾಜಿಕಲ್ ಎಫೆಕ್ಟ್ ಉಂಟಾಗುತ್ತದೆ. ಮಾನಸಿಕ ಪರಿವರ್ತನೆ ಬಹಳ ಮುಖ್ಯ. ಒಂದು ಭಾಗದಲ್ಲಿ ಒಂದು ತರಹ, ಇನ್ನೊಂದು ಭಾಗದಲ್ಲಿ ಇನ್ನೊಂದು ತರಹ ಇರಬಾರದು. ಹಣ ಉಳಿತಾಯದ ಪ್ರಶ್ನೆಯೇ ಅಲ್ಲ. ಹಣ ಉಳಿತಾಯ ಆಗುವುದು ಕಡಮೆ. ಅವನ ಮಾನಸಿಕ ಪರಿವರ್ತನೆ ಆಗಬೇಕು. ತಾನು ಮಾಡುವ ಕೆಲಸ ದೇಶಕ್ಕೋಸ್ಕರ ಎಂದು ಅವನಲ್ಲಿ ಭಾವನೆ ಹುಟ್ಟಿದರೆ ಆಗ ಅವನು ತನಗೆ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಂಡು ತನ್ನ ಕೆಲಸವನ್ನು ದಕ್ಷತೆಯಿಂದ ಮಾಡುತ್ತಾನೆ. ಇಷ್ಟು ಹೇಳಿ ನಾನು ಈ ನಿರ್ಣಯಕ್ಕೆ ಸರ್ಕಾರದವರು ಏನು ಉತ್ತರ ಕೊಡುತ್ತಾರೆಂದು ನೋಡುತ್ತೇನೆ. ಇದು ನಮ್ಮ ಸಂಸ್ಥಾನಕ್ಕೆ ಮಾತ್ರ ಸಂಬಂಧಪಟ್ಟಿದ್ದಲ್ಲ. ಒಂದು ಸಂಸ್ಥಾನದವರು ಮಾತ್ರ ಮನಸ್ಸು ಮಾಡಿ ಈ ನಿರ್ಣಯವನ್ನು ಒಪ್ಪಿಕೊಂಡರೆ ಆಗುವುದಿಲ್ಲ. ಇತರ ಸಂಸ್ಥಾನಗಳೂ ಒಪ್ಪಿಕೊಳ್ಳಬೇಕು. ಕೇಂದ್ರ ಸರ್ಕಾರವೂ ಒಪ್ಪಬೇಕು. ನಿಜ. ಇವು ಆಗಬೇಕು. ಯಾರಾದರೂ ಒಬ್ಬರು ಬೆಕ್ಕಿಗೆ ಗಂಟೆ ಕಟ್ಟಬೇಕು. ಬೆಕ್ಕಿಗೆ ಗಂಟೆ ಕಟ್ಟುವ ಕೆಲಸ ಇನ್ನುಮುಂದೆ ಆಗಬಹುದು. ಆ ಗೌರವ ಸ್ಥಾನ ಮೈಸೂರಿಗೆ ಲಭಿಸಲಿ. ಮೈಸೂರಿನ ಜನತೆ, ಮೈಸೂರಿನ ಅಸೆಂಬ್ಲಿ ತನ್ನ ಆಡಳಿತವನ್ನು ನಿಷ್ಪಕ್ಷಪಾತದಿಂದ, ದೇಶಪ್ರೇಮದಿಂದ ಮತ್ತು ನಿಸ್ಪೃಹತೆಯಿಂದ ನಡೆಸಲಿ. ಕೀರ್ತಿ ನಮ್ಮ ಸಂಸ್ಥಾನಕ್ಕೆ ಮತ್ತು ನಮ್ಮ ಅಸೆಂಬ್ಲಿಗೆ ಬರಬೇಕು. ನಮ್ಮ ಸರ್ಕಾರಕ್ಕೂ ಬರಬೇಕು. ಈ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಮನವಿಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ವಿಷಯವನ್ನು ಸಾಮಾನ್ಯ ದೃಷ್ಟಿಯಿಂದ ಅರ್ಥಮಾಡಿಕೊಂಡರೆ, ಅಷ್ಟೇನೂ ದೊಡ್ಡದಲ್ಲ ಎಂದು ನಾವು ತಿಳಿದುಕೊಳ್ಳಬಹುದು. ಆದರೆ ನಮ್ಮ ಪ್ರತಿನಿತ್ಯ ಅನುಭವದ ಆಧಾರದ ಮೇಲೆ ಹೇಳಬೇಕಾಗಿದ್ದರೆ ದೇಶದಲ್ಲಿ, ಸಮಾಜದಲ್ಲಿ, ರಾಷ್ಟ್ರದ ಮೂಲೆ ಮೂಲೆಗಳಲ್ಲಿ, ಅತೃಪ್ತಿ, ಅನ್ಯಾಯ, ಅಸಹಕಾರ, ಇತ್ಯಾದಿ ಕೆಟ್ಟ ಗುಣಗಳು ಸಮಾಜದ ಒಂದು ಪ್ರಗತಿಗೆ ಇವೊತ್ತಿನ ದಿವಸ ಅಡ್ಡಿ ಬರುತ್ತಿದೆಯೆಂದು ಹೇಳಬೇಕಾಗಿದೆ. ಯಾವುದೇ ಒಂದು ಸರ್ಕಾರವನ್ನು ತೆಗೆದುಕೊಳ್ಳಿ. ಯಾವುದೇ ಒಂದು ರಾಷ್ಟ್ರವನ್ನೇ ತೆಗೆದುಕೊಳ್ಳಿ. ಯಾವುದೇ ಒಂದು ಪ್ರಜಾಪ್ರಭುತ್ವವನ್ನೇ ತೆಗೆದುಕೊಳ್ಳಿ. ಸರ್ಕಾರದ ಮೇಲಿನ ಗುರುತರವಾದ ಜವಾಬ್ದಾರಿ ಕಣ್ಣಿಗೆ ಎದ್ದುಕಾಣುವುದನ್ನು ನೋಡುತ್ತಿದ್ದೇವೆ. ದೇಶದಲ್ಲಿ ಸಮಾಜದ ಪ್ರಗತಿಗೆ ಕಳಂಕವನ್ನು ತರತಕ್ಕ ಅತೃಪ್ತಿ, ಅಸಹಕಾರ, ಅನ್ಯಾಯ, ಇತ್ಯಾದಿ ಅನಿಷ್ಟಗಳನ್ನು ತೊಡೆದುಹಾಕಬೇಕು. ಶ್ರೀಮಾರ್ಕ ಚನ್ನಬಸಪ್ಪನವರು ಈ ಸಮಸ್ಯೆ 1950ನೆಯ ಇಸವಿಯಲ್ಲಿ ಈ ಘನಸಭೆಯಲ್ಲಿ ಚರ್ಚೆಗೆ ಬಂದು ಸರ್ಕಾರದವರೇ ಆಗ್ಗೆ ಇದನ್ನು ಬಹಳ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆಂದು ಅಪ್ಪಣೆಕೊಟ್ಟಿದ್ದರು ಎಂದು ಹೇಳಿದರು. ಆದರೆ ನಿಜವಾಗಿ ಹಿಂದಿನ ಸರ್ಕಾರದವರು ಅಥವಾ ಈಗ ಸರ್ಕಾರದ ಹೊರೆಯನ್ನು ಹೊತ್ತಿರತಕ್ಕ ವ್ಯಕ್ತಿಗಳು ಜಟಿಲವಾದ ಈ ಸಮಸ್ಯೆಯ ಬಗ್ಗೆ ಏನಾದರೂ ಮಾಡಿದ್ದಾರೆ ಎಂದು ಹೇಳಿದರೆ, ಅದು ಶುದ್ಧ ಸುಳ್ಳು, ಏನೂ ಮಾಡಿಲ್ಲ. ಈ ಠರಾವನ್ನು ತಂದಿರತಕ್ಕ ನನ್ನ ಮಾನ್ಯ ಮಿತ್ರರಾದ ಶ್ರೀ ಬೈರೇಗೌಡರು ನಿಜವಾಗಿಯೂ ಬಹಳ ಉದಾರಿಯಾಗಿದ್ದಾರೆಂದು ನಾನು ಹೇಳಬೇಕಾಗಿದೆ. ನನ್ನ ಅರ್ಥದಲ್ಲಿ ಹೇಳುವುದಾದರೆ, ನಾನು ಕಳುಹಿಸಿರುವ 53ನೆಯ ನಿರ್ಣಯವನ್ನು ನೋಡಿದರೆ ಇನ್ನೂ ಚೆನ್ನಾಗಿ ಗೊತ್ತಾಗುತ್ತದೆ. ಅದು ಈ ರೀತಿ ಇದೆ :—“ ಸರ್ಕಾರೀ ನೌಕರರ ಪರಮಾವಧಿ ಸಂಬಳವನ್ನು ತಿಂಗಳಿಗೆ ಒಂದು ಸಾವಿರ ರೂಪಾಯಿಗಳಿಗೆ ಮೀರದಂತೆಯೂ ಮತ್ತು ಕನಿಷ್ಠಾವಧಿ ಸಂಬಳವನ್ನು ತಿಂಗಳಿಗೆ ಒಂದು ನೂರು ರೂಪಾಯಿಗಳಿಗೆ ಕಡಮೆಯಿಲ್ಲದಂತೆಯೂ ನಿಗದಿ ಮಾಡಬೇಕೆಂದು ಸರ್ಕಾರದವರಿಗೆ ಸಲಹೆ ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ.” ಹೆಚ್ಚು ಕಡಿಮೆ ಎರಡನೆಯ ಠರಾವು ಮತ್ತು ಐವತ್ತು ಮೂರನೆಯ ಠರಾವು ಇವೆರಡರ ಅಭಿಪ್ರಾಯ ಒಂದೇ ಆಗಿದೆಯೆಂದು ನಾವು ತಿಳಿದುಕೊಳ್ಳಬೇಕು. ನಾನು ಪ್ರಥಮತಃ ಈ ಸಭೆಗೆ ಬಂದಿದ್ದೇನೆ. ನನ್ನ ಅಲ್ಪಾವಧಿಯ ಅನುಭವದ ಆಧಾರದ ಮೇಲೆ ಹೇಳುವುದಾದರೆ ಅನೇಕ ಮಸೂದೆಗಳು ಈ ಸಭೆಯ ಮುಂದೆ ಚರ್ಚೆಗೆ ಬಂದು ಪಾಸಾಗಿವೆ. ಈಗ ವಿಶಾಲ ಕರ್ಣಾಟಕವಾಗಿದೆ. ಹರಿದುಹೋಗಿದ್ದ ಅನೇಕ ಕನ್ನಡ ದೇಶದ ಭಾಗಗಳು ಈಗ ಒಂದುಗೂಡಿವೆ. ಜನಗಳ ಮನೋಭಿಪ್ರಾಯವನ್ನು ಸಂಘಟಣೆ ಮಾಡಬೇಕು. ಮತ್ತು ರಾಜ್ಯದ ಪ್ರಗತಿಗಾಗಿ ಪ್ರತಿಯೊಬ್ಬನೂ ದುಡಿಯಬೇಕು. ಅದಕ್ಕಾಗಿ ಹೆಚ್ಚಿಗೆ ಹಣಬೇಕು. ಭಂಡಾರಕ್ಕೆ ಅನೇಕ ತೆರಿಗೆಗಳಿಂದ ಹಣ ಕೂಡಿಸುತ್ತಿದ್ದಾರೆ. ಉದಾಹರಣೆಗೆ ತೆಗೆದುಕೊಂಡರೆ, ನಮ್ಮ ಸರ್ಕಾರದವರು ಈ ಸಾರಿ ವ್ಯವಸಾಯ ತೆರಿಗೆ, ವಾಹನಗಳ ತೆರಿಗೆ, ನೀರಾವರಿ ತೆರಿಗೆ, ಸ್ಟಾಂಪು ತೆರಿಗೆ, ಮಾರಾಟ ತೆರಿಗೆ, ಆದಾಯ ತೆರಿಗೆ, ಇತ್ಯಾದಿ ಮಸೂದೆಗಳನ್ನು ನಮ್ಮ ಮುಂದೆ ಇಟ್ಟರು. ಮುಂದೆ ಬರಬಹುದಾದ ಮತ್ತು ಆಗಲೇ ಬಂದಿರತಕ್ಕ ಕೋರ್ಟು ಫೀ ಮತ್ತು ವ್ಯಾಲ್ಯುಯೇಷನ್ ಮಸೂದೆಯನ್ನು ಪುನಃ ಮಂಡಿಸುವವರಾಗಿದ್ದಾರೆ. ನಾವೂ ಪ್ರಜಾಪ್ರಭುತ್ವ ತತ್ವಕ್ಕನುಸಾರವಾಗಿ ಅನೇಕ ರೀತಿಯಲ್ಲಿ ಕೆಲವಾರು ಟೀಕೆಗಳನ್ನು ಮಾಡಿದೆವು. ಸರ್ಕಾರದವರೂ ಸಹ ನಮ್ಮ ಟೀಕೆಗಳಿಗೆ ಸೂಕ್ತವಾದ ಜವಾಬನ್ನು ಕೊಟ್ಟರು. ಮೇಲೆ ಹೇಳಿದಂತಹ ಜಟಿಲವಾದ ಸಮಸ್ಯೆಗಳ ಅತೃಪ್ತಿ ದೇಶದಲ್ಲಿ ಇರಬಾರದು. ಇವು ನಮ್ಮ ಸಂಸ್ಕೃತಿಗೆ, ವೇದಗಳಿಗೆ, ಮತ್ತು ಉಪನಿಷತ್ತುಗಳಿಗೇ ವಿರೋಧ.

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾವುದು ?

ಶ್ರೀ ವೈ. ವೀರಪ್ಪ.—ಯಾವುದು ಅಂದರೆ ಈಗಿರತಕ್ಕ ಆಂತರಿಕವಾದ ಸಂಬಳ ಸಾರಿಗೆಗಳ ವ್ಯತ್ಯಾಸ. ಯಾವ ದೇಶವೇ ಆಗಲ ಮುಂದೆ

(ಶ್ರೀ ವೈ. ವೀರಪ್ಪ)

ಬರಬೇಕಾದರೆ, ಪ್ರಗತಿಗೆ ಬರಬೇಕಾದರೆ ಈ ಸಂಬಳ ಸಾರಿಗೆಗಳ ಅಂತರ ಕೊನೆಗಾಣಬೇಕು.

ಶ್ರೀ ಟಿ. ಪಾರ್ಥಸಾರಥಿ.—ಮಾನ್ಯ ಸದಸ್ಯರು ನಿರ್ಣಯದ ಮೇಲೆ ಮಾತನಾಡುತ್ತಾ ಉಪನ್ಯಾಸ ಮಾಡುತ್ತಿದ್ದಾರೆ.

ಶ್ರೀ ವೈ. ವೀರಪ್ಪ.—ನಿರ್ಣಯವನ್ನು ಅನುಸರಿಸಿ ಕೊಂಡೇ ನಾನು ಮಾಡತಕ್ಕ ವಾದ. ನನ್ನ ವಾದ ವನ್ನು ಪುಷ್ಟೀಕರಣಮಾಡಬೇಕಾದರೆ, ನಾನಾ ವಿಚಾರ ಗಳನ್ನು ತೆಗೆದುಕೊಂಡು ಮಾತನಾಡುವುದು ಅದು ಒಂದು ಅನಿವಾರ್ಯ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಒಟ್ಟು 61 ನಿರ್ಣಯಗಳಿವೆ. ಎಂಥೆಂಥ ಮಸೂದೆಗಳೋ ಈ ಸಭೆಯ ಮುಂದೆ ಬಂದಾಗ್ಗೆ, ಒಂದು ಟೈಂ ಲಿಮಿ ಟ್ಟನ್ನು ನಿಗದಿಮಾಡಿದ್ದಿರಿ. ಮುಂದಿನ 3ನೆಯ ನಿರ್ಣಯ ನಮ್ಮ ದೇಶಕ್ಕೆ ಅತಿ ಮುಖ್ಯವಾದುದು. ಅದು ಬಹಳ ಪ್ರಾಮುಖ್ಯವಾದುದು ಮತ್ತು ಇಡೀ ರಾಜ್ಯಕ್ಕೆ ಸಂಬಂಧಪಟ್ಟುದು. ಅದು ಇಲ್ಲಿ ಚರ್ಚೆಗೆ ಬರುವು ದಕ್ಕೆ ಅವಕಾಶ ಮಾಡಕೂಡದು ಎಂದು ಏನಾದರೂ ಇಷ್ಟು ಚರ್ಚೆ ಆಗುತ್ತಿದೆಯೋ ಏನೋ ಎಂದು ಆಲೋ ಚನೆ ಮಾಡಬೇಕಾಗಿದೆ. ಆದ್ದರಿಂದ ಏನಾದರೂ ಟೈಂ ಲಿಮಿಟ್ಟನ್ನು ಪ್ರಿಸ್ಕ್ರೈಬ್ ಮಾಡುವುದಕ್ಕೆ ಆಗು ತ್ತದೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಒಂದು ವೇಳೆ ಈ ನಿರ್ಣಯದ ಸೂಚಕರು ಇದನ್ನು ವಿತ್‌ಡ್ರಾ ಮಾಡಿದರೆ, ಮುಂದಿನ ಅತಿ ಮುಖ್ಯವಾದ ನಿರ್ಣಯವು ಚರ್ಚೆಗೆ ಬರುತ್ತದೆ. ಇಲ್ಲದೇ ಹೋದರೆ ಮುಂದಿನ ನಿರ್ಣಯ ಈ ದಿನ ಚರ್ಚೆಯಾಗುವುದಿಲ್ಲ. Time limit was prescribed on earlier occasions. I want to know whether there is any time limit and what is the business of the day. I also want to know what happens to the rest of the resolutions.

5-30 P.M.

ವೈ. ವೀರಪ್ಪ.—ನಾನು ಅತಿ ವಿನಯಪೂರ್ವಕವಾಗಿ ಬೇಡಿಕೊಳ್ಳುವುದು ಇಷ್ಟೆ; ನನ್ನ ಮಾನ್ಯ ಮಿತ್ರರನ್ನು ಬೇಡಿಕೊಳ್ಳುವುದು ಇಷ್ಟೆ. ಸಮಾಜದಲ್ಲಿ, ಅತೃಪ್ತಿ, ಅಸಹಕಾರ, ಅನ್ಯಾಯ ಇತ್ಯಾದಿ ಅವಲಕ್ಷಣಗಳು ಇಟ್ಟು ಕೊಂಡರೆ, ಸಮಾಜ ಮುಂದುವರಿಯುವುದಿಲ್ಲ. ರಾಷ್ಟ್ರ ಪ್ರಗತಿದಾಯಕವಾಗಿ ಬೆಳೆಯುವುದಿಲ್ಲ. ಅಂತರಂಗ ವಾಗಿ ಅತೃಪ್ತಿ ಇದ್ದು, ಬಹಿರಂಗವಾಗಿ ಸಹಕಾರ ತೋರಿಸಿದರೆ, ನಾವೇನೂ ಮಾಡುವುದಕ್ಕಾಗುವುದಿಲ್ಲ. ಹನ್ನೊಂದು ಮಂತ್ರಿಗಳಿದ್ದರೂ, ನಾವು ಏನನ್ನೂ ಮಾಡುವುದಕ್ಕಾಗುವುದಿಲ್ಲ. ಒಬ್ಬೊಬ್ಬರಿಗೂ ಸಹಕಾರ ವಿರಬೇಕು. ಸಮಾಜದಲ್ಲಿರತಕ್ಕ ವ್ಯತ್ಯಾಸಗಳನ್ನು ಒಂದುಗೂಡಿಸಬೇಕು. ಇಂತಹ ಪ್ರಶ್ನೆಗಳನ್ನು ನೀವು ಪ್ರಮುಖವಾಗಿ ತೆಗೆದುಕೊಂಡು ಪರಿಶೀಲನೆಮಾಡಿ ಅದಷ್ಟು ಜಾಗ್ರತೆ ಪರಿಹಾರ ಮಾಡದೆ ಇದ್ದರೆ ನೂರು, ಇನ್ನೂರು, ಸಾವಿರ ವರುಷಗಳಾದರೂ ಏನು ಪ್ರಗತಿ ಸಾಧಿಸುವುದಕ್ಕೂ ಆಗುವುದಿಲ್ಲ. ಏಕೆಂದರೆ ಇದು ಮನುಷ್ಯನ ಸ್ವಭಾವ. ನನ್ನ ಪಕ್ಕದಲ್ಲಿರುವವನಿಗೇ ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ. ಭಗವಂತನ ದೃಷ್ಟಿ ಯಲ್ಲಿ ಪ್ರತಿಯೊಬ್ಬ ಮನುಷ್ಯನೂ ಒಂದೇ ಎಂದು ಒಪ್ಪಿಕೊಂಡಿದ್ದೇವೆ. ಸಂಸ್ಕೃತಿ ಪ್ರಚಾರ ಎಂದು ಹಿಂದೆ ಒಬ್ಬರು ಮಾಡಿದರು. ಅದರ ಪರಿಣಾಮ ಇಲ್ಲಿಯ ವರೆಗೆ ಏನಾಯಿತೋ ಗೊತ್ತಿಲ್ಲ. ಅದು ಹೇಗಾದರೂ ಇರಲಿ. ಅದರ ಬಗ್ಗೆ ಚರ್ಚೆಮಾಡುವುದಕ್ಕೆ ಇಷ್ಟಪಡು ವುದಿಲ್ಲ. ವಿಷಯಗಳು ಹೀಗಿರಬೇಕಾದರೆ, ಇಂತಹ ಸಮಸ್ಯೆಗಳ ಬಗ್ಗೆ ಹೆಚ್ಚಾಗಿ ಗಮನಕೊಡಬೇಕು. ಒಂದು ಕಡೆ ಸರ್ಕಾರದವರು ಹೇಳುತ್ತಾರೆ: "ನಮ್ಮಲ್ಲಿ ದುಡ್ಡಿಲ್ಲ, ತಾಳಿ" ಎಂದು. ಆದರೆ ನಾವು ಅವರಿಗೆ ಸುಲಭವಾಗಿ ಉಪಾಯ ಕಲಿಸಿಕೊಡುತ್ತೇವೆ. ಒಂದು ಕಮಿಟಿ ರಚನೆ ಮಾಡಿ ಎಲ್ಲೆಲ್ಲಿ ಅನ್ಯಾಯವಾಗಿ ದುಡ್ಡು ಪೋಲಾಗುತ್ತಿದೆಯೋ, ಅದನ್ನು ಪರಿಶೀಲನೆಮಾಡಿ, ಸರ್ಕಾರಕ್ಕೆ ರಿಪೋರ್ಟ್ ಮಾಡಲಿ ; ಅದನ್ನು ಅನುಸ ರಿಸಿ, ಅದಷ್ಟುಮಟ್ಟಿಗೆ ವ್ಯತ್ಯಾಸವನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನಮಾಡಿ. ರಾಜ್ಯಾಂಗದ ಪ್ರಿಯಾಂಬಲ್ ಪ್ರತಿಯೊಬ್ಬರಿಗೂ ಕೂಡ equality, liberty, fraternity, ಇತ್ಯಾದಿ ಮೂಲಸಿದ್ಧಾಂತ ಗಳು ಇವೆಯೆಂದು ಸಾರುತ್ತಾ ಇವೆ. ಎಷ್ಟರಮಟ್ಟಿಗೆ ನಮ್ಮ ನಿತ್ಯ ಜೀವನದಲ್ಲಿ ಇವನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆ, ಶೇಕಡ ಎಷ್ಟು ಭಾಗವನ್ನು ಅನುಷ್ಠಾ ನಕ್ಕೆ ತರುತ್ತಾ ಇದ್ದೇವೆ ಎಂದು ಪರಿಶೀಲನೆಮಾಡಿ ದರೆ, ನಿಜವಾಗಿಯೂ ಏನೂ ತರುತ್ತಾ ಇಲ್ಲ ಎಂದು ಹೇಳಬೇಕಾಗಿದೆ. ಕಮ್ಯೂನಿಟಿ ಪ್ರಾಜೆಕ್ಟ್, ನ್ಯಾಷ ನಲ್ ಎಕ್ಸ್‌ಟೆನ್‌ಷನ್ ಸ್ಕೀಂ, ರಾಷ್ಟ್ರೀಯ ವಿಸ್ತರಣಾ ಯೋಜನೆ ಮುಂತಾದುವುಗಳ ಮೇಲೆ ಕೋಟ್ಯಾಂ ತರ ರೂಪಾಯಿಗಳನ್ನು ಖರ್ಚುಮಾಡಲಾಗುತ್ತಿದೆ. ಅದರಲ್ಲಿ ನಿಜವಾಗಿಯೂ ರಾಷ್ಟ್ರದ ಪ್ರಗತಿಗೆ, ರಾಷ್ಟ್ರ ಬೆಳೆಯುವುದಕ್ಕೆ ಎಷ್ಟು ಹಣ ವಿನಿಯೋಗವಾಗುತ್ತಿದೆ? ಅನ್ಯಾಯಮಾಡತಕ್ಕಂಥವರ ಒಂದು ಬೊಕ್ಕಸಕ್ಕೆ, ಬ್ಯಾಂಕಿನ ಅಕೌಂಟಿಗೆ ಹೋಗುತ್ತಾ ಇದೆ, ಅದನ್ನು ಪರಿಶೀಲನೆ ಮಾಡಲಿ ಎಂದು ಅನೇಕ ಅರ್ಜಿಗಳು ಬಂದಿ ಲ್ಲವೇ? ದೇವರು ಕೊಟ್ಟಿರತಕ್ಕಂಥ ಎರಡು ಕಣ್ಣು, ಎರಡು ಕೈ, ಒಂದು ಗೇಣುದ್ದ ಹೊಟ್ಟೆ. ಅನ್ನಕ್ಕೆ ಬೇಕಾಗಿರುವುದು ಒಂದು ಪಾವು ಅಕ್ಕಿ ; ಜಾಸ್ತಿ ಶ್ರಮ ಪಡುವವನು ಎರಡು ಪಾವು ಅಕ್ಕಿ ಊಟ ಮಾಡ ಬಹುದು. ಹೀಗಿರುವಾಗ ನೌಕರರ ಸಂಬಳದಲ್ಲಿ ಒಂದು ತಾರತಮ್ಯವಿರಬೇಕು, ಒಂದು ರೀಸನಬಲ್ ಸ್ಟ್ಯಾಂಡರ್ಡ್ ಇರಬೇಕು. ಅದನ್ನು ನಿಗದಿ ಮಾಡಿ, ಅದರ ಆಧಾರದ ಮೇಲೆ ಸಂಬಳ ಕೊಡಿ ಎಂದರೆ, ಯಾರೋ ಒಬ್ಬರು ದೇವಲೋಕದಿಂದ ಬಂದಿರುತ್ತಾರೆ, ಅವರು ಬೃಹಸ್ಪತಿ, ಅವರಿಗೆ 4,000 ರೂಪಾಯಿ ಕೊಡ ಬೇಕು ಎನ್ನುತ್ತೀರಿ ಏನು ಸ್ವಾಮಿ, ಅವರು ಮಾಡಿ ರುವುದು? ನಿತ್ಯ ಜೀವನದಲ್ಲಿ ಸರ್ಕಾರದ ಭದ್ರತೆಗೆ ನೆರವನ್ನು ನೀಡತಕ್ಕಂಥವರು, ಸಣ್ಣ ಅಧಿಕಾರಿಗಳು, ಕೆಳದರ್ಜೆನೌಕರರು. ಸಂಬಳಗಳಲ್ಲಿ ಇಷ್ಟು ಅಂತರ ವಿದ್ದರೆ, ನೌಕರರಲ್ಲಿ ಒಂದು ಅಸಹಕಾರ ಭಾವನೆ ಹುಟ್ಟುತ್ತದೆ ಎಂದು ಕೇಂದ್ರ ಸರ್ಕಾರದಲ್ಲಿ ವಾದ ಮಾಡುವುದಕ್ಕೆ ಶಕ್ತಿ ಇಲ್ಲವೇ? ನೀವು ಏನು ಅನು ಷ್ಠಾನಕ್ಕೆ ತರುತ್ತಿದ್ದೀರಿ? ಉದಾಹರಣೆಗೆ ಇದೇ ಲೆಜಿಸ್ಲೇಚರ್ ಸೆಕ್ರೆಟೇರಿಯಟ್ ನೌಕರರ ಸಂಬಳ ವನ್ನೂ, ಇಂಡಿಯಾ ದೇಶದ ಲೆಜಿಸ್ಲೇಚರ್ ಸೆಕ್ರೆಟೇರಿ ಯಟ್‌ನಲ್ಲಿ ಇರತಕ್ಕ ನೌಕರರ ಸಂಬಳವನ್ನೂ, ಅದಷ್ಟು ಮಟ್ಟಿಗೆ ಒಂದು ಸಮವಾಗಿ ಮಾಡಬೇಕು ಎನ್ನುವ ಅಭಿ ಪ್ರಾಯ ಬಂದಿದೆ. ಅವರ ಸಂಬಳವನ್ನು ಹೆಚ್ಚಿಸುವು ದಕ್ಕೆ, ಆರು ತಿಂಗಳ ಹಿಂದೆಯೇ ನಮ್ಮ ಲೆಜಿಸ್ಲೇಟಿವ್ ಕೌನ್ಸಿಲ್ ಚೇರ್‌ಮನ್ ಮತ್ತು ಇದೇ ಅಸೆಂಬ್ಲಿ ಸ್ಪೀಕರ್‌ರವರೂ, ರಿಪೋರ್ಟ್ ಮಾಡಿದ್ದಾರೆ. ಇಲ್ಲಿಯ ತನಕ ಅದನ್ನು ಕಾರ್ಯಗತಮಾಡಿಲ್ಲ. ವಿಷಯ ಹೀಗಿರ ಬೇಕಾದರೆ ಕೆಳದರ್ಜೆ ನೌಕರರು ಏನು ಸಹಕಾರ ಕೊಡುತ್ತಾರೆ? ಮಿನಿಸ್ಟರ್ ಬಂದಾಗ ಅಟೆನ್ಷ

ಹಾಕಬಹುದು; ಬೆರ್ ಹೊಡೆದ ತಕ್ಷಣ ಬರಬಹುದು, ಅಂತರಿಕವಾಗಿ ಸಹಕಾರ ದೊರಕದಿದ್ದರೆ, ನಮ್ಮ ಕೆಲಸ ಸುಗಮವಾಗಿ ನಡೆಯುವುದಿಲ್ಲ; ಕೇವಲ ಜಬರ್ ದಸ್ತ್ ಮಾತಿನಿಂದ ನಡೆಯುವುದಿಲ್ಲ. ಭಾಷಣಕ್ಕೆ ಕೊಟ್ಟಿರುವ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು ಎಂದು ಮಾತನಾಡುತ್ತಿಲ್ಲ. ನಿಜವಾಗಿಯೂ ಮೂಲಭೂತವಾದ ಒಂದು ಸಂಸ್ಕೃತಿ ಆಧಾರದ ಮೇಲೆ ಮಾತನಾಡುತ್ತಿದ್ದೇನೆ. ಅನುಭವದ ಆಧಾರದ ಮೇಲೆ ಮಾತನಾಡುತ್ತಿದ್ದೇನೆ.

ಮೂರು ಜನರ ಒಂದು ಕಮಿಟಿ ಮಾಡಿ. ಹಣವನ್ನು ಎಲ್ಲಿಂದ ಒದಗಿಸಬಹುದು ಎನ್ನುವುದನ್ನು ತೋರಿಸಿ ಕೊಡುತ್ತೇವೆ. ಯಾವ ರೀತಿ ಸಮೀಕರಣವಾದಬಹುದು ಎನ್ನುವುದನ್ನು ನಿರ್ಧಾರ ಮಾಡಬಹುದು. ನಾನು ಈ ಹಣದ ಸಮಸ್ಯೆಯನ್ನು ಸಾರ್ಟ್ ಮಾಡುತ್ತೇನೆ. ನಾನು ಮ್ಯಾಥೆಮ್ಯಾಟಿಕ್ಸ್ ಸ್ಟೂಡೆಂಟ್ ಅಲ್ಲದಿರಬಹುದು, ಗ್ರೇಟ್ ಎಕನಾಮಿಸ್ಟ್ ಅಲ್ಲದಿರಬಹುದು. ಶ್ರೀ ಚನ್ನಬಸಪ್ಪನವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ರಾಷ್ಟ್ರದ ಹಿತದೃಷ್ಟಿಯಿಂದ, ಪಂಡಿತ ಜವಹರಲಾಲ್‌ರವರ ಹಿತದೃಷ್ಟಿಯಿಂದ, ಸರ್ ಎಂ. ವಿಶ್ವೇಶ್ವರಯ್ಯನವರು ಹಾಕಿರುವ ದಾರಿಯನ್ನು, ಹೆದ್ದಾರಿಯನ್ನು ಹಿಡಿದು ಅನುಸರಿಸಬೇಕು. ಇವತ್ತಿನ ದಿವಸ, ರಾಷ್ಟ್ರದಲ್ಲಿ ಎಷ್ಟು ಜನಕ್ಕೆ ಅನ್ನ ಇಲ್ಲ, ಬಟ್ಟೆ ಇಲ್ಲ, ಔಷಧಿ ಇಲ್ಲ, ಆಹಾರ ಇಲ್ಲ!

ಈ ದಿವಸ ಸರ್ಕಾರದವರ ನಿಗವೆಲ್ಲಾ ಯಾವ ದಿಕ್ಕಿನಲ್ಲಿ ಹೋಗುತ್ತಿದೆಯೆಂಬುದನ್ನು ನೋಡಿದರೆ "ಸರ್ಕಾರದ ಕೆಲಸ ಅಥವಾ ಸಾರ್ವಜನಿಕರ ಕೆಲಸ-ದೇವರ ಕೆಲಸ" ಎಂಬುದಾಗಿ ಬರೆದಿ ತಕ್ಕ ಬರವಣಿಗೆಯನ್ನು ಕೆಡಿಸಲು ಅದಕ್ಕಾಗಿ 10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಲು ಹೊರಟಿದೆ. ಆ ಅಕ್ಷರಗಳನ್ನು ಕೆಡಿಸಲು ಅಷ್ಟು ಹಣವನ್ನೇಕೆ ಖರ್ಚುಮಾಡಬೇಕು? ದೇಶದಲ್ಲಿ ಬಹು ಸಂಖ್ಯಾತ ಜನರು ಹೊಟ್ಟೆಗಿಲ್ಲದೆ ಬಟ್ಟೆಗಿಲ್ಲದೆ ನರಳುತ್ತಿದ್ದಾಗ್ಗೂ ಅತ್ತಕಡೆಗೆ ಸರ್ಕಾರದ ಗಮನವೇ ಹೋಗುತ್ತಿಲ್ಲ. ಸರ್ಕಾರದವರ ನಿಗಾ ಹಣವನ್ನು ಖರ್ಚುಮಾಡಲು ಈ ಎರಡು ಸಂದರ್ಭಗಳಲ್ಲಿ ಎತ್ತಕಡೆ ಹೋಗಬೇಕಾದದ್ದು ನ್ಯಾಯ ಎಂಬುದನ್ನು ಅವರೇಕೆ ಅರಿತುಕೊಂಡಿಲ್ಲ? ಈಗಿರತಕ್ಕ ಸರ್ಕಾರದ ಪಕ್ಷದವರು ಕೇವಲ ಒಂದು ಅಧಿಕಾರದ ಆಸೆಗಾಗಿ, ಅಧಿಕಾರದ ಅಹಂನಲ್ಲಿ ದೇಶದಲ್ಲಿ ಏನೇನು ಅನಿವಾರ್ಯಗಳಿರುತ್ತವೆಂಬುದನ್ನು ಲೆಕ್ಕಿಸದೆ ಅತ್ತಕಡೆಗೆ ಗಮನವನ್ನೂ ಸಹ ಕೊಡದೆ ಸಾರ್ವಜನಿಕರ ಅಭಿವೃದ್ಧಿಗೆ ಅವಕಾಶ ನೀಡುತ್ತಿಲ್ಲ. ದೇಶದಲ್ಲಿ ಈ ದಿವಸ ಅನ್ನ ಬಟ್ಟೆಗೂ ಸಹ ಗತಿಯಿಲ್ಲದೆ ಅಲೆಯುತ್ತಿರುವಂಥ ಜನತೆಗೆ ಅನುಕೂಲ ಕಲ್ಪಿಸುವುದಕ್ಕೆ ಅವರಿಗೆ ಸಾಧ್ಯವಿಲ್ಲದಿದ್ದರೆ-ದೇಶದ ಪ್ರಗತಿಯನ್ನು ಸಾಧಿಸಲು ಶಕ್ತಿಯಿಲ್ಲದಿದ್ದರೆ ಅಧಿಕಾರವನ್ನು ಬಿಟ್ಟುಕೊಟ್ಟು) ಅವರು ತಮ್ಮ ತಮ್ಮ ಮನೆಗಳಿಗೆ ಹೊರಟು ಹೋಗಲಿ. ಅವರಿಲ್ಲಿ ನಡೆಸುತ್ತಿರುವುದು ಅವರ ಮನೆಯ ಕೆಲಸವನ್ನಲ್ಲ—ಅದು ದೇಶದ ಕೆಲಸ. ಸಮಾಜದಲ್ಲಿ ಮತ್ತು ಆಡಳಿತ ವರ್ಗದಲ್ಲಿರುವ ಏರುಪೇರುಗಳನ್ನು ತೊಡೆದು ಹಾಕಲು ಸರ್ಕಾರದವರು ಈ ದಿವಸ ನಾವು ಇಂಥ ಒಂದು ಬಿಲ್ಲನ್ನು ತರುತ್ತೇವೆ, ಅದಕ್ಕೆ ನೀವೆಲ್ಲರೂ ಒಪ್ಪಬೇಕೆಂದು ಹೇಳಲಿ-ಅದಕ್ಕೆ ನಾವೆಲ್ಲರೂ ಸಿದ್ಧವಾಗಿದ್ದೇವೆ. ಇಂಥ ಒಂದು ಕಷ್ಟಪರಿಸ್ಥಿತಿಯನ್ನು ಹೇಗಾದರೂ ಎದುರಿಸಲೇಬೇಕು. ಇಂಥ ಅತಿಮುಖ್ಯವಾದಂಥ ಕೆಲಸಗಳು ವಿಶೇಷವಾಗಿ ನಡೆಸಲ್ಪಡಬೇಕಾಗಿರುವಾಗ—ಇವುಗಳಿಗೆ ಮನಸ್ಸನ್ನು ಕೊಡದೆ ಯಾವುದೋ ಒಂದು ಬರವಣಿಗೆಯನ್ನು ಅಳಿಸುವುದಕ್ಕೆ ಹಣ ಖರ್ಚುಮಾಡುವುದು ಯಾವ ನ್ಯಾಯ? ಅಷ್ಟೇ ಅಲ್ಲದೆ ಹಿಂದೆ ಆಡಳಿತ ನಡೆಸುತ್ತಿದ್ದಂಥ ವರ್ಗದವರು ಹಾಗೆ ಮಾಡಿರತಕ್ಕ ಅವರ ಒಂದು ಬದುಕನ್ನು ಈಗಿನ ಆಡಳಿತವರ್ಗ ಅಳಿಸುವುದಕ್ಕೆ ಹೊರಟರೆ ಹಿಂದಿನ ಆಡಳಿತ ವರ್ಗದಲ್ಲಿದ್ದು ಆ ಕೆಲಸ ಮಾಡಿಸಿರತಕ್ಕವರಿಗೆ ಹೊಟ್ಟೆ ಉರಿಯುವುದಿಲ್ಲವೇ? ಆದರೆ ನಮ್ಮ ಚರಿತ್ರೆಯನ್ನು ನೋಡುವುದಾದರೆ ಹಿಂದಿನ ರಾಜಮಹಾರಾಜರುಗಳೂ—ಚಕ್ರವರ್ತಿಗಳೂ ಮಾಡಿಸಿದ್ದಂಥ ಕಾರ್ಯಗಳನ್ನು ಅವರ ತರುವಾಯ ಅಧಿಕಾರಕ್ಕೆ ಬಂದಂಥವರು ಯಾರೂ ಅವುಗಳನ್ನು ಅಳಿಸುವುದಕ್ಕೆ ಹೋಗಿಲ್ಲ. ಆದುದರಿಂದಲೇ ಈ ದಿವಸ ನಮಗೆ ಆ ಹಿಂದಿನ ಅಶೋಕ ಚಕ್ರವರ್ತಿಯ ಕಾಲದ—ಚಕ್ರ ಇತ್ಯಾದಿ ಸ್ಮಾರಕಗಳು ಉಳಿಯಲು ಅವಕಾಶವಾಗಿದೆ. ಆದರೆ ಈ ದಿವಸ ಸರ್ಕಾರಕ್ಕೆ ಮಾಡಬೇಕಾದಂಥ ಮಹತ್ಕಾರ್ಯಗಳು ಬೇಕಾದಷ್ಟಿವೆ. ದೇಶದ ಹಿತಸಾಧನೆಗೆ ಸರ್ಕಾರ ಎಲ್ಲವನ್ನೂ ತ್ಯಾಗಮಾಡಲಿ—ಅದಕ್ಕೆ ಯಾರೂ ಬೇಡವೆನ್ನುವುದಿಲ್ಲ. ಬಡತನವನ್ನು ನೀಗಲು ಅವರು ಎಲ್ಲವನ್ನೂ ತ್ಯಾಗ ಮಾಡಲಿ—ದೇಶದ ಜನ ಅವರಿಗೆ ಕೈಮುಗಿಯುತ್ತಾರೆ. ಇಂಥ ಅತಿಮುಖ್ಯವಾದ ವಿಚಾರಗಳಿಗೆ ಗಮನಕೊಡಬೇಕೇ ಶಿವಾಯಿ ಅಲ್ಪ ವಿಚಾರಗಳ ಕಡೆಗೆ ಹೆಚ್ಚಿನ ಗಮನ ಕೊಡತಕ್ಕದ್ದು ನ್ಯಾಯವಾದದ್ದಲ್ಲ. ಈ ದಿವಸ ಅಧಿಕಾರವನ್ನು ಕೈಲಿಟ್ಟುಕೊಂಡಿರತಕ್ಕವರು ಕಳೆದ ಮಹಾ ಚುನಾವಣೆಯ ಕಾಲದಲ್ಲಿ ಮಹಾಜನರಿಂದ ಓಟನ್ನು ಪಡೆಯಬೇಕಾಗಿದ್ದಂಥ ಸಮಯದಲ್ಲಿ "ನಾವು ದೇಶಕ್ಕೆ ಅಷ್ಟೊಂದು ಸೇವೆ ಸಲ್ಲಿಸುತ್ತೇವೆ; ಇಂಥಿಂಥ ಉಪಕಾರದ ಕೆಲಸಗಳನ್ನು ಮಾಡುತ್ತೇವೆಂದು ದೇವರ ಹೆಸರಿನಲ್ಲಿ ಆಣೆ-ಪ್ರಮಾಣಗಳನ್ನು ಮಾಡಿ ಅವರಿಂದ ಓಟುಗಳನ್ನು ಪಡೆದನಂತರ ಅವರ ಕಷ್ಟಕಾರ್ಪಣ್ಯಗಳನ್ನೆಲ್ಲಾ ಮರೆತು ಹೀಗೆಲ್ಲಾ ಅಲ್ಪಕಾರ್ಯಗಳಿಗೆ ಗಮನಕೊಡುತಾ ಹೋದರೆ ನಾವೇನು ಮಾಡುವುದಕ್ಕಾಗುತ್ತದೆ? ದೇವರ ಹೆಸರಿನಲ್ಲಿ ಆಣೆ-ಪ್ರಮಾಣಗಳನ್ನು ಮಾಡಿ ಅದಕ್ಕೂ ಕಟ್ಟುಬೀಳದೆ ಅವರ ಪ್ರಮಾಣ ವಚನಕ್ಕೆ ಜಗ್ಗದೆ ಹೀಗೆ ವ್ಯತಿರಿಕ್ತವಾಗಿ ನಡೆಯಲು ಹೊರಟರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಸಾಮಾನ್ಯ ಜನರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಸರ್ಕಾರ ತ್ವರಿತವಾಗಿ ತೀರ್ಮಾನ ಕೈಗೊಳ್ಳಬೇಕಾದದ್ದು ದೇಶದ ಹಿತದೃಷ್ಟಿಯಲ್ಲಿ ಅತಿಮುಖ್ಯವಾದದ್ದು. ಮಾತೆತ್ತಿದರೆ ಕೇಂದ್ರ ಸರ್ಕಾರ ಒಪ್ಪುವುದಿಲ್ಲ ಎಂಬ ಒಂದು ನೆಪವನ್ನು ಹೂಡುತ್ತಿದ್ದಾರೆ. ಆದರೆ ಅಂಥ ವಾದಕ್ಕೆ ಬಿಡುವಿಲ್ಲ. ಕಾರಣವೇನೆಂದರೆ ಈ ದಿವಸ ಆ ಕೇಂದ್ರ ಸರ್ಕಾರ ನಿಂತಿರುವುದಾದರೂ ರಾಜ್ಯ ಸರ್ಕಾರಗಳ ಬಲದ ಮೇಲೆ. ಮರದ ಬುಡವನ್ನು ಭದ್ರಮಾಡಿದರೆ ಕಾಯಿ ಬಿಡಲು ಯಾವ ಅಭ್ಯಂತರವೂ ಇಲ್ಲ. ಮಾವಿನ ಮರದ ಬುಡ ಭದ್ರವಾಗಿದ್ದಷ್ಟೂ ಮಾವಿನ ಫಸಲು ಚೆನ್ನಾಗಿ ಬಿಟ್ಟೇ ಬಿಡುತ್ತದೆ. ಅದು ಪ್ರಕೃತಿ ನಿಯಮಕ್ಕೆ ಮೀರಿ ಮಾವಿನ ಫಲವನ್ನು ಬಿಡುವುದಿಲ್ಲವೆಂದು ಹೇಳಲು ಯಾರಿಂದಲೂ ಸಾಧ್ಯವಿಲ್ಲ. ನಮ್ಮ ಸರ್ಕಾರ ಇಂಥದಕ್ಕೆ ಸಹಾಯ ನೀಡಲೇ ಬೇಕೆಂದು ಹೇಳಲಿ; ಅವರೇಕೆ ಕೊಡುವುದಿಲ್ಲ ನೋಡೋಣ. ಆದರೆ ಆ ರೀತಿ ಇವರೇನು ಪ್ರಯತ್ನ ಮಾಡಿದ್ದಾರೆ? ಇವರು ಈ ಸಂಬಂಧವಾಗಿ ಅಂಥ ಪ್ರಯತ್ನಗಳನ್ನೇನನ್ನೂ ಮಾಡಿಲ್ಲ. ಈಗ ನಮ್ಮ ಮುಂದಿರತಕ್ಕದ್ದಾದರೋ ಬಹಳ ಜಟಿಲವಾದಂಥ ಸಮಸ್ಯೆ. ಇದನ್ನು ಬಿಡಿಸಲು ಅನೇಕ ಮಾರ್ಗಗಳಿವೆ. ಈ ದಿವಸ ಸರ್ಕಾರ ನಿವೃತ್ತ ಅಧಿಕಾರಿಗಳಿಗೆ ಮಾಹೆಯಾನ 500 ರೂಪಾಯಿಗಳ ಪೆನ್ಷನ್ ವೇತನ ಕೊಡುತ್ತಿದೆ. ಇಷ್ಟೇಕೆ ಕೊಡಬೇಕು? ಸಮಾಜದಲ್ಲಿ

(ಶ್ರೀ ವೈ. ವೀರಪ್ಪ)

ವಿಪರೀತ ಏರುಪೇರುಗಳಿರುವಾಗ ಹೀಗೆ ಕೆಲವರಿಗೆ ಹೆಚ್ಚಿನ ಈ ಪೆನ್ಷನ್‌ಗಳನ್ನು ಕೊಟ್ಟುಕೊಂಡು ಹೋಗುತ್ತಿದ್ದರೆ ಯಾವತ್ತು ಈ ಏರುಪೇರುಗಳು ಹೋಗುವುದು? ಆ ಪೆನ್ಷನ್‌ದಾರರಾದರೋ ಗಾಲ್ಫ್ ಕ್ಲಬ್ ಇತ್ಯಾದಿಗಳಿಗೆ ಹೋಗಿ ಅಲ್ಲಿ ಕುಡಿತ ಇತ್ಯಾದಿಗಳಿಗಾಗಿ ಆ ಹಣವನ್ನು ಖರ್ಚುಮಾಡುತ್ತಿದ್ದಾರೆ. ದೇಶದಲ್ಲಿ ದುಡಿಯುತ್ತಿರುವ ನೌಕರರಿಗೆ ಹೊಟ್ಟೆ-ಬಟ್ಟೆಗೆಗತಿಯಿಲ್ಲದಿರುವಾಗ ನಿವೃತ್ತ ಅಧಿಕಾರಿಗಳಿಗೇಕೆ ಇವರು ತಿಂಗಳಿಗೆ 500 ರೂಪಾಯಿಗಳನ್ನು ಕೊಡಬೇಕು? ಸಮಾಜದಲ್ಲಿ ಒಂದು ಕಡೆ ಕೆಲವು ಜನ ದುಡ್ಡನ್ನು ಹೀಗೆ ಖರ್ಚುಮಾಡಬೇಕೆಂದು ದಾರಿಕಾಣದೆ ಇರುವಾಗ ಮತ್ತೊಂದು ಕಡೆ ಈ ಸಣ್ಣ ಪುಟ್ಟ ಸಂಪಾದನೆ ಇರತಕ್ಕ ಜನರ ಸಂಸಾರದಲ್ಲಿ 18-19 ಜನರು ಇದ್ದು ಅವರು ಅನ್ನ ಬಟ್ಟೆಗೂ ಕೂಡ ಸಾಲದೆ ಒದ್ದಾಡುತ್ತಿದ್ದಾರೆ. ಹಾಗೆ 00 ರೂಪಾಯಿಗಳ ಪೆನ್ಷನ್ ತೆಗೆದುಕೊಳ್ಳುವವರಿಗೆ ಇರುವ ಹಾಗೆ ಈ ಸಣ್ಣಪುಟ್ಟ ನೌಕರರ ಸಂಸಾರದಲ್ಲಿಯೂ ಜನರಿಲ್ಲವೇ? ಇವರಿಗೂ ಅವರಂತೆ ಹೆಂಡತಿ-ಮಕ್ಕಳುಗಳಿಲ್ಲವೇನು? ಇವರು ಹೇಗೆ ಈ ಅಲ್ಪ ವರಮಾನದಲ್ಲಿ ಜೀವನಮಾಡಬೇಕು? ಹೀಗೆಲ್ಲಾ ಆಗಬಾರದು. ಸರ್ಕಾರದವರು ಈ ದಿವಸ 500 ರೂಪಾಯಿಗಳ ಪೆನ್ಷನ್ ಪಡೆಯುತಕ್ಕವರೆಲ್ಲರೂ ಕಡ್ಡಾಯವಾಗಿ ತಮ್ಮ ಪೆನ್ಷನ್ ಮೊಬಲಗನ್ನು 200 ರೂಪಾಯಿಗಳಿಗೆ ಇಳಿಸಿಕೊಳ್ಳಬೇಕೆಂದು ಒಂದು ಮಸೂದೆಯನ್ನು ಈ ಸಭೆಯ ಮುಂದೆ ತರಲಿ. ಅದಕ್ಕೆ ನಾವೆಲ್ಲರೂ ಏಕಕಂಠದಿಂದ ಬೆಂಬಲ ನೀಡುತ್ತೇವೆ. ಇಂಥ ಮಸೂದೆಗೆ ಯಾರು ಒಪ್ಪುವುದಿಲ್ಲ? ಇಂಥ ಉಪಯುಕ್ತ ಕೆಲಸಗಳ ಕಡೆಗೆ ಸರ್ಕಾರ ತನ್ನ ಗಮನಕೊಡಬೇಕೇ ಹೊರತು ಯಾವುದೋ ಒಂದು "ಸರ್ಕಾರದ ಕೆಲಸ-ದೇವರ ಕೆಲಸ" ಎಂದು ಬರೆದಿರುವುದನ್ನು ಅಳಿಸತಕ್ಕ ವಿಚಾರಕ್ಕೆ ಅಷ್ಟಾಗಿ ಗಮನ ಕೊಡಬಾರದಾಗಿತ್ತು. ಈ ರೀತಿಯ ಒಳಕೋಪತಾಪಗಳಿಂದ ಒಬ್ಬರು ಮಾಡಿದ್ದನ್ನು ಮತ್ತೊಬ್ಬರು ಅಳಿಸಲು ಪ್ರಯತ್ನಪಟ್ಟಲ್ಲಿ ದೇಶಕ್ಕೆ ಏಳಿಗೆ ಇಲ್ಲ. ದೇಶದ ಏಳಿಗೆಗೆ ಹೆಚ್ಚಿನ ಗಮನ ಕೊಡಬೇಕಾದದ್ದು ಅಗತ್ಯ. ಒಂದೇ ಆಫೀಸಿನಲ್ಲಿ ಒಬ್ಬರ ಸಂಬಳ ಸಾರಿಗೆ ದಿಗಂತದ ಮಟ್ಟದಲ್ಲಿದ್ದು ಅದೇ ಕೆಲಸ ಮಾಡತಕ್ಕ ಮತ್ತೊಬ್ಬನಿಗೆ ತೀರಾ ಕೆಳಮಟ್ಟದ ಸಂಬಳವಿದ್ದರೆ ಆಡಳಿತದ ಕೆಲಸಕಾರ್ಯಗಳು ಸುಲಲಿತವಾಗಿ ನಡೆಯುವುದಿಲ್ಲ. ಅವರಲ್ಲಿ ಅಸಂತೋಷದ ಎಲ್ಲೆ ಮೀರಿ ಹೋಗುತ್ತದೆ. ತಾವು ಅವರಿಗೆ ಚಾಟಿ ಹೊಡೆತ ಕೊಟ್ಟರೆ ಕೆಲಸವೆಂದಿಗೂ ನೆಟ್ಟಗಾಗುವುದಿಲ್ಲ. ಅವರಿಗೆ ಸರ್ಕಾರ ಕಡ್ಡಾಯವಾಗಿ ಯಾವ ಯಾವ ಸೌಲಭ್ಯಗಳನ್ನು ನೀಡಬೇಕೋ ಅವುಗಳನ್ನು ನೀಡಲೇಬೇಕು. ಆಗಲೇ ಅವರು ಆತ್ಮಪೂರ್ವಕವಾಗಿ ಕೆಲಸ ಮಾಡಲು ಸಾಧ್ಯ. ಪ್ರಕೃತಿಯಲ್ಲಿ ಈ ಸೊಬಗು ಸೌಂದರ್ಯಗಳೆಲ್ಲಾ ಏಕರೂಪದಿಂದ ಮುಂದುವರಿಯಬೇಕಾಗಿದ್ದರೆ ಯಾರೊಬ್ಬರಿಗೂ ನೋವಿರಬಾರದು; ಸರ್ವರಿಗೂ ಒಂದೇ ರೀತಿಯ ಸೌಕರ್ಯಗಳು ಲಭಿಸುವಂತಿದ್ದರೆ ಆ ದೇಶ ಒಂದು ರೀತಿಯಲ್ಲಿ ಮುಂದುವರಿಯಲು ಅವಕಾಶವಿರುತ್ತದೆ. ಹಾಗಿಲ್ಲದೆ ಏನೋ ನಮ್ಮ ಕೈಲಿ ಒಂದು ಅಧಿಕಾರವಿದೆ ಎನ್ನುವ ಮದದಲ್ಲಿ ಕೆಳಮಟ್ಟದ ನೌಕರರ ಕಷ್ಟ ಸುಖಗಳೇನೆಂಬುದನ್ನು ಗಮನಿಸದೆ ಆ ಸಣ್ಣ ಪುಟ್ಟ ಜವಾನರುಗಳಿಗೆ ಅಸೆಂಬ್ಲಿ ನಾಳೆ ಬೆಳಗ್ಗೆ ಎಂಟು ಘಂಟೆಗೆ ನಡೆಯುತ್ತದೆ, ನೀವೆಲ್ಲ ಬೆಳಗಿನ ಆರು ಘಂಟೆಗೆ ಇಲ್ಲಿ ಸಿದ್ಧರಾಗಿರಬೇಕೆಂದು ಹೇಳಿದರೆ ಅವನೇನು ಮಾಡಬೇಕು? ಜೇಬಿನಲ್ಲಿ ಬಸ್ಸಿಗೆ ಕೊಡಲು ಅರ್ಧಾಣೆ ದುಡ್ಡಿರುವುದಿಲ್ಲ. ಅವನು ಬೆಳಗಿನ ಆರು ಘಂಟೆಗೆ ಕಛೇರಿಗೆ ಬಂದರೆ ಪುನಃ ಅವನು ಮನೆಗೆ ಹೋಗುವುದು ರಾತ್ರಿ 10 ಘಂಟೆಗೊ ಅಥವಾ 12 ಘಂಟೆಗೋ ಹೋಗುತ್ತಾನೆ. 60 ಕೋಟಿ ರೂಪಾಯಿಗಳನ್ನು ವೆಚ್ಚಮಾಡುತ್ತಿರುವ ಸರ್ಕಾರ ಈ ಅಸೆಂಬ್ಲಿ ಆಫೀಸಿನ ಕೆಳದರ್ಜೆ ನೌಕರರಿಗಾಗಿ ಇಂಥ ಅಧಿವೇಶನ ಕಾಲದಲ್ಲಿ ಖರ್ಚು ಮಾಡುತ್ತಿದ್ದಂಥ ಕೆಲವಾರು ರೂಪಾಯಿಗಳನ್ನೂ ಸಹ ಇತ್ತೀಚೆಗೆ ನಿಲ್ಲಿಸಿಬಿಟ್ಟಿದ್ದಾರೆಂದು ಕೇಳಿದೆನು. ಅತನು ಹೊಟ್ಟೆಗೇನು ಮಾಡಬೇಕು? ಬೆಳಗಿನ ಆರು ಘಂಟೆಗೆ ಬಂದವನು ರಾತ್ರಿ 12 ಘಂಟೆ ತನಕ ಡವಾಲಿ ಹಾಕಿ ಕೆಲಸಮಾಡತಕ್ಕವನಿಗೆ ಸರಿಯಾಗಿ ಹೊಟ್ಟೆಗೆ ಅನ್ನ ಕೊಡಬೇಡವೇ? ಸರ್ಕಾರ ಹೊಟ್ಟೆಗೆ ಸರಿಯಾಗಿ ತಿಂಡಿ ಹಾಕಲಿ—ಅನಂತರ ಅವರಿಂದ ಒದ್ದು ಕೆಲಸ ತೆಗೆದುಕೊಳ್ಳಲಿ, ಇದಕ್ಕೆ ಯಾರೂ ಬೇಡವೆನ್ನುವುದಿಲ್ಲ. ಸರ್ಕಾರಿ ಕಾರ್ಯಕಲಾಪಗಳು ಸುಲಲಿತವಾಗಿ ನಡೆಯಬೇಕೆಂಬ ದೃಷ್ಟಿಯಿಂದ, ಪ್ರಜೆಗಳ ಹಿತದೃಷ್ಟಿಯಿಂದ, ರಾಷ್ಟ್ರಾಭ್ಯುದಯದ ದೃಷ್ಟಿಯಿಂದ ಪ್ರತಿಯೊಬ್ಬರಿಗೂ ಹೊಟ್ಟೆಗೂ-ಬಟ್ಟೆಗೂ ಸರಿಯಾಗಿ ಕೊಡಬೇಕಾದದ್ದು ಆಯಾ ದೇಶದ ಸರ್ಕಾರಗಳ ಆದ್ಯ ಕರ್ತವ್ಯ. ಈ ದಿವಸ ಕಾಂಗ್ರೆಸ್ ಪಕ್ಷ ಮೆಜಾರ್ಟಿಯಲ್ಲಿದೆ. ಆದ್ದರಿಂದ ಆಡಳಿತ ಒಂದು ರೀತಿ ನಡೆಯುತ್ತಿದೆ. ಆದರೆ ದೇಶಕ್ಕಾಗಿ ಕೆಲಸ ಮಾಡತಕ್ಕವರು ತಮ್ಮ ಆತ್ಮಪೂರ್ವಕವಾಗಿ ಕೆಲಸ ಮಾಡಬೇಕು .....

ಹೀಗೆ ನಾವು ವಿರೋಧಪಕ್ಷದಲ್ಲಿದ್ದೇವೆಂದು ನಾವು ಟೀಕೆ ಮಾಡಬೇಕು ಎಂದು ಹೇಳುತ್ತಿಲ್ಲ. ಸಮಾಜದ ದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಮತ್ತು ಪ್ರತಿಯೊಬ್ಬರ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆಂದು ಪ್ರತಿಯೊಬ್ಬರೂ ಭಾವಿಸಬೇಕು. ಇವೊತ್ತಿನ ದಿವಸ ನಾನು ಹೇಳಿರತಕ್ಕ ವಿಷಯಗಳ ಬಗ್ಗೆ ಮಾನ್ಯತೆ ಕೊಡಬೇಕೆಂದು ಕೋರುತ್ತಿದ್ದೇನೆ. ಅಲ್ಲದೆ ನನ್ನ ಮಾನ್ಯ ಮಿತ್ರರನೇಕರು ಹೇಳಿದಂತೆ, ನನ್ನ ಕಾಂಗ್ರೆಸ್ಸಿನಲ್ಲಿರುವ ಮಿತ್ರರು ಹೇಳಿದಂತೆ, ಅವರು ಹೇಳಿರತಕ್ಕ ಪ್ರತಿಯೊಂದು ಅಂಶವನ್ನೂ ಪರಿಶೀಲನೆಗೆ ತೆಗೆದುಕೊಂಡು ಒಂದು ಕಮಿಟಿಯನ್ನು ನೇಮಕಮಾಡಿ ಇವನ್ನು ಸರಿಪಡಿಸಬೇಕಾದುದು ಅಗತ್ಯ. ಈ ಸಂದರ್ಭದಲ್ಲಿ ಒಂದು ವಿಚಾರ ಜ್ಞಾಪಕಕ್ಕೆ ಬರುತ್ತದೆ.

ಶ್ರೀ ಎನ್. ರಾಚಯ್ಯ (ಹುಣಸೂರು).—ಮಾನ್ಯ ಸ್ನೇಹಿತರು ಹೇಳುತ್ತ "ಕೆಲಸವನ್ನು ನಾವು ಒದ್ದು ತೆಗೆದುಕೊಳ್ಳಬೇಕು" ಎಂದು ಹೇಳಿದರು. ಈ "ಒದ್ದು" ಎನ್ನುವ ಶಬ್ದ ಪಾರ್ಲಿಮೆಂಟರಿಯಲ್ಲ. ಇಂತಹುದನ್ನು ನಾವು 'ಅಲೋ' ಮಾಡುವುದು "out of the way" ಎಂದಾಗುತ್ತದೆ. ಆದಕಾರಣ ಈ "ಒದ್ದು" ಎಂಬ ಶಬ್ದವನ್ನು ವಾಪಸು ತೆಗೆದುಕೊಳ್ಳಬೇಕೆಂದು ಅರಿಕೆ ಮಾಡುತ್ತೇನೆ.

ಶ್ರೀ ವೈ. ವೀರಪ್ಪ.—ನಾನು ಹೇಳಿರತಕ್ಕ ಮಾತು ಅಂತಹ ನೋವನ್ನುಂಟುಮಾಡುವುದಾದರೆ ನಾನು ವಾಪಸು ತೆಗೆದುಕೊಳ್ಳುವುದರಲ್ಲಿ ನನ್ನ ಅಭ್ಯಂತರವಿಲ್ಲ. ಅದೇನೂ ತಪ್ಪರ್ಥ ಬರುವಂತಹುದಲ್ಲ. ನನ್ನ ಉದ್ದೇಶವೇನು ಎನ್ನುವುದನ್ನು ತಾವು ನಿಜವಾಗಿಯೂ ಪರಿಶೀಲಿಸಿದರೆ ನಮ್ಮ ದೇಶ, ನಮ್ಮ ರಾಷ್ಟ್ರ ಎಂದು ಭಾವಿಸಿ ನಾವೆಲ್ಲರೂ ಕೆಲಸ ಮಾಡಬೇಕು ಎಂದು ಆ ತರಹದಲ್ಲಿ ಆಲೋಚಿಸಬೇಕಾಗಿದೆ. ಅವರಿಂದ ಹೆಚ್ಚಾಗಿ ಕೆಲಸ ತೆಗೆದುಕೊಳ್ಳಬೇಕಾದರೆ ಅವರ ಹೊಟ್ಟೆ ಮೇಲೆ ತಣ್ಣೀರು ಹಾಕಬೇಕು ಎನ್ನುವ ಉದ್ದೇಶದಿಂದ ಹೇಳುತ್ತಿಲ್ಲ. ನಮ್ಮ ಮಾನ್ಯ ಮಿತ್ರರು ಈ ಸಭೆಯ ಗೌರವಕ್ಕೆ ಚ್ಯುತಿ ಬರುತ್ತದೆಂದು ಹೇಳುವುದು ಉಚಿತ

ವಲ್ಲವೆಂದೆನಿಸಿದರೆ ಇದನ್ನು ವಾಪಸು ತೆಗೆದುಕೊಳ್ಳುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದ್ದರಿಂದ ಇದನ್ನು ನಾನು ಹೇಳುತ್ತಿರುವುದು, ಈ ಪ್ರಶ್ನೆಯನ್ನು ಮೊದಲು ತೆಗೆದುಕೊಳ್ಳಿ, ಇದಕ್ಕೆ ಹೆಚ್ಚಾಗಿ ಪ್ರಾಶಸ್ತ್ಯ ಕೊಡಿ, ಮತ್ತು ಆ ರೀತಿಯಾದ ಸಮಾಜವನ್ನು ರಚನೆ ಮಾಡುವ ರೀತಿಯಲ್ಲಿ ನಾವೆಲ್ಲರೂ ಆಲೋಚನೆಮಾಡಬೇಕು. ಹೈಡ್ರೋಜನ್ ಬಾಂಬುಗಳೇ ಮೊದಲಾದುವು ಆಗುತ್ತಿರುವ ಈ ವಿಜ್ಞಾನ ಯುಗದಲ್ಲಿ ಇದೊಂದು ಸಣ್ಣ ಸಮಸ್ಯೆ. ಇದೇನೂ ಅಂತಹ ದೊಡ್ಡದಲ್ಲ, ಆದರೆ ನಮ್ಮಲ್ಲಿ ಮಿತವ್ಯಯ ಎಂದು ಹೇಳುತ್ತಾರೆಯೋ ವಿನಾ Planned Economy ಇಲ್ಲ. ಆದುದರಿಂದ ಇಂದು ನಾವು ಮತ್ತು ನೀವು ಎಲ್ಲರೂ ಸೇರಿ ಪರಿಶೀಲನೆಮಾಡೋಣ. ನೀವು ನಮ್ಮಲ್ಲಿ ಸಹಕಾರ ಕೊಡಿ ಎಂದು ಕೇಳಿದರೆ ನಾವು ಕೊಡುವುದಕ್ಕೆ ತಯಾರಾಗಿದ್ದೇವೆ. ಪ್ರತಿಯೊಬ್ಬರೂ ಸೇರಿಕೊಂಡು ಈ ಸಮಾಜವನ್ನು ಉದ್ಧಾರಮಾಡಬೇಕಾಗಿದೆ. ನಿಜವಾಗಿಯೂ ಇದೇನೂ ಅಂತಹ ದೊಡ್ಡ ಪ್ರಶ್ನೆಯಲ್ಲ. ಆದುದರಿಂದ ಇಂತಹ ಪ್ರಮುಖವಾದ ಪ್ರಶ್ನೆಯನ್ನು ತೆಗೆದುಕೊಂಡು ಪರಿಶೀಲನೆಮಾಡಲು ಒಂದು ಕಮಿಟಿಯನ್ನು ರಚನೆಮಾಡಿ ಅವರಿಗೆ ಪರಿಹಾರ ಕೊಡುವುದಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕಾದುದು ಅಗತ್ಯ. ಸುಮ್ಮನೆ ಟೀಕೆ ಟಿಪ್ಪಣಿಗಳನ್ನು ಯಾರೂ ಮಾಡಬಾರದು. ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕಾದುದು ಅಗತ್ಯ. ನನ್ನ ದೃಷ್ಟಿಯಲ್ಲಿ ಮತ್ತು ನನ್ನ ಸ್ನೇಹಿತರ ದೃಷ್ಟಿಯಲ್ಲಿ ಇದೇನೂ ಮನುಷ್ಯರಿಂದ ಮಾಡದಿರುವಂತಹ ಅಗಾಧವಾದ ಕೆಲಸವೇನಲ್ಲ. ಇದೊಂದು ಸಣ್ಣ ಸಮಸ್ಯೆ. ಇದನ್ನು ಮನುಷ್ಯರಾಗಿರುವ ನಾವುಗಳು ಮಾಡಬಹುದು ಈ ಸಮಸ್ಯೆಯನ್ನು ಪರಿಹರಿಸಲು ಆರು ತಿಂಗಳನ್ನೋ ಅಥವಾ ಒಂದು ವರ್ಷವನ್ನೋ ಕಾಲಾವಕಾಶವನ್ನಾಗಿ ತೆಗೆದುಕೊಳ್ಳೋಣ. ಹಾಗೆ ನಾವು ತೆಗೆದುಕೊಂಡು ಪರಿಶೀಲಿಸಿ ಇದನ್ನು ಎಷ್ಟರ ಮಟ್ಟಿಗೆ ಕಾರ್ಯಗತ ಮಾಡಬಹುದು ಎಂಬುದನ್ನು ಪರಿಶೀಲಿಸಬೇಕಾದುದು ಅತ್ಯಗತ್ಯ. ಈಗಲಾದರೂ ಈ ಕೆಲಸವು ಬೇಗ ಈಡೇರಿಸಲು ಯೋಚನೆಮಾಡಿ, ಈ ರೀತಿಯಾದ ಒಂದು ಕಮಿಟಿಯನ್ನು ರಚನೆ ಮಾಡಬೇಕಾದದ್ದು ಅಗತ್ಯ. ಆದಷ್ಟು ಬೇಗ ಕಮಿಟಿಯನ್ನು ರಚನೆ ಮಾಡಿ ಸರಕಾರದ ಕೆಲಸ ಸುಲಲಿತವಾಗುತ್ತದೆ. ಸುಲಲಿತವಾದ ಸಮಾಜವನ್ನು ಕಟ್ಟುವುದಕ್ಕೆ ನೀವೂ ಮತ್ತು ನಾವೂ ಸೇರಿಕೊಂಡು ಕೆಲಸಮಾಡೋಣವೆಂದು ಇವತ್ತಿನ ದಿವಸ ಶಪಥಮಾಡಿ. ಹಾಗೆ ಮಾಡುತ್ತೀರೆಂದು ನಂಬಿ ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು ನನಗೆ, ನನ್ನ ದರ್ಜೆಗೆ ತಕ್ಕಂತೆ, ನನ್ನ ಮಟ್ಟಿಗೆ ನಾಲ್ಕು ಮಾತುಗಳನ್ನಾಡಲು ಈ ಸಭೆಯಲ್ಲಿ ಇಷ್ಟು ಅವಕಾಶಕೊಟ್ಟಿದ್ದಕ್ಕಾಗಿ ನನ್ನ ಧನ್ಯವಾದಗಳನ್ನರ್ಪಿಸಿ ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

*Sri G. ANNA RAO (Afzalpur).—With reference to the resolution tabled by one of our Hon'ble friends, I should like to say that there is no doubt that there is a yawning chasm between the salaries of the Central Government services and the State services; be they low or high, there is this gap. Whether this gap should be covered, this unevenness should be streamlined, this yawning chasm should be closed, is a question which needs great consideration at this stage. I do not however see any propriety in constituting a committee, either of this House or by the Government, because I do not see how it would serve any useful purpose if such a committee is constituted, in view of the fact that the Government at every stage pleads financial stringency and financial difficulties.

Our budget, as we have seen, contains two pockets—one the revenue side and the other the capital side, *i.e.*, the capital budget and the revenue budget. If I may liken it to the two pockets of our coat, the one has a hole in it, *i.e.*, the capital side of the pocket has a hole in it and the revenue budget covers the salaries of the Government servants. Now there are two facets of the same question: whether the tall poppies who are getting high salaries in the Central Government should have their salaries sliced, or trimmed or whether the salaries of the low-paid or the salaries of the State services should be upgraded. These are two sides of the same question.

Sir, the income of the State Government is after all limited, because the elastic sources of revenue have been taken away by the Centre and whatever remains are the inelastic sources. Therefore, the State Government cannot provide the wherewithal to pay their Government servants at Central rates and upgrade the salaries. But that does not mean that those Government servants who are paid low should not be given any rise in salaries. At the same time I feel that there should be some co-ordination between the Central salaries and the State salaries. If the Central Government upgrades the salaries of their Government servants they should also consider the salary levels of the State services. It is argued by many of our friends, particularly Sri Narasimhan, that there is discontent among the services because they are not paid adequately. This argument is no doubt good, but what are our resources and what is our country's economy? If

(SRI G. ANNA RAO)

I may say so, our country is living in a bullock-cart economy. Our techniques of production are not adequate to such an extent that our people could get more salaries or that our Governments can earn more income. If I give the per capita income of India, I think, I will do justice to the cause. We are getting income only to the extent of Rs. 262 per head *per annum*. If we compare our country with other countries where it is said that they are giving fat salaries to their Government servants, it will be seen that in Japan the *per capita* income is 978; in Newzealand it is 5,296; in Australia it is 4,694: in U.K. it is 9,410; in Canada it is 6,516; in France it is 3,931; in Sweden it is 4,912; in Denmark it is 3,654 and in Switzerland it is 4,895. So, if we compare our figures with the figures of other countries, we will find in what way we are lacking and what a low figure our *per capita* income is. It is so meagre that we cannot get our food, clothing and housing. The question before the country is three F's, namely, food, finance and foreign exchange. These are the necessities now. So, if at this stage a committee is constituted for this purpose, wherefrom are we to bring the wherewithall? I do not plead that the salaries of the lower paid servants should not be enhanced, but the salaries of the tall poppies should be slashed, whether they be of the Central Government or of the State Government. The maximum salary or the ceiling that we can fix is Rs. 1,000. As Sri Channabasappa pointed out just now, the officers of the Central Government such as I.C.S, I.P.S. and I.A.S. are getting more salaries and having regard to our resources and income, can we afford to pay such fat salaries? That is the question before us. Now, we are all anxious to develop our resoures. We are all anxious to produce more, we are all anxious to raise the income of our people and so we have to divert whatever resources we have got to the production side. If there is any necessity now, it is to raise the salaries of the low-paid and not the highly-paid servants. So, the question arises as to what kind of Government servants should we have. The designation 'Indian Administrative Services' is not a proper designation. We must change the designation. Even at this stage we call our Collectors as I.A.S. Collectors. Their duties are not circumscribed only to looking after law and order, but they are development officers also. Therefore, the supreme necessity at this stage is to change the designation of these officers so that they may fit in with the existing structure of our society and the development activities of this country. I would even plead not only with the State Government but, through this House, with the Central Government to completely change the designation of I.A.S. officers and I would suggest that their designation should be changed into National Development Officers. At the State level, their designation should be State Development Officers. Even the designations of the Collectors and the Deputy Commissioners should be changed altogether and the Collector should be designated as District Development Officer because his functions are only to look after the development activities and not the law and order situation and such other activities. Hence, at this stage it is very necessary that we must direct our attention to these matters. The country is suffering from deficiency of food and other resources and that is why we are seeking loans from foreign countries. Even our budget is deficit. Under the circumstances, if at all we constitute a committee, what will that committee do? We have already constituted many committees and the pay scales and service conditions have been gone through by many of them. I would therefore plead with the Government that the salaries of the low-paid Government servants should be enhanced to the extent possible, but the salaries of persons who are getting more should not be touched. The ceiling should be fixed by the Government so that we may upgrade the salaries of the low-paid servants and downgrade, if possible, the salaries of the highly-paid servants. If we

take this attitude, I think we will be bringing about that socialistic pattern of society which envisages the downgrading of the income of the highly-placed people and the levelling up of the income of the lowly-circumstanced people.

Then, I think, Sir, this resolution would not serve any purpose and this Committee also would not serve any purpose, if at all it is constituted by the State Government. It involves the salaries of Central Government employees also. Until the Centre takes the initiative and brings in some measure of uniformity not only in the Central services but also in the State services and thereby also provides some money to the State Governments to upgrade the salaries of low-paid officers, this question will not be solved. So it lies with the Centre and not with the State Governments to take up this matter. The only solution is to appeal to the Centre to look in to this matter. A committee cannot help in raising the salary of low-paid officials because the State Government alone cannot do anything.

Sri G. VENKATAI GOWDA (Palaiyam).—I want to know whether it is not within the power of the State Government to enhance the salary of the State Government servants?

Sri G. ANNA RAO.—To what category of servants does this resolution apply? Suppose it is limited to class IV servants, I can imagine there is something in it. But it cannot make any distinction between low—paid and highly paid officials. I do not see any reason for setting up a committee for examining these things *de novo*. There is no doubt there are some lower paid servants and low paid clerks. But where can we have the wherewithal to provide money to these low—paid people? If there is sufficient income, if the Government have got some scope in this Budget, then let us divert everything for upgrading the salaries of these people. When we spend so much amount in building up assets and or development activities, at this stage if we fritter away amounts in raising the salary of low—paid Government servants, then we will suffer in developmental activities. We will not develop anything. Therefore our leaders are advising us, not only the Government servants, but also the general public that we should learn to laugh even on empty stomachs. Then alone, the nation can advance. Take the case of countries which have advanced so far. Take the instance of China or even Russia. We are fairly satisfied with what they have done. They have done their level best to put in all their energy in developing their country. Therefore my only suggestion is that if we can reduce the salaries of highly paid officers, so far so good; if we can afford to increase the salaries of low-paid officers, so far so good. Therefore, if a committee is constituted, it cannot serve any purpose. At the most, we can appeal to the Government to do some justice to the low—paid servants.

Mr. DEPUTY SPEAKER.—Discussion on this resolution will continue on the next non-official day. The House will now rise and meet tomorrow at 1 P.M.

The House adjourned at Six of the Clock to meet again at One of the Clock on Friday, the 27th September 1957.

WD 4117—GPB—900—25-3-58